

ಕಲ್ಯಾಣ ಕಿರಣ

ನವೆಂಬರ್ 2007

ಬೆಲೆ-6.00







|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-37 | ಬಸವ ಶಕೆ-874 | ಆಜೀವ ಸದಸ್ಯತ್ವ 600 ರೂ.
ಸಂಚಿಕೆ-11 | ನವೆಂಬರ್-2007 | ವಾರ್ಷಿಕ ಚಂದಾ 60/- ರೂ.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ಹುಟ್ಟು ಹೋರಾಟಗಾರರು, ಶಿಸ್ತಿನ ಸಿಪಾಯಿಯೂ ಆದ

ಸನ್ಮಾನ್ಯ ಶ್ರೀ ಬಿ.ಎಸ್.ಯಡೆಯೂರಪ್ಪನವರು

ಸುವರ್ಣ ಮಹೋತ್ಸವ ಆಚರಿಸುತ್ತಿರುವ
ಕರ್ನಾಟಕ ರಾಜ್ಯದ
26ನೆಯ ಮುಖ್ಯ ಮಂತ್ರಿಯಾಗಿ
ಶಿವ (ಸೋಮ)ವಾರ, ದಿ.12-11-2007ರಂದು
ಪ್ರಮಾಣ ವಚನ ಸ್ವೀಕರಿಸಿರುವುದು ಜಾತಿ ಮತ ಪಂಥ
ಧರ್ಮ ಪಕ್ಷ ಭೇದವಿಲ್ಲದೆ ಎಲ್ಲರಿಗೂ ಸಂತೋಷವನ್ನು
ಉಂಟು ಮಾಡಿದೆ. ಉಪಮುಖ್ಯಮಂತ್ರಿಗಳಾಗಿ ಈಗಾಗಲೇ
ದಕ್ಷ ಆಡಳಿತಗಾರರೆಂಬ ಕೀರ್ತಿಗೆ ಪಾತ್ರರಾಗಿರುವ
ಶರಣ.ಬಿ.ಎಸ್.ಯಡೆಯೂರಪ್ಪನವರು ಆಯುರಾರೋಗ್ಯ
ಭಾಗ್ಯ ಸಕಲ ಸಂಪದವನ್ನು ಹೊಂದಿ ಎಲ್ಲರ ನಿರೀಕ್ಷೆಯಂತೆ
ಸಮೃದ್ಧ ಸಂತೃಪ್ತ ಕರ್ನಾಟಕವನ್ನು ಕಟ್ಟಲಿ
ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ
ಕೂಡಲ ಸಂಗಮ

ಕಿರಣಗನ್ನಡಿ

ಜೈ ಜೈ ..... ಚನ್ನಬಸವಣ್ಣ

ಜೈ ಜೈ ಜೈ ಶರಣ ಚನ್ನಬಸವಣ್ಣ
ಜಯವೆಂದು ಬೆಳಗುವೆ ಮಂಗಳಾರತಿಯ

ಬಾಳೊಂದು ನದಿಯು ಹರಿಯುತಿದೆ ಗುರಿಗೆ
ಜನನ ಮರಣದ ಲೀಲೆ ಶಿವನ ಕೈಯೊಳಗೆ
ಭಕ್ತಿ - ಜ್ಞಾನವೆಂಬೆರಡು ದಂಡೆಯ ನಡುವೆ
ಯುಕ್ತಿಯಿಂ ಹರಿದರೆ ಮುಕ್ತಿಪದ ಕಡೆಗೆ ॥ ಜೈ ॥

ಬಸವ ಧರ್ಮದ ಕುಡಿಯೆ ವಿಶ್ವಧರ್ಮದ ಸೊಡರೆ
ದೆಸೆದೆಸೆಗೆ ಪಸರಿಸಿತು ನಿನ್ನ ಮಾತಿನ ಸಿರಿಯು
ಮೊಳಗೆ ಧರ್ಮದ ಕಹಳೆ ಬೆಳಗೆ ಜ್ಞಾನದ ರವಿಯು
ಹೊಳೆಯಾಗಿ ಹರಿದು ನೀ ಇಳೆಯ ತಣಿಸಿದೆಯಾ ॥ ಜೈ ॥

ಮೃಣ್ಮಯದ ಬನ್ನವ ಗೆಲಿದೆ ಶಿವಕಂದಾ
ಚಿನ್ಮಯ ಚಿಜ್ಯೋತಿಯಾದೆ ಮಕರಂದ
ಕರಣ ಕಾನನದೊಳಗೆ ವಿರತಿಯ ವಿಭುವಾಗಿ
ಶರಣ ಕೋಗಿಲೆಯಾಗಿ ವಚನ ಬನದಲಿ ಹಾಡ್ದೆ ॥ ಜೈ ॥

- ಮಾತಾಜಿ

ಚನ್ನಬಸವಣ್ಣನವರ ಜಯಂತಿ
ದೀಪಾವಳಿ ಪಾಡ್ಯ.
10-1-07ರಂದು
ಕಲ್ಯಾಣ ಕಿರಣ ಓದುಗರಿಗೆ
ಶುಭಾಶಯಗಳು.

KALYANA KIRANA-Reg No.19988/70: Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10, Printed By Padmashree Printers, Rajajinagar, B'lore

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ ಎರಡನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಇಪ್ಪತ್ತೊಂದನೆಯ

ಶರಣ ಮೇಳ

2008ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಧರ್ಮಕರ್ತ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತೊಂದನೆಯ ಶರಣ ಮೇಳವು 2008ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚು ಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮ ಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ

ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ಪ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನ[illegible] ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದ[illegible] [illegible]ಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾ[illegible] -- ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸ[illegible] [illegible]ನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-23325335/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂ : 08351-268038/268007/268338

ಕರ್ನಾಟಕದ ರಾಜಕೀಯ ಸುಖಾಂತ್ಯ

ಶ್ರೀ ಬಿ.ಎಸ್.ಯಡೆಯೂರಪ್ಪನವರಿಗೆ ಅಭಿನಂದನೆ

ಮಹಾಭಾರತವನ್ನು ನಾವೇನು ವೈದಿಕ ಹಿಂದುಗಳಂತೆ ಪಠಣ ಮಾನ್ಯ ಪವಿತ್ರ ಗ್ರಂಥವೆಂದು ಭಾವಿಸುವುದಿಲ್ಲವಾದರೂ ಜನಜೀವನದ ನಿಜ ಚಿತ್ರಣ ಕೊಡುವ ಕಾವ್ಯವದು ಎಂದು ಹೇಳಬಹುದು. ಮಾನವ ಜೀವನದ ರಾಗ ದ್ವೇಷ, ಕಾಮಕ್ರೋಧ, ಲೋಭ -ಮೋಹ, ಮದಮತ್ಸರಗಳು ಹೇಗೆ ನೈತಿಕತೆಯನ್ನು ಬಲಿ ತೆಗೆದುಕೊಳ್ಳುತ್ತವೆ ಎಂಬುದನ್ನು ಮಹಾಭಾರತವು ಚಿತ್ರಿಸುತ್ತದೆ.

ಕರ್ನಾಟಕದಲ್ಲಿ ಸೆಪ್ಟಂಬರ್ ಮಧ್ಯಭಾಗದಿಂದ ಆರಂಭವಾದ ರಾಜಕೀಯ ಮಹಾಭಾರತಕ್ಕೂ ಅಂದಿನ ಮಹಾಭಾರತಕ್ಕೂ ಬಹಳಷ್ಟು ಹೋಲಿಕೆ ಇರುವುದರಿಂದ ಆ ಮಹಾಭಾರತ ಸಾರ್ವಕಾಲಿಕ ಕಥೆ ಎಂದು ಹೇಳಲು ಹಿಂಜರಿಯ ಬೇಕಾಗಿಲ್ಲ.

1. ಧೃತ ರಾಷ್ಟ್ರ - ಶ್ರೀ ಹೆಚ್.ಡಿ.ದೇವೇಗೌಡ

ಅಂದಿನ ಧೃತರಾಷ್ಟ್ರ ಮಕ್ಕಳಾದ ಕೌರವರು ಮಾಡುತ್ತಿದ್ದ ಅನ್ಯಾಯ -ಅಕ್ರಮಗಳನ್ನೆಲ್ಲ "ನೋಡುತ್ತ" ಯಾವುದೊಂದು ಬುದ್ಧಿಯನ್ನೂ ಹೇಳದೆ ಹೋದರೆ, ಇಂದಿನ ಧೃತರಾಷ್ಟ್ರ ಶ್ರೀ ದೇವೇಗೌಡರು ಮೌನವಾಗಿ ನೋಡುವುದತ್ತಲಿರಲಿ, ಆ ಧೃತರಾಷ್ಟ್ರನಿಗಿಂತಲೂ ಹತ್ತು ಹೆಜ್ಜೆ ಮುಂದೆ ಹೋಗಿ ಮಾಡಬಾರದ ಕೆಲಸಗಳನ್ನು, ಕಪಟ ತಂತ್ರಗಳನ್ನು ಪ್ರಯೋಗಿಸಿ ಇಡೀ ರಾಷ್ಟ್ರದಲ್ಲಿ ಕರ್ನಾಟಕ ಕೆಟ್ಟದಾಗಿ ಚಿತ್ರಣಗೊಳ್ಳುವಂತೆ ಮಾಡಿದರು. ಅವರು ಪ್ರಧಾನಿಯಾದಾಗಲೂ ಅಷ್ಟೆ ಪ್ರಧಾನಿಯಾದ ರೀತಿ ಗೌರವಯುತವಾಗಿ ಹೆಮ್ಮೆಯಿಂದ ಹೇಳಿಕೊಳ್ಳುವಂತೆ ಏನೂ ಇರಲಿಲ್ಲ. ಭಾರಿ ಗಟ್ಟಿ ಹೃದಯದ ಕುಳ. ದಯೆ - ದಾಕ್ಷಿಣ್ಯ-ಋಣಭಾವವಿಲ್ಲದೆ ಯಾರನ್ನು ಬೇಕಾದರೂ ಹತ್ತಿಕ್ಕಿ, ತುಳಿದು ಸಾಗುವ ಪ್ರವೃತ್ತಿ. ಅವರಿಗೆ ಕಣ್ಣಿಗೆ ಕಾಣುವುದು ತಮ್ಮ ಮಕ್ಕಳು ಮಾತ್ರ. ಅವರ ಹಿತಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧರು. ಇದ್ದುದರಲ್ಲಿ ಶ್ರೀ ಕುಮಾರ ಸ್ವಾಮಿಯವರು ಸಂವೇದನಾ ಶೀಲ ವ್ಯಕ್ತಿ, ತಂದೆ ಗಿಂತ ಹೆಚ್ಚು ಚಿಂತನಶೀಲರು. ಅಂತರಾತ್ಮಕ್ಕೆ ಬೆಲೆ ಕೊಡುವವರು ಎಂದು ಕರ್ನಾಟಕದ ಸಮಸ್ತ ಜನ ನಂಬಿದ್ದರು. ಆದರೆ ತಂದೆಯ ಜೊತೆ ಸೇರಿ ಅವರು ಪ್ರದರ್ಶಿಸಿದ ನಾಟಕ ಜನತೆಗೆ ಜಿಗುಪ್ಸೆ ತರಿಸಿತು. ಅವರು ಸಮ್ಮಿಶ್ರ ಸರ್ಕಾರವನ್ನು ಬಿಜೆಪಿ ಜೊತೆ ಸೇರಿ ರಚಿಸುವಾಗ ಅಪ್ಪನ ಮಾತು ಕೇಳದಿದ್ದ ಮಗನಿಗೆ ಅಧಿಕಾರ ಹಸ್ತಾಂತರ ಮಾಡುವ ಸಮಯ ಬಂದಾಗ ಮುಖ್ಯಮಂತ್ರಿ ಪದವಿಯ ಅಧಿಕಾರ ಹಸ್ತಾಂತರ ಬೇಡವೆಂದ ಅಪ್ಪನ ಮಾತೇ ವೇದವಾಕ್ಯವಾಯಿತು.

ರಾಜಕೀಯವು ಇಂದು ತೀರಾ ಹೊಲಸಾಗಿದೆ ಎಂಬುದು ದೃಢೀಕೃತ ಸತ್ಯವಾಗಿದ್ದರೂ, ಕನಿಷ್ಠತಮ ನೈತಿಕತೆಯಾದರೂ ಬೇಕೆಂದು ಜನ ಸಾಮಾನ್ಯರು ನಿರೀಕ್ಷಿಸುವುದು ಬಹಳ ಸಹಜ. ಶ್ರೀ ದೇವೇಗೌಡರು ಕನಿಷ್ಠ ರಾಜಕೀಯ ನೈತಿಕತೆಯನ್ನು, ನಾಚಿಕೆಯನ್ನು ತೋರದಿರುವುದು ಜಿಗುಪ್ಸೆ ತರಿಸುವ ಸಂಗತಿ. (ನನಗನಿಸುತ್ತದೆ ಒಂದು ವೇಳೆ ಪಾಕಿಸ್ತಾನದಂತೆ ನಮ್ಮ ದೇಶದಲ್ಲಿ ಅವಕಾಶ ಸಿಕ್ಕರೆ ಸನ್ಮಾನ್ಯ ದೇವೇಗೌಡರು ಎಮರ್ಜೆನ್ಸಿ ಸಾರಿ, ತಮ್ಮ ಸುಪುತ್ರರಲ್ಲಿ ಶ್ರೀ ಕುಮಾರ ಸ್ವಾಮಿಯವರನ್ನು ಪ್ರಧಾನಿಯನ್ನಾಗಿ, ಶ್ರೀ ರೇವಣ್ಣನವರನ್ನು ಪ್ರಧಾನ ದಂಡನಾಯಕರನ್ನಾಗಿ ಮಾಡದೆ ಬಿಡಲಿಕ್ಕಿಲ್ಲ. ಅಂಥ ಪುತ್ರ ಮೋಹ!)

2. ಮಹಾಭಾರತದ ಮಹತ್ವಪೂರ್ಣ ಕಪಟ ಪಾತ್ರಧಾರಿ ಶಕುನಿ. ರಾಮಾಯಣದಲ್ಲಿ ಮಂಥರೆ ಮಾಡಿದ ಪಾತ್ರವನ್ನು ಮಹಾಭಾರತದಲ್ಲಿ ಶಕುನಿ ನಿರ್ವಹಿಸುತ್ತಾನೆ. ವೀರಶೈವ ಯುವ ವೇದಿಕೆಯವರು ಆ ಬಿರುದನ್ನು ಶ್ರೀ ಎಂ.ಪಿ.ಪ್ರಕಾಶರಿಗೆ ದಯಪಾಲಿಸಿದ್ದಾರೆ. ಅವರು ಒಬ್ಬ ವಿಚಾರ ಶೀಲ ಸಾಹಿತಿಯೆಂದು, ಪ್ರಗತಿಪರ ಚಿಂತಕರೆಂದು ಬಿಂಬಿಸಲ್ಪಟ್ಟವರು ಒಮ್ಮೆಗೇ ಆನು ದೇವಾ ಪುಸ್ತಕವನ್ನು ಉಳಿಸಿಕೊಂಡು ಬಂಜಗೆರೆ ಜಯಪ್ರಕಾಶರನ್ನು ರಕ್ಷಿಸಲು ಬೆನ್ನಿಗೆ ನಿಂತಾಗ ಹೀರೋ ಪಟ್ಟದಿಂದ ವಿಲನ್ ಪಟ್ಟಕ್ಕೆ ಇಳಿದರು. ಈಗಿನ ರಾಜಕೀಯ ಸ್ಥಿತಿಯಲ್ಲಿ ಒಂದು ಕಡೆ ಕಾಂಗ್ರೆಸ್ ಸಖ್ಯಕ್ಕೆ ತೆರೆ ಮರೆಯಲ್ಲಿ ಪ್ರಯತ್ನಿಸುತ್ತ, ಇನ್ನೊಂದು ಕಡೆ ಬಿಜೆಪಿ- ಜೆ.ಡಿ.ಎಸ್‌ಗೆ ಅಧಿಕಾರಕ್ಕೆ ಅವಕಾಶ ಕೊಡಬಾರದೆಂದು ರಾಜ್ಯಪಾಲರನ್ನು ಆಗ್ರಹಿಸುವ ಪರಿ ಅವರನ್ನು ಪೂರ್ಣ ಖಳನಾಯಕ ಪಾತ್ರಧಾರಿಯನ್ನಾಗಿ ಮಾಡಿದೆ.

3. ಸರ್ಕಸ್ ಬಫೂನ್ - ಶ್ರೀ ವಾಟಾಳ್ ನಾಗರಾಜ್

ದಿನಕ್ಕೊಂದು ಬಗೆಯ ವೇಷ, ಪ್ರತಿಭಟನೆಯ ಪ್ರಾಕಾರವನ್ನು ಬಳಸಿ ಸುದ್ದಿಯಲ್ಲಿರುವ ಏಕವ್ಯಕ್ತಿ ವಾದ್ರಿತೀಯ ಶಾಸಕ ಕನ್ನಡ ಚಳುವಳಿಗಾರ ವಾಟಾಳ ನಾಗರಾಜ ಅವರೂ

ಮುಖ್ಯಮಂತ್ರಿಯಾಗುವ ಅಪೇಕ್ಷೆ ವ್ಯಕ್ತಪಡಿಸಿ ರಾಜ್ಯಪಾಲರು ಅವಕಾಶ ಕೊಟ್ಟರೆ ಸರ್ಕಾರ ರಚಿಸಲು ಸಿದ್ಧವಿರುವುದಾಗಿ ಹೇಳಿದ್ದಾರೆ. ಈ ಸಂದರ್ಭಕ್ಕೆ ಎರಡು ಗಾದೆಗಳು ನೆನಪಿಗೆ ಬರುತ್ತವೆ. "ಹನುಮಂತ ದೇವರೇ (ಹೆಚ್ಚಿನ ಶಾಸಕರ ಬಲವಿರುವ ಬಿ.ಜೆ.ಪಿ.ಯ ಶ್ರೀ ಯಡೆಯೂರಪ್ಪನವರೇ) ಹಗ್ಗ ತಿನ್ನಬೇಕಾದರೆ ಪೂಜಾರಿ (ವಾಟಾಳ್ ನಾಗರಾಜ್) ಶಾವಿಗೆ ಕೇಳಿದನಂತೆ!"

ಯಾಕಾಗಬಾರದು? ಮಜಾ (ಪ್ರಜಾ) ಪ್ರಭುತ್ವದಲ್ಲಿ ಅಸಾಧ್ಯವೂ (ಶ್ರೀ ದೇವೇಗೌಡರು ಪ್ರಧಾನಿಯಾದಂತೆ) ಸಾಧ್ಯವಾಗಬಹುದಲ್ಲವೆ? "ಹುಚ್ಚು ಮುಂಡೆ ಮದುವೇಲಿ (ಭಾರತದ ಪ್ರಜಾಪ್ರಭುತ್ವದಲ್ಲಿ) ಉಂಡವನೆ ಜಾಣ!"

4.ಧುರ್ಯೋಧನ - ದುಶ್ಯಾಸನರು

ಕಾಂಗ್ರೆಸ್ ಧುರೀಣರಾದ ಮಲ್ಲಿಕಾರ್ಜುನ್ ಖರ್ಗೆ ಮತ್ತು ಶ್ರೀ ಧರ್ಮಸಿಂಗರು ಗರ್ಜಿಸುತ್ತ ಬಿಜೆಪಿ - ಜೆಡಿಸ್‌ಗಳ ವಸ್ತ್ರಾಪಹರಣ ಮಾಡಿ ಮರ್ಯಾದೆ ಕಳೆಯಲು ಸನ್ನದ್ಧರಾಗಿ ಗರ್ಜಿಸುತ್ತಿದ್ದಾರೆ. ಅಧಿಕಾರ ಎಂಬ ದ್ರೌಪದಿಯ ಗೌರವವನ್ನು ಚಿಂದಿ ಮಾಡುತ್ತಿದ್ದಾರೆ.

5.ಭೀಷ್ಮ -ದ್ರೋಣರು

ಕುರು-ಪಾಂಡವರ ಸಮೂಹದಲ್ಲೇ ಹಿರಿಯರಾದ ಇವರು ನೀತಿ ನ್ಯಾಯ ಬೋಧನೆಯ ಹರಿಕಾರರು. ಆದರೆ, ದುರ್ಯೋಧನನ ಉಪ್ಪುಂಡು ಬದುಕುತ್ತಿದ್ದ ಅವರಿಗೆ ದ್ರೌಪದಿಯ ವಸ್ತ್ರಾಪಹರಣ ನಡೆದಾಗ ದುರ್ಯೋಧನ- ದುಶ್ಯಾಸನರ ಅಟ್ಟಹಾಸವನ್ನು ಖಂಡಿಸಲು ಧೈರ್ಯ ಬರಲಿಲ್ಲ. ಹಿರಿತನದ ಗೌರವವನ್ನು ಕಳೆದುಕೊಳ್ಳುವಂತೆ ಮೌನಿಗಳಾಗಿದ್ದರು. ಅದೇ ರೀತಿ ಕಾಂಗ್ರೆಸ್ಸಿನ ಉಪ್ಪುಂಡು ಬದುಕುತ್ತಿರುವ ರಾಷ್ಟ್ರಾಧ್ಯಕ್ಷರಾಗಲೀ, ರಾಜ್ಯಪಾಲರಾಗಲಿ ಸತ್ಯ- ನ್ಯಾಯ-ನೀತಿಗಳನ್ನು ಎತ್ತಿ ಹಿಡಿದು ಬಹುಮತಕ್ಕೆ ಬೆಲೆ ಕೊಟ್ಟು ಬಿಜೆಪಿಗೆ ಸರ್ಕಾರ ರಚಿಸಲು ಅವಕಾಶ ನೀಡುವರೆಂಬ ಭರವಸೆ ಯಾರಿಗೂ ಇರಲಿಲ್ಲ.

(ಒಂದು ವೇಳೆ ಈ ಲೇಖನ ಮುದ್ರಣಗೊಂಡ ಮೇಲೆ ಸರ್ಕಾರ ರಚನೆಯಾದರೆ ಆಗ ರಾಷ್ಟ್ರಾಧ್ಯಕ್ಷೆ, ರಾಜ್ಯಪಾಲರಿಗೆ ಅಭಿನಂದನೆ; ಇಲ್ಲದಿದ್ದರೆ ಖಂಡನೆ ಅಷ್ಟೆ.)

6.ಶ್ರೀ ಕೃಷ್ಣ

ಶ್ರೀ ದೇವೇಗೌಡರದು ಬಹು ವರ್ಣೀಯ ವ್ಯಕ್ತಿತ್ವ. ಮಕ್ಕಳನ್ನು ಪ್ರೀತಿಸುವುದರಲ್ಲಿ ಧೃತರಾಷ್ಟ್ರನಂತಾದರೆ, ವಿರೋಧಿಗಳನ್ನು ಬೇಡವಾದವರನ್ನು ಬಗ್ಗು ಬಡಿಯಲು ತಂತ್ರಗಳನ್ನು ಹೆಣೆಯುವುದರಲ್ಲಿ ಶ್ರೀ ಕೃಷ್ಣನೇ ಸರಿ! ಎಂತೆಂತಹ ಘಟಾನುಘಟಿಗಳನ್ನ ಇನ್ನು ಮೇಲೇಳದಂತೆ ಕೆಡವಿ ಮಣ್ಣು ಮಾಡುವ ತಂತ್ರಗಾರಿಕೆ, ಬುದ್ಧಿವಂತಿಕೆ ಅವರದು. ಹುಲಿ, ಸಿಂಹಗಳು ತನ್ನ ಮರಿಗಳಿಗೆ ಬೇಟೆಯಾಡುವುದನ್ನು ಚಿಕ್ಕವಿದ್ದಾಗಿನಿಂದಲೇ ಕಲಿಸಿಕೊಡುವಂತೆ ಅಧಿಕಾರ ಹಿಡಿಯುವ ವರಸೆಗಳನ್ನು ಮಕ್ಕಳಿಗೆ ಬಹಳ ಚೆನ್ನಾಗಿ ಕಲಿಸುವ ಜಾಣ್ಮೆಯುಳ್ಳವರು! ಅಂತೆಯೇ ಶ್ರೀ ಕುಮಾರಸ್ವಾಮಿಯವರು ಮರಿಗಳು ಚಿನ್ನಾಟವಾಡುವಂತೆ ಒಮ್ಮೆ ಅಪ್ಪನೊಡನೆ ಮುನಿಸಿಕೊಳ್ಳುತ್ತಾರೆ, ಮತ್ತೊಮ್ಮೆ ಕಾಲು ಹಿಡಿಯುತ್ತಾರೆ. ಬಿಜೆಪಿಯೊಡನೆ ಪ್ರೇಮ ವಿವಾಹ ಮಾಡಿಕೊಳ್ಳುವಾಗ ಮುನಿಸಿಕೊಂಡರು. ಅದೇ ಈಗ ಅಪ್ಪ ಹಾಕಿದ ಗೆರೆ ದಾಟುವುದಿಲ್ಲ ಎಂದರು. ಇವೆಲ್ಲ ತೀರ್ಥರೂಪು ತಂದೆಯವರು ಕಲಿಸುತ್ತಿರುವ ಪೈಲ್ವಾನ್ ಪಟ್ಟುಗಳಿರಬಹುದು.

7. ಎಲ್ಲ ಶಾಸಕರುಗಳನ್ನು ಪಾಂಡವರು-ಕೌರವರುಗಳೆಂದು ಹೆಸರಿಸಬಹುದು. ಆದರೆ ಮಹಾಭಾರತದಲ್ಲಿ ಮನ ಸೆಳೆಯುವ ದುರಂತ ನಾಯಕ "ಕರ್ಣ." ಪಾಂಡವ- ಕೌರವರ ಸಮೂಹದಲ್ಲಿ ಎಲ್ಲರನ್ನೂ ಮೀರಿಸುವ ಧೈರ್ಯ-ಶೌರ್ಯ, ಶಿಸ್ತು-ಸಂಯಮ, ಸ್ವಾಮಿನಿಷ್ಠೆ (Loyalty)- ಮುಂತಾದ ಸಲ್ಲಕ್ಷಣಗಳಿದ್ದರೂ ಆರಂಭದಿಂದಲೂ ಹಲವಾರು ಎಡರು-ತೊಡರುಗಳನ್ನು ಎದುರಿಸುತ್ತಲೇ ಬಂದನು. ಧೈರ್ಯ, ಔದಾರ್ಯಗಳಿಗೆ ಪ್ರಸಿದ್ಧನಾದ ಕರ್ಣ (ಮಹಾಭಾರತದಲ್ಲಿ ನಿಜಕ್ಕೂ ಈತನೇ ನಿಜವಾದ ನಾಯಕ) ನಿಜವಾಗಿಯೂ ಪಾಂಡವರಲ್ಲಿ ಒಬ್ಬನಾದರೂ ತಾಯಿಯು ಬಾಲ್ಯದಲ್ಲಿ ಎಡವಿದ್ದರಿಂದ ಅನಾಥನಾಗಿ ನಂತರ ಸೂತಪುತ್ರನಾಗಿ ಬೆಳೆದ. ವರ್ಣಾಶ್ರಮ ವ್ಯವಸ್ಥೆಯ ದೃಷ್ಟಿಯಿಂದ ಕೀಳರಿಮೆ ಹೇರಲ್ಪಟ್ಟು ನೊಂದು ನಲುಗಿರುವಾಗಲೇ ಧುರ್ಯೋಧನನ ಆಶ್ರಯ, ಪ್ರೋತ್ಸಾಹ ದೊರೆತು ಮೇಲೇರಿದ. ಆತನ ಔದಾರ್ಯ ಗುಣದ ದುರುಪಯೋಗವನ್ನು ಶ್ರೀಕೃಷ್ಣನು ಮಾಡಿಕೊಂಡನು ಮಾತ್ರವಲ್ಲ ಮೊದಲೊಮ್ಮೆ ಅನ್ಯಾಯ ಮಾಡಿದ್ದ ತಾಯಿ ಕುಂತಿ ಅಸಾಂದರ್ಭಿಕವಾಗಿ ತನ್ನ ಮಗನೆಂಬುದನ್ನು ತಿಳಿಸಿ, ಹತ ಚೇತನನನ್ನಾಗಿ ಮಾಡಿದ್ದಲ್ಲದೆ ಅವನಿಂದ ವಾಗ್ದಾನ ಪಡೆದಳು. ಹೀಗೆ ಸತತವಾಗಿ ಅನ್ಯಾಯಕ್ಕೆ ಕರ್ಣನು ಒಳಗಾಗಬೇಕಾಯಿತಾದರೂ ಮಹಾಭಾರತದ ಒಬ್ಬ ಸಚ್ಚಾರಿತ್ರ್ಯ ಸಂಪನ್ನನಾದ ಪ್ರೌಢ ವ್ಯಕ್ತಿ ಕರ್ಣ.

ಶ್ರೀ ಬಿ.ಎಸ್.ಯಡೆಯೂರಪ್ಪನವರು ಕೋಮುವಾದಿ ಪಕ್ಷವೆಂದು ಇತರ ಪಕ್ಷಗಳವರು ಚೀರಾಡುವ ಬಿಜೆಪಿಯನ್ನು ತಳಮಟ್ಟದಿಂದ ಬೆಳೆಸಿದರು. ನಾವು ಕಂಡಂತೆ ಮುನಿಸಿಪಾಲಿಟಿ ಚುನಾವಣೆಯಲ್ಲಿ ಒಂದೆರಡು ಸ್ಥಾನಗೆಲ್ಲಲು ಸಹ ಅಸಮರ್ಥವಾಗಿದ್ದ ಜನಸಂಘ, ಬಗೆಬಗೆಯಾಗಿ ರೂಪಾಂತರಗೊಂಡು ಆರ್.ಎಸ್.ಎಸ್ ತರಬೇತಿ ಪಡೆದವರು ಮಾತ್ರವಲ್ಲದೆ ಹೊರಗಿನ ಕಚ್ಚಾ (raw) ಮಾಲನ್ನು ಸೇರಿಸಿಕೊಂಡು ದೊಡ್ಡ ಶಕ್ತಿಯಾಗಿ ಬೆಳೆದು 79 ಶಾಸಕರನ್ನು ಹೊಂದಿದ ಬಹು ದೊಡ್ಡ ಪಕ್ಷವಾಗಿ ಕರ್ನಾಟಕದ ವಿಧಾನ ಸಭೆಯಲ್ಲಿ ನಿಂತಿದೆ. ಬಿಜೆಪಿಯ ಎಲ್ಲಾ ಸಿದ್ಧಾಂತಗಳು, ನಂಬಿಕೆಗಳು ನಮಗೂ ಸರಿಬರಲಿಕ್ಕಿಲ್ಲ. ಆದರೆ ಅದನ್ನು ಮಾತ್ರ ಕೋಮುವಾದಿ ಎಂದು ಕಾಂಗ್ರೆಸ್ಸಿನವರು ದೂಷಿಸುತ್ತಾರಲ್ಲ ಇದು ಸರಿಯೆ? ಲಿಂಗಾಯತ ಸಮಾಜವನ್ನು ಕಾಲ ಕಸಕ್ಕಿಂತಲೂ ಕಡೆಯಾಗಿ ಕಂಡು, ನಖ ಶಿಖಾಂತ ದ್ವೇಷಿಸುತ್ತ ಲಿಂಗಾಯತ ನಾಯಕರೇ ಇಲ್ಲದಂತೆ ಮಾಡಲು ಸರ್ವಸಾಹಸ ಮಾಡುತ್ತಿರುವ ಶ್ರೀ ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಕಾಂಗ್ರೆಸ್ ಕೋಮುವಾದಿಯಲ್ಲವೆ? ಅಲ್ಪ ಸಂಖ್ಯಾತರನ್ನು, ದಲಿತರನ್ನು ಎತ್ತಿಕಟ್ಟುತ್ತ ಬಹು ಸಂಖ್ಯಾತರಾದ ಹಿಂದುಗಳನ್ನು ಮತ್ತು ಲಿಂಗಾಯತರನ್ನು ನಿಕೃಷ್ಟವಾಗಿ ನೋಡುವ ಅವರು ಮತ್ತು ಅವರ ಪಕ್ಷ ಕೋಮುವಾದಿಯಲ್ಲವೆ?

ಜೆ.ಡಿ.ಎಸ್.ವರಿಷ್ಠ ಶ್ರೀ ಹೆಚ್.ಡಿ.ದೇವೇಗೌಡರು, ಸ್ವಾಭಿಮಾನವಿಲ್ಲದೆ ಅವರಿಗೆ ವಿಧೇಯರಾಗಿ ವರ್ತಿಸುವ ಕೆಲವು ಲಿಂಗಾಯತರನ್ನು ಬಿಟ್ಟರೆ ಲಿಂಗಾಯತ ಸಮಾಜವನ್ನು ಸದಾ ದ್ವೇಷಿಸುತ್ತಲೇ ಬರುತ್ತಿರುವವರು. ಇವರು ಕೋಮುವಾದಿಯಲ್ಲವೆ? ಬೆಂಗಳೂರು ಸನಿಹದಲ್ಲಿ ಒಂದು ಗ್ರಾಮ. ಇಡೀ ಗ್ರಾಮದಲ್ಲಿ ಲಿಂಗಾಯತರ ಕುಟುಂಬಗಳು; ಕೇವಲ ಬೆರಳೆಣಿಕೆಯಷ್ಟು ಬೇರೆಯವರವು. ಈ ಸಮಾಜವನ್ನು ಛಿದ್ರಗೊಳಿಸಬೇಕೆಂದು ಛಲ ತೊಟ್ಟು ಮಾಜಿ ಸಚಿವ ರೇವಣ್ಣನವರು ಅನವಶ್ಯಕವಾಗಿ ಜಮೀನುಗಳನ್ನು ಒಂದು ಯೋಜನೆಗಾಗಿ ಸ್ವಾಧೀನ ಪಡಿಸಿಕೊಳ್ಳಲು ಸರ್ವ ಸಾಹಸ ಮಾಡುತ್ತಿದ್ದರು. ಇದು ಜನಾಂಗೀಯ ದ್ವೇಷವಲ್ಲವೆ? ಜಾತೀಯತೆಯಿಂದ ತುಂಬಿ ತುಳುಕುವ ಈ ದೇಶದಲ್ಲಿ ಎಲ್ಲ ಪಕ್ಷಗಳೂ ಕೋಮುವಾದಿಗಳೆ! ಹೀಗಿದ್ದಾಗ ಕರ್ಣನನ್ನು ಸೂತಪುತ್ರನೆಂದು ಜರಿದಂತೆ ಕೋಮುವಾದಿ ಬಿಜೆಪಿಯ ಬಿ.ಎಸ್.ಯಡೆಯೂರಪ್ಪನವರಿಗೆ ಅಧಿಕಾರ ಹಸ್ತಾಂತರಿಸುವುದಕ್ಕೆ ಹಿಂಜರಿಯಲಾಗುತ್ತಿದೆ ಎಂದು ಶ್ರೀ ದೇವೇಗೌಡರು ಮತ್ತು ಶ್ರೀ ಕುಮಾರ ಸ್ವಾಮಿ ಹೇಳುತ್ತಿದ್ದುದು ಎಷ್ಟು ಸಮಂಜಸ? ಹಾಗಾದರೆ ಅಂಥ ಕೋಮುವಾದಿ ಪಕ್ಷದ ನೆರವಿನಿಂದ ಸಮ್ಮಿಶ್ರ ಸರ್ಕಾರ ರಚಿಸಲು ಮುಂದಾದುದು ಸಹ ತಪ್ಪಲ್ಲವೆ? ಬಿಜೆಪಿಗೆ ಅಧಿಕಾರ ಕೊಟ್ಟರೆ ಗುಜರಾತ್ ಆಗುತ್ತದೆ ಎಂದು ಆರೋಪಿಸಿದ ತಂದೆ -ಮಕ್ಕಳ ನಡೆ -ನುಡಿ ಸರಿಯೆ? ಅಧಿಕಾರ ಕೊಟ್ಟು ನೋಡಬಹುದಿತ್ತು. ಇಪ್ಪತ್ತು ತಿಂಗಳ ಆಡಳಿತದ ನಂತರ ಅಧಿಕಾರ ಹಸ್ತಾಂತರ ಮಾಡುವ ಸಮಯ ಬಂದಾಗ ತಂದೆ ದೇವೇಗೌಡರು ಮಗ ಶ್ರೀ ಕುಮಾರ ಸ್ವಾಮಿಯವರು ನಡೆದುಕೊಂಡ ರೀತಿ ಅತ್ಯಂತ ಹೇಯ ಮತ್ತು ಹಾಸ್ಯಾಸ್ಪದ. ಕೈಯೊಳಗಿರುವ ತಿಂಡಿಯನ್ನು ಕೊಡಲಾರದ ಆಸೆ ಬುರುಕ ಮಗುವಿನಂತೆ ಬಾಲಿಶವಾಗಿ ತೋರಿತು. ಗ್ರಾಮ ವಾಸ್ತವ್ಯ ಮುಂತಾದ ಕೆಲವೊಂದು ಜನಪರ ಕಾರ್ಯಕ್ರಮ ಮಾಡಿ ವಿನೂತನ ಮುಖ್ಯಮಂತ್ರಿ ಎಂಬ ಖ್ಯಾತಿ ಗಳಿಸಿದ್ದ ಶ್ರೀ ಕುಮಾರಸ್ವಾಮಿ ಅಧಿಕಾರ ಬಿಡದ ಆಸೆಬುರುಕತನ ತೋರಿ, ತಂದೆಯ ಅವಿವೇಕದ ಒತ್ತಡಕ್ಕೆ ಒಳಗಾಗಿ ಜನರ ಕಣ್ಣಿನಲ್ಲಿ ಕುಬ್ಜರಾದರು. ತಂದೆ ದೇವೇಗೌಡರು ಈಗಾಗಲೇ ಕುತಂತ್ರದ ರಾಜಕಾರಣಿ ಎಂಬ ಕೆಟ್ಟ ಬಿರುದನ್ನು ರಾಷ್ಟ್ರದಾದ್ಯಂತ ಗಳಿಸಿದ್ದಾರೆ. ದೆಹಲಿಯ ಪ್ರಮುಖ ಇಂಗ್ಲೀಷ್, ಹಿಂದಿ ಪತ್ರಿಕೆಗಳು ಅವರ ವ್ಯಂಗ್ಯ ಚಿತ್ರ ಪ್ರಕಟಿಸಿ ಹಾಸ್ಯ ಲೇಖನಗಳನ್ನು ಬರೆಯುತ್ತಿವೆ. ಇದು ಸ್ವಲ್ಪವಾದರೂ ದೇವೇಗೌಡರನ್ನು ತಾಕುತ್ತಿಲ್ಲವೆ? ಅವರ ಅಂತರಾತ್ಮ ಸತ್ತು ಹೋಗಿದೆಯೆ?

ಒಂದು ವೇಳೆ ತಂದೆಯ ಅವಿವೇಕದ ಸಲಹೆಗೆ ಬಲಿಯಾಗದೆ ಮೊದಲು ಕೊಟ್ಟ ಮಾತಿನಂತೆ ಶ್ರೀ ಕುಮಾರಸ್ವಾಮಿ ವಚನ ಪಾಲನೆ ಮಾಡಿ ಶ್ರೀ ಯಡೆಯೂರಪ್ಪನವರಿಗೆ ಅಧಿಕಾರ ಹಸ್ತಾಂತರಿಸಿದ್ದರೆ ಅವರ ವರ್ಚಸ್ಸು ಬಹಳ ಮೇಲಕ್ಕೇರಿ ಜೆಡಿಎಸ್ ಮತ್ತಷ್ಟು ಬಲಗೊಳ್ಳುತ್ತಿತ್ತು. ಕೆಲವು ತರುಣರು ಯುವತಿಯರನ್ನು ಪ್ರೀತಿಸಿ, ಓಡಿ ಹೋಗಿ ಮದುವೆಯಾಗುವರು. ನಂತರ ಇದ್ದಕ್ಕಿದ್ದಂತೆಯೇ ಪಿತೃಭಕ್ತಿ ಮಾತೃ ಭಕ್ತಿ ಜಾಸ್ತಿಯಾಗಿ ನಂಬಿ ಕೈ ಹಿಡಿದವಳಿಗೆ ಕೈಕೊಟ್ಟು ತಂದೆ - ತಾಯಿ ಒತ್ತಾಯ ಮಾಡಿದರೆಂದು ಬೇರೆಯವಳನ್ನು ಮದುವೆಯಾಗುವರು. ಇದು ಅಮಾನವೀಯತೆ. ಅದೇ ರೀತಿ ಅಧಿಕಾರ ಗ್ರಹಣ ಮಾಡುವಾಗ ಬೇಡವಾದ ಅಪ್ಪನ ಬುದ್ಧಿವಾದ ಈಗೇಕೆ ಮಾನ್ಯವಾಯಿತು. ಇದರಿಂದ ತಂದೆ-ಮಕ್ಕಳು ವಿಡಂಬನೆಗೆ - ನಗೆಪಾಟಲಿಗೆ ಗುರಿಯಾದರು. ವಂಚನೆಗೊಳಗಾದ ಶ್ರೀ ಯಡೆಯೂರಪ್ಪ ಮತ್ತು ಬಿಜೆಪಿ ಜನರ ವ್ಯಾಪಕವಾದ ಅನುಕಂಪಕ್ಕೆ ಪಾತ್ರರಾದರು.

ಈ ಬಗ್ಗೆ ನಾವು ಆಲೋಚಿಸುತ್ತಿರುವುದು ರಾಜಕೀಯ ದೃಷ್ಟಿಯಿಂದಲ್ಲ ವೈಯಕ್ತಿಕ ಆಸೆ-ಆಕಾಂಕ್ಷೆಗಳಿಂದಲ್ಲ, ಕೆಳಕಂಡ ಕಾರಣಗಳಿಗಾಗಿ.

1. ಜೀವನದಲ್ಲಿ ಎಲ್ಲರೂ ಶೇಕಡಾ 100ರಷ್ಟು ಆದರ್ಶಗಳನ್ನು ಪಾಲಿಸಲು ಆಗದೆ ಇದ್ದರಷ್ಟೆ ಕನಿಷ್ಠವಾದ ನೈತಿಕ ಮೌಲ್ಯ ಇರಬಾರದೆ? ಕೊಟ್ಟ ವಚನವನ್ನು ಪಾಲಿಸದೆ ಇರುವ ರಾಜನೀತಿ ಖಂಡನಾರ್ಹವಲ್ಲವೆ?

2. ರಾಜಕಾರಣಿಗಳ ಸ್ವಾರ್ಥದಿಂದಾಗಿ, ಸಮಯ ಸಾಧಕತನದಿಂದಾಗಿ ಪಕ್ಷಗಳು ಹೋಳಾಗುತ್ತ ಹಲವಾರು ಹುಟ್ಟಿಕೊಳ್ಳುತ್ತವೆ. ಹೀಗಾಗಿ ಇನ್ನು ಮುಂದೆ ಯಾರಿಗೂ ಬಹುಮತ ಬರದೆ ಬರೀ ಸಮ್ಮಿಶ್ರ ಸರ್ಕಾರಗಳೇ ಆಗುತ್ತ, ಸದಾಕಾಲ ಜಗಳವಾಡುತ್ತ 5 ವರ್ಷಕ್ಕೆ ಬದಲಾಗಿ ಒಂದೊಂದೇ ವರ್ಷಕ್ಕೆ ಚುನಾವಣೆ ಬರತೊಡಗಿದರೆ ದೇಶದ ಪ್ರಗತಿಯ ಗತಿ ಏನು ? ಚುನಾವಣಾ ವೆಚ್ಚವನ್ನು ಎಲ್ಲೆ ಮೀರಿ ಮಾಡಿ ಅದನ್ನು ಪುನಃ ಸಂಪಾದಿಸಲು ರಾಜಕಾರಣಿಗಳು ಭ್ರಷ್ಟಾಚಾರಿಗಳಾಗಿ ಹಗಲು ದರೋಡೆಯಲ್ಲಿ ನಿರತರಾದರೆ ಹೇಗೆ ?

3. ಸಮ್ಮಿಶ್ರ ಸರ್ಕಾರಗಳನ್ನು ಏರಿಸುತ್ತ, ಇಳಿಸುತ್ತ ಶಾಸಕರು ಬರೀ ಕುದುರೆ ವ್ಯಾಪಾರದಲ್ಲಿ ನಿರತರಾದರೆ ಯಾವ ಆದರ್ಶಗಳು ಸಾರ್ವಜನಿಕ ಜೀವನದಲ್ಲಿ ಉಳಿಯಲು ಸಾಧ್ಯ. ಯಥಾರಾಜಾ ತಥಾ ಪ್ರಜಾ. ರಾಜಕಾರಣಿಗಳು ಅಧಿಕಾರಿಗಳು, ಶ್ರೀಮಂತರ ಮಧ್ಯೆ ಜನ ಸಾಮಾನ್ಯರ ಜೀವನವು ಇನ್ನಷ್ಟು ದುರ್ಭರವಾಗದೆ?

ಚುನಾವಣೆಯನ್ನು ಎದುರಿಸಲು ಕಾಂಗ್ರೆಸ್, ಜೆ.ಡಿ.ಎಸ್. ಉಭಯತರಿಗೂ ಆತ್ಮಬಲ ಇಲ್ಲವಾದರೂ ಸುಮ್ಮನೇ ಪೌರುಷವನ್ನು ಕೊಚ್ಚಿಕೊಳ್ಳುತ್ತಿದ್ದಾರೆ. ವಿಧಾನ ಸಭೆ ವಿಸರ್ಜಿಸಿ ಚುನಾವಣೆಗೆ ಹೋಗಲು ಸಿದ್ದರಿರುವುದಾಗಿ ಹೇಳುತ್ತಾರೆ. ಅಂತೂ ಒಂದು ಕಡೆ ಜೆ.ಡಿ.ಎಸ್ ಮತ್ತು ಬಿ.ಜೆ.ಪಿಯ ವಿಚ್ಛೇದನ ಪ್ರಕ್ರಿಯೆ ಇನ್ನೊಂದು ಕಡೆ ಮರು ಮದುವೆಯ ಪ್ರಯತ್ನ ನಡೆಯುತ್ತಿದೆ.

ತೆರೆಯ ಮರೆಯಲ್ಲಿ

ಶ್ರೀ ಕುಮಾರ ಸ್ವಾಮಿಯವರು ಮುಖ್ಯಮಂತ್ರಿ ಪದವಿ ಬಿಟ್ಟುಕೊಡಲು ಒಪ್ಪದೆ, ಅಧಿಕಾರ ಹಸ್ತಾಂತರಿಸದೆ ಕ್ಯಾತೆ ತೆಗೆದಿದ್ದರಿಂದ ಬಿ.ಜೆ.ಪಿಯವರು ತಮ್ಮ ಬೆಂಬಲವನ್ನು ವಾಪಸ್ಸು ಪಡೆದರು. ಸರ್ಕಾರ ಬಿದ್ದು ಹೋಗಿ ರಾಷ್ಟ್ರಪತಿ ಆಡಳಿತವನ್ನು ರಾಜ್ಯಪಾಲರು ಜಾರಿಗೆ ತಂದರು. ಒಂದೇ ಸಮಾಧಾನದ ಸಂಗತಿ ಎಂದರೆ ವಿಧಾನ ಸಭೆ ವಿಸರ್ಜಿಸದೆ ಅಮಾನತ್ತಿನಲ್ಲಿ ಇಟ್ಟರು. ಶ್ರೀ ದೇವೇಗೌಡರು ತೆರೆಯ ಹಿಂದೆ ಕಾಂಗ್ರೆಸ್ ಜೊತೆ ಕೈ ಜೋಡಿಸಿ ಅಧಿಕಾರ ನಡೆಸಲು ಯಮಸಾಹಸ ಮಾಡಿದರಾದರೂ ಇವರ ಜೊತೆ ಕೈ ಜೋಡಿಸಲು ಕಾಂಗ್ರೆಸ್‌ನವರು ನಿರಾಕರಿಸಿ ಶ್ರೀ ದೇವೇಗೌಡರಿಗೆ ಮುಖ ಭಂಗವನ್ನು ಉಂಟು ಮಾಡಿದರು. ತಮ್ಮ ವರ್ತನೆಯಿಂದ ಹೇಗೆ ಅವರು ವರ್ಚಸ್ಸು ಕೆಡಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಏಕೆ ಅವರು ಇನ್ನೂ ಅರಿತುಕೊಳ್ಳುತ್ತಿಲ್ಲವೊ!

ವಿನಾ ಕಾರಣ ಸುಳ್ಳು ಆರೋಪ ಹೊರಿಸಿ, ಅಧಿಕಾರ ಹಸ್ತಾಂತರಿಸದೆ ಕ್ಯಾತೆ ತೆಗೆದು ವಚನ ಭ್ರಷ್ಟ ಎನಿಸಿಕೊಳ್ಳಲು ಸಿದ್ಧ, ಶ್ರೀ ಕೃಷ್ಣನೇ ಸುಳ್ಳು ಹೇಳಿಸಿದ ಮೇಲೆ ತಾವೇಕೆ ವಚನ ಬದ್ಧರಾಗಬೇಕು ಎಂದೆಲ್ಲ ಮಾತನಾಡಿ ಶ್ರೀ ಕುಮಾರ ಸ್ವಾಮಿ ಜನರ ಕಣ್ಣಲ್ಲಿ ಸಣ್ಣವರಾದರು. ಶ್ರೀ ಯಡಿಯೂರಪ್ಪ ಮತ್ತು ಬಿಜೆಪಿ ಪ್ರಮುಖರು ಧರ್ಮಯುದ್ಧ ಘೋಷಿಸಿ ಪ್ರಚಾರಕ್ಕೆ ಹೊರಟಾಗ ಜನ ಸಮೂಹದಿಂದ ಅದ್ಭುತ ಬೆಂಬಲ ಸಿಕ್ಕಿತು, ಜಾತಿ ಮತ ಪಕ್ಷಾತೀತವಾಗಿ ಯಡಿಯೂರಪ್ಪನವರಿಗೆ, ಬಿಜೆಪಿಗೆ ಅನ್ಯಾಯವಾಯಿತೆಂಬ ಅನುಕಂಪದ ಅಲೆ ಉಕ್ಕಿ ಹರಿಯಿತು. ಈ ಸನ್ನಿವೇಶದಲ್ಲಿ ಪತ್ರಿಕೆಗಳು, ಟಿ.ವಿ.ಚಾನಲ್‌ಗಳು ಸಹ ಪ್ರಾಮಾಣಿಕವಾಗಿ ಕೆಲಸ ಮಾಡಿದವು. ವಚನ ಪಾಲನೆ ಮಾಡದ ಕುಮಾರಸ್ವಾಮಿಯವರ ವರ್ಚಸ್ಸು ಕುಸಿಯಿತು. ಶಾಸಕರುಗಳು ನಿಸ್ತೇಜಗೊಂಡರು. ಚುನಾವಣೆ ಎದುರಾದರೆ ಯಾವ ಮುಖ ಇಟ್ಟುಕೊಂಡು ಜನರ ಬಳಿ ಮತಯಾಚನೆ ಮಾಡಬೇಕು. ಚುನಾವಣೆ ವೆಚ್ಚಕ್ಕೆ ಹಣ ಕೊಡಬಹುದು. ಹಣ ತೆಗೆದುಕೊಂಡು ಓಟು ಹಾಕುವವರು ಹೆಚ್ಚಾಗಿರಬಹುದು ಆದರೆ ನೈತಿಕ ಬಲ ಒದಗಿಸಲು ಕೆಲವರಾದರೂ ಪ್ರಜ್ಞಾವಂತರು ಬೇಕಲ್ಲ ? ಹತಚೇತನರಾದ ಜೆ.ಡಿ.ಎಸ್.ಶಾಸಕರು ಶ್ರೀ ಕುಮಾರ ಸ್ವಾಮಿಯವರಿಗೆ ದುಂಬಾಲು ಬಿದ್ದರು. ಬಿಜೆಪಿ ಬಿಟ್ಟು ಬೇರೆ ಯಾರ ಜೊತೆ ಕೈ ಜೋಡಿಸಬಹುದು ಎಂದು ಎಲ್ಲ ಒಳ ದಾರಿಗಳನ್ನು ಹುಡುಕಿದರು. ಎಲ್ಲ ದಾರಿಗಳು ಅರ್ಥಕ್ಕೇ ನಿಂತಾಗ "ಹಳೆಯ ಗಂಡನ ಪಾದವೇ ಗತಿ" ಎಂಬಂತೆ ಪುನಃ ಬಿಜೆಪಿಯ ಬಳಿಗೆ ಬಂದರು. ಸುಮಾರು ಒಂದು ತಿಂಗಳ ಕಾಲದ ಕರ್ನಾಟಕದ ಅತಂತ್ರ

ರಾಜಕೀಯ ಸ್ಥಿತಿ, ಪರಸ್ಪರ ದೂಷಿಸಿಕೊಂಡ ರೀತಿ ನಿಜಕ್ಕೂ ಪ್ರಾಜ್ಞರಲ್ಲಿ ಅಸಹ್ಯ ತರಿಸಿತು. ಆದರೂ ಪರವಾಗಿಲ್ಲ "ಕೆಟ್ಟ ಮೇಲೆ ಬುದ್ಧಿ ಬಂತು" ಎಂಬಂತೆ ವಿಧಾನ ಸಭೆ ವಿಸರ್ಜನೆಯಾಗುವ ಅನಾಹುತ ನಡೆಯುವ ಮೊದಲೇ ಜೆ.ಡಿ.ಎಸ್‌ನವರು ಎಚ್ಚೆತ್ತುಕೊಂಡಿದ್ದು ಅಭಿನಂದನೀಯವೆ. ಇದರಲ್ಲೂ ಕುಹಕವನ್ನು ಕೆಲವರು ಊಹಿಸಿದರು. ಜೆ.ಡಿ.ಎಸ್. ವಚನ ಭ್ರಷ್ಟತೆಯ ಆರೋಪ ಹೊತ್ತು ಜನರ ಕಣ್ಣಲ್ಲಿ ಸಣ್ಣದಾಯಿತು. ಇದರಿಂದ ಬಿಜೆಪಿಗೆ ಅನುಕಂಪದ ಅಲೆ ಹುಟ್ಟಿತು. ಹೇಗಿದ್ದರೂ ಕಾಂಗ್ರೆಸ್ ಪ್ರೇರಿತ ರಾಜ್ಯಪಾಲರು ಸರ್ಕಾರ ರಚನೆಗೆ ಅನುಮತಿ ಕೊಡುವುದಿಲ್ಲ. ಜೆ.ಡಿ.ಎಸ್ ಮೇಲಿರುವ ವಚನ ಭ್ರಷ್ಟತೆಯ ಕಲಂಕ ತೊಡೆದುಕೊಳ್ಳಲು ಸೂಕ್ತ ಅವಕಾಶ ಎಂದು ಜೆ.ಡಿ.ಎಸ್‌ನವರು ಬಿಜೆಪಿಯನ್ನು ಬೆಂಬಲಿಸಲು ಮುಂದಾದರು ಎಂದು ಅಂಥವರ ಅಂಬೋಣ. ಕುಮಾರ ಸ್ವಾಮಿ ಬೆಂಬಲ ಕೊಟ್ಟಂತೆ ಮಾಡುವುದು ದೇವೇಗೌಡರು ನಿರಾಕರಿಸುವುದು ಇದು ಒಂದು ನಾಟಕ. ಒಬ್ಬರು (ಮಗ) ತೊಟ್ಟಿಲು ತೂಗಿ ಮಗುವನ್ನು ಮಲಗಿಸಿದರೆ ಇನ್ನೊಬ್ಬರು (ಅಪ್ಪ) ಮಗುವನ್ನು ಚಿವುಟಿ ಎಬ್ಬಿಸುವ ಕೆಲಸ ಮಾಡುತ್ತಾರೆ ಎಂದು ವ್ಯಂಗ್ಯವಾಡಿದ್ದೂ ಉಂಟು. ದಿನದಿನಕ್ಕೆ ಒಂದು ಬಗೆಯ ತಿರುವನ್ನು ಕರ್ನಾಟಕದ ರಾಜಕೀಯ ಪಡೆಯಿತು. ಇಂದಿನವರೆಗಿನ (8-11-2007) ಬೆಳವಣಿಗೆಯಂತೆ ಶ್ರೀ ಕುಮಾರಸ್ವಾಮಿಯವರು ಪುನಃ ಬಿಜೆಪಿ ಸರ್ಕಾರ ರಚನೆಗೆ ಬೆಂಬಲ ನೀಡಿದ್ದಾರೆ. ರಾಜ್ಯಪಾಲರಿಗೆ ಶಾಸಕರ ಒಪ್ಪಿಗೆ ಪತ್ರ ನೀಡಿರುವುದೇ ಅಲ್ಲದೆ ಎಲ್ಲರೂ ಹೋಗಿ ರಾಷ್ಟ್ರಪತಿಗಳ ಮುಂದೆ ಸರ್ಕಾರ ರಚನೆಗೆ ಅಗತ್ಯವಿರುವ ಬಹುಮತವನ್ನು ಸಾಬೀತು ಮಾಡಲು ಪ್ರದರ್ಶನ ನಡೆಸಿ ಬಂದಿದ್ದಾರೆ. ಕಟುಕನ ಮುಂದೆ ಕುರಿಯು ದಯಾ ಭಿಕ್ಷೆ ಕೇಳಿದಂತೆ ಆಗುತ್ತಿತ್ತೇನೂ ! ಕಾಂಗ್ರೆಸ್ ಕೈಗೊಂಬೆಯಾಗಿರುವ ರಾಷ್ಟ್ರಪತಿಯಾಗಲಿ, ರಾಜ್ಯಪಾಲರಾಗಲಿ ಸರ್ಕಾರ ರಚನೆಗೆ ಬಿಜೆಪಿಗೆ ಅವಕಾಶ ಕೊಡಬಹುದೆಂಬ ನಿರೀಕ್ಷೆಯನ್ನೇ ಇಟ್ಟುಕೊಂಡಿರಲಿಲ್ಲ. ಏಕೆಂದರೆ ಕರ್ನಾಟಕದ ಕಾಂಗ್ರೆಸ್ ಮುಖಂಡರು ಬೇರೆ ಒತ್ತಡವನ್ನು ಹಾಕುತ್ತಲೇ ಇದ್ದರು. ಆದರೂ ಕೇಂದ್ರ ಸರ್ಕಾರದ ಸಚಿವ ಸಂಪುಟ ರಾಷ್ಟ್ರಪತಿ ಆಳ್ವಿಕೆ ಹಿಂತೆಗೆದುಕೊಳ್ಳಲು ಒಪ್ಪಿಗೆ ನೀಡಿದೆ. ಕಾಂಗ್ರೆಸ್ ಆಡಳಿತದ ಕೇಂದ್ರ ಸರ್ಕಾರ ಒಪಿಗೆ ನೀಡಲು ಪ್ರಮುಖ ಕಾರಣಗಳನ್ನು ಹೀಗೆ ಊಹಿಸಬಹುದು.

1. ದಿ. ಎಸ್.ಆರ್.ಬೊಮ್ಮಾಯಿ ವಿಷಯದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು. ವಿಧಾನ ಸಭೆಯಲ್ಲಿ ಬಹುಮತ ಸಾಬೀತು ಮಾಡುತ್ತೇನೆಂದರೂ ಅವಕಾಶ ನೀಡದೆ ಅಂದಿನ ರಾಜ್ಯಪಾಲರು ಸರ್ಕಾರವನ್ನು ವಜಾ ಮಾಡಿದ್ದು ಸರಿಯಲ್ಲ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದ್ದು ಈಗಿನ ಪರಿಸ್ಥಿತಿಗೆ ನೆರವಾಯಿತು. ನಾಲ್ಕು ವರ್ಷಗಳ ನಂತರ ಬಂದ ತೀರ್ಪಿನಿಂದ ದಿ. ಬೊಮ್ಮಾಯಿಯವರಿಗೆ ಪ್ರಯೋಜನವಾಗದಿದ್ದರೂ ಪ್ರಜಾಪ್ರಭುತ್ವ ರಕ್ಷಣೆಗೆ ಅದು ದಾರಿ ದೀಪವಾಗಿ ನಿಂತಿದೆ. ಪಾಕಿಸ್ತಾನಕ್ಕೂ ಭಾರತಕ್ಕೂ ಇರುವ ವ್ಯತ್ಯಾಸ ಇದೆ. ಕಾರ್ಗತ್ತಲಲ್ಲಿ ಬೆಳಕು ತೋರಿಸುವ. ಕೆಲಸವನ್ನು ನಮ್ಮ ಸಂವಿಧಾನ, ಮತ್ತು ನ್ಯಾಯಂಗ ಮಾಡುತ್ತವೆ.

2. ವಚನ ಭ್ರಷ್ಟತೆಯ ಆರೋಪ ಹೊತ್ತು ಮುಖಭಂಗ ಹೊಂದಿದ್ದ ಶ್ರೀ ಕುಮಾರ ಸ್ವಾಮಿಯವರು ತಡವಾಗಿಯಾದರೂ ಬೆಂಬಲ ನೀಡಿ ಕಲಂಕದ ತೀವ್ರತೆಯನ್ನು ಕಡಿಮೆ ಮಾಡಿಕೊಂಡರು. ನಂತರ ಆ ಆರೋಪದ ಸರ್ಪಾಸ್ತ್ರ ಕಾಂಗ್ರೆಸ್ ಕಡೆ ತಿರುಗಿತು. ರಾಜ್ಯಪಾಲರು ಕಾಂಗ್ರೆಸ್ ಪ್ರೇರಿತರು ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಬಹು ಮತವೇನೋ ಇದೆ ಆದರೆ ಸುಭದ್ರತೆ ಕಡಿಮೆ ಎಂದು ವರದಿ ಕಳಿಸುವ ಅಗತ್ಯವೇನಿತ್ತು ? ಸರ್ಕಾರ ರಚನೆ ಆದ ಮೇಲೆ ತಾನೆ ಕೂಡಿ ಬಾಳುವ ಕೆಲಸ. ಈ ಹಿಂದೆ 20 ತಿಂಗಳು ಸಣ್ಣಪುಟ್ಟ ವ್ಯತ್ಯಾಸಗಳ ಮಧ್ಯೆಯೇ ಉಭಯತರೂ ಕೂಡಿ ಕೆಲಸ ಮಾಡಲಿಲ್ಲವೆ? ಕಾಂಗ್ರೆಸ್ ಆಡಳಿತದ ಕೇಂದ್ರ ಸರ್ಕಾರದ ಮೇಲೆ ಎರಗಬಹುದಾದ ಅಪವಾದ ತಪ್ಪಿಸಿಕೊಳ್ಳಲು ಒಂದು ಒಳ್ಳೆಯ ನಿರ್ಧಾರ ತೆಗೆದುಕೊಂಡಂತೆ ತೋರುತ್ತದೆ.

3. ಬೀದಿಗೆ ಬಂದು ಜಗಳವಾಡುವ ಗಂಡ ಹೆಂಡಿರಂತೆ ಸದಾ ಪರಸ್ಪರ ಆರೋಪ ಮಾಡುತ್ತಲೇ 20 ತಿಂಗಳು ಸಂಸಾರ ಮಾಡಿದ ಜೆ.ಡಿ.ಎಸ್ - ಬಿ.ಜೆ.ಪಿ. ಸಮ್ಮಿಶ್ರ ಸರ್ಕಾರ ಈಗ ಪಾತ್ರ ಬದಲಿಸಿಕೊಂಡರೂ ಪುನಃ ಜಗಳವಾಡುವುದು ಖಚಿತ, ಆ ಜಗಳದ ಬೆಂಕಿಗೆ ತುಪ್ಪ ಸುರಿದಂತೆ ಮಾಡಿದರೆ ಸಂಬಂಧ ಕೆಟ್ಟು ಸರ್ಕಾರ ಬೀಳುತ್ತೆ. ಇದರಿಂದ ಕಾಂಗ್ರೆಸ್‌ಗೆ ಅಪವಾದವೂ ಬರದು ಎಂಬ ಲೆಕ್ಕಾಚಾರವೂ ಪ್ರಸುತ್ತ ನಿರ್ಧಾರದಲ್ಲಿದೆ ಎಂದು ಅನೇಕರ ಊಹೆ.

ಊಹಾಪೋಹವೇನೇ ಇರಲಿ, ಅಂತೂ ಬೊಮ್ಮಾಯಿ ಸರ್ಕಾರದ ಪರವಾಗಿ ಬಂದ ತೀರ್ಪು ಕೆಲಸ ಮಾಡಿ ಕರ್ನಾಟಕ ರಾಜಕೀಯದ ವಿಪ್ಲವವನ್ನು ಶಾಂತಗೊಳಿಸಿದ್ದು ಒಂದು ಸತ್ಯ. ಇದರಿಂದಲೇ ಶ್ರೀ ಯಡಿಯೂರಪ್ಪನವರಿಗೆ ದಾರಿ ಸುಗಮವಾದಂತಿದೆ. ಮಗ್ಗಲ ಮುಳ್ಳಾಗಿ ಒತ್ತುತ್ತಿದ್ದ ಶ್ರೀ

ಅನಂತಕುಮಾರ್ ಅವರು ಸಹ ಶಾಂತವಾದಂತೆ ಕಾಣುತ್ತದೆ. ಉದ್ವಿಗ್ನತೆ ಕುದಿಯುತ್ತಿದ್ದ ಸನ್ನಿವೇಶದಲ್ಲಿ ಶ್ರೀ ಅನಂತಕುಮಾರ್ ಚಿಕ್ಕಮಗಳೂರಿನಲ್ಲಿ ಭಾಷಣ ಮಾಡುತ್ತ "ಬಾಬಾ ಬುಡನ್ ಗಿರಿಯನ್ನು ದತ್ತಪೀಠ ಮಾಡುತ್ತೇವೆ." ಎಂದು ಹೇಳುವ ಅಗತ್ಯವೇನಿತ್ತು? ಇದರಿಂದ ಬಿಜೆಪಿ ಕೋಮುವಾದಿ ಎನ್ನುವವರಿಗೆ ಇನ್ನಷ್ಟು ಪ್ರಚೋದನೆ ಕೊಟ್ಟಂತಾಯಿತಲ್ಲವೆ ? ಇಂಥ ಹೇಳಿಕೆಯ ಹಿಂದೆ ದುರುದ್ದೇಶವನ್ನು ಏಕೆ ಊಹಿಸಬಾರದು? ಅಂತೂ ಎಲ್ಲ ಅಡ್ಡಿಗಳು ನಿವಾರಣೆಯಾಗುವ ಕಾಲ ಒದಗಿದ್ದು, ರಾಜ್ಯಪಾಲರ ಆದೇಶದಿಂದ ಊಹಾಪೋಹಗಳಿಗೆ ತೆರೆಬದ್ದಿತು.

ಬಿ.ಎಸ್.ಯಡೆಯೂರಪ್ಪನವರಿಗೆ ಶುಭಹಾರೈಕೆಗಳು

ಅನಿರೀಕ್ಷಿತವಾಗಿ ಅಧಿಕಾರಕ್ಕೆ ಬಂದು ಉಪಮುಖ್ಯಮಂತ್ರಿಗಳಾದ ಶ್ರೀ.ಬಿ.ಎಸ್. ಯಡೆಯೂರಪ್ಪನವರು ಬಹುಬಗೆಯ ಎಡರು ತೊಡರು ದಾಟಿ ಮುಖ್ಯಮಂತ್ರಿಯಾಗುತ್ತಿದ್ದಾರೆ. ಜೆ.ಡಿ.ಎಸ್. ಜೊತೆಗೂಡಿ ಸರ್ಕಾರ ರಚಿಸಲು ರಾಜ್ಯಪಾಲರು ಅನುಮತಿ ನೀಡಿದ್ದು, ಸೋಮವಾರ ದಿ.12-11-2007ರಂದು ಯಡೆಯೂರಪ್ಪನವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇದರಿಂದ ಐದು ವಾರಗಳ ಕಾಲ ಸ್ಥಗಿತಗೊಂಡಿದ್ದ ರಾಜ್ಯದ ಆಡಳಿತವು ಚುರುಕುಗೊಳ್ಳುತ್ತಿದೆ.

ಮುಖ್ಯಮಂತ್ರಿ ಹುದ್ದೆಯ ಅಧಿಕಾರ ಹಸ್ತಾಂತರಿಸದೆ ಅಕ್ಟೋಬರ್ ತಿಂಗಳು ಪೂರ್ತಿ, ನವೆಂಬರ್ 11ರದವರೆಗೆ ರಾಜ್ಯದಲ್ಲಿ ಅನಿಶ್ಚಿತತೆಗೆ ಕಾರಣವಾಗಿದ್ದರೂ ಜೆ.ಡಿ.ಎಸ್ ನೇತಾರ ಶ್ರೀ ಕುಮಾರ ಸ್ವಾಮಿಯವರು ಮತ್ತು ಯಡೆಯೂರಪ್ಪನವರು ಸೇರಿ ಒಳ್ಳೆಯ ಆಡಳಿತವನ್ನು ಕೊಟ್ಟಿದ್ದಾರೆ. ಅನೇಕ ಜನಪರ ಕಾರ್ಯಕ್ರಮ ಹಮ್ಮಿಕೊಂಡರು. ಶ್ರೀ ಯಡೆಯೂರಪ್ಪನವರು ಮಂಡಿಸಿದ ಬಜೆಟ್ ಜನ ಮೆಚ್ಚುಗೆ ಪಡೆಯಿತು. ಸಾಕಷ್ಟು ಕಾಲ ವಿರೋಧ ಪಕ್ಷದ ನಾಯಕರಾಗಿ ಪರಿಪಕ್ವ ರಾಜಕಾರಣಿಯಾಗಿರುವ ಶ್ರೀ ಯಡೆಯೂರಪ್ಪನವರು ತಮ್ಮ ಸಮೃದ್ಧ ಕರ್ನಾಟಕ ನಿರ್ಮಾಣದ ಕನಸನ್ನು ನನಸು ಮಾಡಲು ಈಗ ಸುವರ್ಣಾವಕಾಶ ಒದಗಿದೆ. ಬಹುಕಾಲದ ಹಂಬಲ ಈಡೇರುವ ಸಮಯ ಸನ್ನಿಹಿತವಾಗಿದೆ. ಅವರ ಆಡಳಿತವು ಎಡರು ತೊಡರುಗಳಿಲ್ಲದೆ ನಿರಾತಂಕವಾಗಿ ಸಾಗಲಿ, ಅಧಿಕಾರದ ಅವಧಿಯಲ್ಲಿ ಕರ್ನಾಟಕ ರಾಜ್ಯವು ಸರ್ವತೋಮುಖ ಅಭಿವೃದ್ಧಿ ಸಾಧಿಸುವಂತಾಗಲಿ. ಸೃಷ್ಟಿಕರ್ತ ಲಿಂಗದೇವ ಹಾಗೂ ಧರ್ಮಗುರು ಬಸವಣ್ಣನವರು ಶ್ರೀ ಬಿ.ಎಸ್.ಯಡೆಯೂರಪ್ಪನವರಿಗೆ ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಶರಣ ಮೇಳಕ್ಕೆ ದೇಣಿಗೆ ಸಂಗ್ರಹಕ್ಕೆ ಕರೆ

ಶರಣ ಮೇಳದ ಕೀರ್ತಿ ವಿಸ್ತಾರಗೊಳ್ಳುತ್ತಿದೆ. ಸಮಾಜಕ್ಕೆ ಧಾರ್ಮಿಕ ಸಂಸ್ಕಾರ ನೀಡುವ ಸಂಘಟನೆ ಮಾಡುವ ಏಕೈಕ ವಾರ್ಷಿಕ ಸಮಾವೇಶವಿದು. ಧರ್ಮ ಕ್ಷೇತ್ರ ಕೂಡಲ ಸಂಗಮಕ್ಕೆ ವರ್ಷಕ್ಕೊಮ್ಮೆ ಬರಬೇಕೆಂಬ ಹಂಬಲವು ಜನರಲ್ಲಿ ಬೆಳೆಯುತ್ತಿದೆ. ಊಟ -ವಸತಿಗಳ ವ್ಯವಸ್ಥೆಯ ಜವಾಬ್ದಾರಿ ಅಗಾಧವಾದುದಾಗಿದೆ. ಆದ್ದರಿಂದ ಶರಣ ಬಂಧುಗಳು ಸ್ವಯಂ ಪ್ರೇರಣೆಯಿಂದ ತಮ್ಮ ಕಾಣಿಕೆ ಕೊಡುವುದು ಮಾತ್ರವಲ್ಲದೆ ಅನ್ನದಾಸೋಹಕ್ಕೆ ದೇಣಿಗೆ ಸಂಗ್ರಹಿಸಿ ಕೊಡಬೇಕು. ಕೆಲವರಿಗೆ ನಾವು ರಸೀತಿ ಪುಸ್ತಕ ಕಳಿಸುತ್ತೇವೆ. ಎಷ್ಟೋ ಆಸಕ್ತ ಜನರ ಪರಿಚಯ ನಮಗೆ ಇರುವುದಿಲ್ಲ. ಅಂಥ ಆಸಕ್ತರು ಫೋನ್ ಮಾಡಿ ವಿಳಾಸ ತಿಳಿಸಿ ಅಥವಾ ಪತ್ರ ಬರೆದು ರಸೀತಿ ಪುಸ್ತಕ ತರಿಸಿಕೊಂಡು ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಿ ತರಬೇಕೆಂದು ಆತ್ಮೀಯತೆಯಿಂದ ಸೂಚಿಸುತ್ತೇವೆ.

ಧರ್ಮಪಿತರ ವಾಣಿಯು ಹೇಳುತ್ತದೆ:

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನುಮನ ಧನವಲಸದಂತೆ ಮಾಡಯ್ಯ
ತನು ದಾಸೋಹಕ್ಕೆ ಉಬ್ಬುವಂತೆ ಮಾಡು
ಮನ ದಾಸೋಹಕ್ಕೆ ಲೀಯವಹಂತೆ ಮಾಡು,
ಧನ ದಾಸೋಹಕ್ಕೆ ಸವೆದು, ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ
ಪರಿಣಾಮಿಸುವಂತೆ ಮಾಡು, ಲಿಂಗದೇವಾ

ಹೀಗೊಂದು ವಿಲಕ್ಷಣ ಸಂದರ್ಶನ

- ಮಾತಾಜಿ

ಒಂದು ದಿವಸ ಓರ್ವ ಟಿ.ವಿ.ಪ್ರತಿನಿಧಿ ಫೋನ್ ಮಾಡಿ ಮಹತ್ವಪೂರ್ಣವಾದ ಕೆಲವು ಪ್ರಶ್ನೆ ಕೇಳಬೇಕಾಗಿದೆ ಎಂದು, ಸಮಯವನ್ನು ಕೊಡಬೇಕೆಂದು ಕೇಳಿಕೊಂಡನು. ಒಪ್ಪಿಗೆ ನೀಡಿದೆ.ಬಂದಾತ,

"ನೀವು ಪೀಠ ತ್ಯಾಗ ಮಾಡುವಿರಾ?" ಎಂದು ಕೇಳಿದ. ನನಗೆ ಆಶ್ಚರ್ಯವಾಯಿತು. ಏಕೆ ಎಂದೆ. ಆತನ ಪ್ರಶ್ನೆ ಹೀಗಿವೆ.

"ನಿಮ್ಮ ಶಿಷ್ಯೆಯಾಗಿದ್ದ ಒಬ್ಬರು ಕಾವಿ ತೊರೆದು ಹೋಗಿ ನೌಕರಿ ಮಾಡುತ್ತಿದ್ದಾರೆ. ಇನ್ನೊಬ್ಬರು ಮದುವೆಯಾಗಿದ್ದಾರೆ. ಇಂಥವರಿಗೆ ದೀಕ್ಷೆ ಕೊಟ್ಟದ್ದು ನಿಮ್ಮ ತಪ್ಪಲ್ಲವೆ ?"

"ಮಾನವನ ಸ್ವಭಾವ, ಮನಃಸ್ಥಿತಿ ಬಹಳ ಚಂಚಲ. ಜೀವನದ ಕಡೆಯ ಕ್ಷಣದವರೆಗೂ ತನ್ನನ್ನು, ತನ್ನ ಆದರ್ಶವನ್ನು ಸಾಧಕ ಜೀವಿಯು ಕಾಯ್ದುಕೊಳ್ಳಬೇಕಾಗುತ್ತದೆ. ಅದು ಆಗದೇ ಹೋದಾಗ ತಾವು ಹಿಡಿದ ದಾರಿಯಿಂದ ದೂರ ಸರಿಯುತ್ತಾರೆ. ಮುಂದೆ ಹೀಗೇ ಆಗುತ್ತಾರೆ ಎಂದು ಮೊದಲೇ ಯಾರೂ ಊಹಿಸಲು ಸಾಧ್ಯವಿಲ್ಲ." ಎಂದು ನಾನಂದೆ.

"ಗುರುಗಳಾದವರು ಮೊದಲೇ ಅದನ್ನು ತಿಳಿದು ಕೊಂಡಿರಬೇಕಲ್ಲವೆ?

"ಆದರ್ಶವಾದಿಗಳಾಗಿಯೇ ಬಂದಿರುತ್ತಾರೆ. ಮುಂದೆ ಕೆಲವರು ಬದಲಾಗುತ್ತಾರೆ. ಒಂದು ವೇಳೆ ಅಂಥವರು ಸನ್ಯಾಸ ತೊರೆದು ಸಂಸಾರಿಯಾದರೆ ಅದನ್ನು ಅಪರಾಧ ಎಂದು ಏಕೆ ಭಾವಿಸಬೇಕು? ಶ್ರೀ ವಿದ್ಯಾಭೂಷಣರಂಥ ದೊಡ್ಡ ಮಠದ ಸ್ವಾಮಿಗಳೇ ಬದಲಾಗಲಿಲ್ಲವೆ ?

ತಮಗೆ ಸನ್ಯಾಸದ ಮಾರ್ಗ ನೀಗದೆ ಯಾರಾದರೂ ಸೋತರೆ ಅಂಥವರ ಬಗ್ಗೆ ಅನುಕಂಪವಿರಬೇಕು. ಲಾಂಛನ ಧರಿಸಿ ವಂಚನೆ ಮಾಡಿದರೆ ಅದು ಅಪರಾಧ. ಲಾಂಛನ ತೊರೆದು ಸಂಸಾರಿಯಾದರೆ ಅದನ್ನು ಬಹುದೊಡ್ಡ ಅಪರಾಧ ಎನ್ನಬೇಕಾಗಿಲ್ಲ. ಯಾರೋ ಸೋತು ಹೋದರೆ ಅದಕ್ಕಾಗಿ ನಾನೇಕೆ ಪೀಠ ತ್ಯಾಗ ಮಾಡಬೇಕು. ವ್ಯಕ್ತಿ ಸ್ವತಃ ತಪ್ಪು ಮಾಡಿದರೆ ಮಾತ್ರ ಆತ್ಮಬಲ ಕುಂದುವುದು. ಮತ್ತಾರೋ ಮಾಡಿದ್ದಕ್ಕೆ ಬೇರೆಯವರು ಹೇಗೆ ಹೊಣೆಗಾರರಾಗುತ್ತಾರೆ?"

ತೇಜೋವಧೆ ಮಾಡಬೇಕು ಎಂದು ಬಹುಶಃ ಬಂದಿದ್ದ ಅಂತ ಕಾಣುತ್ತದೆ. ಸುಮ್ಮನೆ ಹೋದ. ನಾನು ದೆಹಲಿ ಕಡೆ ಹೋದೆ. ಇಲ್ಲಿ ಸಂದರ್ಶನ ಪ್ರಸಾರವಾಯಿತೋ ಇಲ್ಲವೋ ತಿಳಿಯಲಿಲ್ಲ.

ಧರ್ಮಪಿತರ ಒಂದು ವಚನ,

"ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
ಒಡೆಯ ನಿಮ್ಮ ಬಯ್ಯದಂತೆ ಮಾಡು."

ಎಂಬುದು ನೆನಪಾಯಿತು. ಒಂದು ದನ ಪರರ ಹೊಲದಲ್ಲಿ ಹೋಗಿ ಮೇಯ್ದರೆ ಆಗ ಅದಕ್ಕೆ ಬಡಿದು, ಕೊಂಡವಾಡೆಗೆ ಹಾಕುತ್ತಾರೆ. ಮಾಲಿಕ ದಂಡಕೊಟ್ಟು ಬಿಡಿಸಿಕೊಂಡು ಬರಬೇಕಾಗುತ್ತದೆ. ಹಾಗೆ ಶಿಷ್ಯರು ತಪ್ಪು ಮಾಡಿದರೆ ಗುರುಗಳಿಗೆ ನಿಂದನೆ, ಭಕ್ತ ತಪ್ಪು ಮಾಡಿದರೆ ದೇವರಿಗೇ ದೂಷಣೆ!!

ಶಿಷ್ಯರು ಉನ್ನತ ಸಾಧನೆ ಗೈದರೆ ಗುರುವಿಗೆ ಕೀರ್ತಿ; ಪತಿತರಾದರೆ ಗುರುವಿಗೂ ಅಪಕೀರ್ತಿಯಲ್ಲವೆ ಎನ್ನಿಸಿತು.

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2008ರಂದು ವ್ರತವನ್ನು ಪೂರ್ಣ ಗೊಳಿಸ ಬೇಕು.

1. ಗುರು ಸಾರಾಯ ಸಂಪದ್ ವ್ರತ - ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

ಶರಣ ಮೇಳ ಉತ್ಸವ ಸಮಿತಿ,
ಬಸವ ಮಂಟಪ, 2035, 20ನೇ ಮುಖ್ಯ ರಸ್ತೆ, ಕಾರ್ಡ್‌ರೋಡ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ಲಿಂಗಾಯತರು ಹಿಂದುಗಳಲ್ಲ

ಪೀಠಿಕೆ

-ಮಾತಾಜಿ

1969ನೇ ವರ್ಷದ ಡಿಸೆಂಬರ್ ತಿಂಗಳಿನಲ್ಲಿ ಉಡುಪಿಯಲ್ಲಿ ವಿಶ್ವಹಿಂದು ಪರಿಷತ್‌ನ ವಿರಾಟ್ ಹಿಂದು ಸಮ್ಮೇಳನ ಜರುಗಿದಾಗ ಒಂದು ಚಿಕ್ಕ ಪುಸ್ತಕ ಹಿಂದು ಯಾರು ಎಂಬುದನ್ನು ಬರೆದೆ. ಅತ್ಯಂತ ಜನಪ್ರಿಯವಾಗಿ ಮಾರಾಟವಾಯಿತು. ಮುಂದೆ ಸಾಕಷ್ಟು ವಿಷಯಗಳನ್ನು ಸೇರಿಸಿ ಪುನರ್ವಿಮರ್ಶಿತ ಮತ್ತು ವಿಸ್ತೃತ ಮುದ್ರಣವನ್ನು 1983ರಲ್ಲಿ ಪ್ರಕಟಿಸಿದೆ. 1997ರ ಒಳಗೆ ಹತ್ತು ಮುದ್ರಣಗಳನ್ನು ಈ ಕೃತಿಯು ಕಂಡಿತು. ನಂತರ ಪುಸ್ತಕಕ್ಕೆ ಸಾಕಷ್ಟು ಬೇಡಿಕೆ ಇದ್ದರೂ ಪುಸ್ತಕವನ್ನು ಪುನರ್ ಮುದ್ರಿಸಲಿಲ್ಲ. ಮುಖ್ಯ ಕಾರಣ, ನಮ್ಮಲ್ಲಿ ಆಗಿದ್ದ ವೈಚಾರಿಕ ಬದಲಾವಣೆ.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಮತ್ತು ನಾನು "ಹಿಂದು" ಪದಕ್ಕೆ ಬಹಳ ವಿಸ್ತೃತವಾದ ಅರ್ಥವನ್ನು ನೀಡುತ್ತಿದ್ದೆವು.

"ಹಿಂದು ಇದು ಒಂದು ವಿಶಿಷ್ಟ ಧರ್ಮವಲ್ಲ; ಜಾತಿ, ಮತ, ಪಂಥವಲ್ಲ; ಹಲವಾರು ಸ್ವತಂತ್ರ ಧರ್ಮಗಳ ಒಂದು ಒಕ್ಕೂಟ. ಇದು ವೈವಿಧ್ಯಮಯವಾದ ಹಣ್ಣಿನ ಗಿಡಗಳ ಒಂದು ತೋಟವಿದ್ದಂತೆ."

- ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿ

"ಓಂಕಾರವನ್ನು ನಂಬಿ ಮಂತ್ರದಲ್ಲಿ ಅದನ್ನು ಬಳಸುವವರು ಯಾರೋ ಅವರು ಹಿಂದುಗಳು."

- ಮಾತಾಜಿ

ನಮ್ಮ ಪ್ರತಿಪಾದನೆ ನೋಡಿ ಹರ್ಷಿತರಾಗಿ ಸನ್ಮಾನ್ಯ ಶ್ರೀ ಹೊ.ವೆ.ಶೇಷಾದ್ರಿಯವರು ದಿ. 6-11-1985ರಂದು ಒಂದು ಮೆಚ್ಚುಗೆಯ ಪತ್ರವನ್ನು ಸಹ ಬರೆದಿದ್ದರು.

ಸಮಂಜಸ ಪ್ರತಿಪಾದನೆ

ಪೂಜ್ಯ ಶ್ರೀ ಮಾತೆ ಮಹಾದೇವಿಯವರಿಗೆ ಸಾಷ್ಟಾಂಗ ಪ್ರಣಾಮಗಳು.

ಕಲ್ಯಾಣ ಕಿರಣದ ವಿಶೇಷ ಸಂಚಿಕೆಯ ಮೇಲೆ ಕಣ್ಣಾಡಿಸುವ ಸುಯೋಗ ಲಭಿಸಿತು.

"ಮಾತೃಹರಕೆ" ಯಡಿಯಲ್ಲಿ ಹಾಗೂ ಲಿಂಗಾಯತ ಧರ್ಮ ಸಾರದಲ್ಲಿ ತಾವು ನೀಡಿರುವ ಹಿಂದುತ್ವದ ವ್ಯಾಪಕ ವಿವರಣೆ ನೋಡಿದೆ. ಅತೀವ ಆನಂದವೆನಿಸಿತು.

ಇಂದು ಹತ್ತಾರು ಬಗೆಯಲ್ಲಿ ಒಳಹೊರಗಿನ ಆಸಕ್ತ ಶಕ್ತಿಗಳು ನಮ್ಮ ಸಮಾಜದೊಳಗೆ ಅಂತಃಕಲಹಗಳನ್ನು ಕೆರಳಿಸಲು ಯತ್ನಿಸುತ್ತಿರುವ ವಿಷಮಗಳಿಗೆಯಲ್ಲಿ ತಾವು ನೀಡಿರುವ ಪ್ರತಿಪಾದನೆ ನಿಜಕ್ಕೂ ಸಮಯೋಚಿತವಷ್ಟೆ ಅಲ್ಲ, ಅತ್ಯಂತ ಸಮಂಜಸವೂ ಅಹುದು. **ಬರಿ ಲಿಂಗಾಯತರಷ್ಟೇ ಅಲ್ಲ, ವೈದಿಕರೂ, ಬೌದ್ಧರೂ, ಜೈನರೂ, ಸಿಖ್ಖರೂ ಎಲ್ಲರೂ ಅದರಿಂದ ಬೆಳಕು ಪಡೆಯಬಲ್ಲರು.** ಸಮಾಜದ ಸಂಘಟನೆಗಾಗಿ ನಮ್ಮ ಅಲ್ಪ-ಸ್ವಲ್ಪ ಶಕ್ತಿ ಸವೆಸುತ್ತಿರುವ ನಮ್ಮಂತಹ ಕಾರ್ಯಕರ್ತರಿಗೆ ಅದೊಂದು ಹತ್ತು ಭುಜಬಲ ತಂದು ಕೊಡುವಂತಹ ಮಾತು.

ತಮಗೆ ನಮ್ಮೆಲ್ಲ ಆತ್ಮೀಯ ಸಹ ಕಾರ್ಯಕರ್ತರ ಪರವಾಗಿ ಪ್ರಣಾಮಪೂರ್ವಕ ಕೃತಜ್ಞತೆಗಳು.

ಈಶ ಸೇವೆಯಲ್ಲಿ ತಮ್ಮವ,

ದಿ. 6-11-85

- ಹೊ.ವೆ. ಶೇಷಾದ್ರಿ, ಉತ್ಥಾನ, ಬೆಂಗಳೂರು

ಆದರೆ 1997ರ ನಂತರ ನಮ್ಮ ವಿಚಾರಧಾರೆಯಲ್ಲಿ ಪೂರ್ಣ ಬದಲಾವಣೆಯಾಯಿತು. ಹಿಂದು ಒಂದು ಧರ್ಮವಲ್ಲ ಹಲವು ಧರ್ಮಗಳ ಒಕ್ಕೂಟ ಎಂದು ಭಾವಿಸಿದ ಮೇಲೆ, ಜೈನ -ಬೌದ್ಧ ಲಿಂಗಾಯತ -ಸಿಖ್ ಧರ್ಮಗಳು ಅದರಲ್ಲಿರುತ್ತವೆ ಅಂದಾಗ "ಹಿಂದು" ಒಂದು ಧರ್ಮ ಎಂದು ಹೇಳಬಾರದು. ಹಿಂದು ಒಂದು ಧರ್ಮ ಎಂದು ನಾವು ಒಪ್ಪಿಕೊಂಡರೆ ಆಗ ಅದರೊಳಗಣ ಜೈನ, ಬೌದ್ಧ ಲಿಂಗಾಯತ, ಸಿಖ್ ಕೇವಲ ಜಾತಿಗಳಾಗಿ ಅಥವಾ ಮತ ಪಂಥಗಳಾಗಿ ಉಳಿಯುತ್ತವೆ. ವಾಸ್ತವಿಕವಾಗಿ ಈ ಎಲ್ಲಾ ಧರ್ಮಗಳು ತಮ್ಮದೇ ಆದ ಸ್ವತಂತ್ರ ಅಸ್ತಿತ್ವ, ಆಚಾರ-ವಿಚಾರ ಸಂಹಿತೆಗಳನ್ನೂ ಹೊಂದಿವೆ. ಜಗತ್ತಿನ ಎಲ್ಲ ಗ್ರಂಥಗಳಲ್ಲಿ ಹಿಂದು ಒಂದು ಧರ್ಮ ಎಂದೇ ದಾಖಲಾಗಿದೆ, ವ್ಯವಹರಿಸಲ್ಪಡುತ್ತಿದೆ. ಭಾರತದ ಜನಗಣತಿಯಲ್ಲಿ ಹಿಂದು ಒಂದು ಧರ್ಮ ಎಂದೇ ಪರಿಗಣಿತವಾಗಿದೆ. ಹೀಗಿದ್ದಾಗ ಹಿಂದು - ಹಲವಾರು ಧರ್ಮಗಳ ಒಕ್ಕೂಟ ಎಂಬ ವ್ಯಾಖ್ಯೆ ಬರೀ ಪುಸ್ತಕ ಹಾಗೂ ಭಾಷಣಕ್ಕೆ

ಸೀಮಿತವಾಗುವುದೇ ವಿನಾ ವಾಸ್ತವಿಕವಾಗಿ ಅಲ್ಲ.

ಸಾಂಸ್ಕೃತಿಕವಾಗಿ ವೇಷ ಭೂಷಣ, ಹೆಸರುಗಳು, ಕೌಟುಂಬಿಕ ಪದ್ಧತಿ ಮುಂತಾದ ದೃಷ್ಟಿಯಿಂದ ಲಿಂಗಾಯತರು ಹಿಂದು ಸಂಸ್ಕೃತಿಗೆ ಹತ್ತಿರದಲ್ಲಿ ಇರುವರೇ ವಿನಾ ಧಾರ್ಮಿಕವಾಗಿ ಹಿಂದುಗಳಲ್ಲ. ಸ್ವತಃ ವಿಶ್ವಹಿಂದು ಪರಿಷತ್ ನೀಡಿರುವ ಹಿಂದು ವ್ಯಾಖ್ಯಾನವನ್ನು ಗಮನಿಸಿರಿ.

"ಭಾರತದಲ್ಲಿ ಉದಿಸಿದ ಸನಾತನವಾದ ನೈತಿಕ ಹಾಗೂ ಅಧ್ಯಾತ್ಮಿಕ ಜೀವನ ಸಿದ್ಧಾಂತಗಳಲ್ಲಿ ಆದರ, ಶ್ರದ್ಧೆ ಇಡುವವರು ಮತ್ತು ಅವುಗಳನ್ನು ನಿಷ್ಠೆಯಿಂದ ಪಾಲಿಸುವವರೆಲ್ಲರೂ (ಅವರು ಯಾವುದೇ ದೇಶ, ಪ್ರಾಂತ್ಯ, ಕುಲ, ಜಾತಿ ಮತ್ತು ಸಂಪ್ರದಾಯದವರೇ ಆಗಿರಲಿ) ಮತ್ತು ತಮ್ಮನ್ನು ಹಿಂದುಗಳೆಂದು ಕರೆದುಕೊಳ್ಳುವವರೆಲ್ಲರೂ ಹಿಂದುಗಳು.

ಎಷ್ಟು ಸಡಿಲವಾದ ಅಸಂಬದ್ಧ ವ್ಯಾಖ್ಯಾನ ! ಒಂದು ದೀಕ್ಷೆಯನ್ನು ಕೊಟ್ಟು ಒಳಗೆ ಕರೆದುಕೊಳ್ಳುವುದಿಲ್ಲ, ವೈದಿಕ ಧರ್ಮದ ಮುಖ್ಯ ಲಾಂಛನವಾದ ಜನಿವಾರವನ್ನು ಉಪನಯನದ ಮೂಲಕ ಇತರರಿಗೆ ಕೊಡುವುದಿಲ್ಲ. ಯಾರೇ ಆಗಲಿ ತಮಗೆ ತಾವೇ ಶ್ರದ್ಧೆ ಬೆಳೆಸಿಕೊಂಡು, ಪಾಲನೆ ಮಾಡಿ, ತಮ್ಮನ್ನು ಹಿಂದುಗಳೆಂದು ಕರೆದುಕೊಂಡರೆ ಸಾಕಂತೆ. ಇಂಥ ಅವ್ಯವಸ್ಥೆಗೆ ಕಾರಣ ಒಬ್ಬ ಸಂಸ್ಥಾಪಕ ಗುರು ಹಿಂದು ಧರ್ಮಕ್ಕೆ ಇಲ್ಲದೆ ಇರುವುದು. ಒಂದು ಶಾಸ್ತ್ರವು ಸಮಾಜವನ್ನು ನಿಯಂತ್ರಿಸದೆ ಇರುವುದು. ಜಗತ್ತಿನ ಪ್ರಥಮ ಯೋಗಿಯು, ಓಂಕಾರದ ದ್ರಷ್ಟಾರನು, ಭಾರತೀಯ ಧಾರ್ಮಿಕ ಪರಂಪರೆಯ ಮೂಲ ಪುರುಷನೂ ಆದ "ಯೋಗಿರಾಜ ಶಿವ"ನು ಕೊಟ್ಟ ಶೈವ ಧರ್ಮ ತನ್ನ ಮೂಲ ಸ್ವರೂಪದಲ್ಲಿ ಅಚ್ಚುಕಟ್ಟಾಗಿ ಸಾಗಿ ಬಂದಿದ್ದರೆ ಭಾರತ ದೇಶ ನಿಜಕ್ಕೂ ಒಂದು ಅದ್ಭುತವಾದ ಧರ್ಮವನ್ನು ಹೊಂದಿರುತ್ತಿತ್ತು. ದುರ್ದೈವದಿಂದ ಶಿವನು ಕೊಟ್ಟ ಧರ್ಮವೂ ಆರ್ಯರ ಆಗಮನದ ನಂತರ ಸಂಪೂರ್ಣವಾಗಿ ವೈದಿಕ ಪ್ರಭಾವಕ್ಕೆ ಒಳಗಾಗಿ ಅದರ ವರ್ಣಾಶ್ರಮ, ಪುರೋಹಿತ ಶಾಹಿಯನ್ನು ಅಪ್ಪಿಕೊಂಡಿತು. ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ವಿಕೃತಗೊಂಡಿತು. ಹೀಗಾಗಿ ವೈದಿಕ ವ್ಯವಸ್ಥೆ ಉಂಟು ಮಾಡಿದ ಅನಾಹುತವನ್ನು ಸರಿಪಡಿಸಲು ಹಲವಾರು ಧರ್ಮಗಳು, ಜೈನ - ಬೌದ್ಧ, ಲಿಂಗಾಯತ - ಸಿಖ್ ಧರ್ಮಗಳು ಹುಟ್ಟುವ ಅನಿವಾರ್ಯತೆ ಉಂಟಾಯಿತು. ಭಾರತೀಯ ಧಾರ್ಮಿಕ ಇತಿಹಾಸವನ್ನು ಅಧ್ಯಯನ ಮಾಡಿದಾಗ ಮತ್ತು ಇಲ್ಲಿ ಉದಿಸಿರುವ ಧರ್ಮಗಳ ತೌಲನಿಕ ಅಧ್ಯಯನ ಮಾಡಿದಾಗ ಲಿಂಗಾಯತ ಧರ್ಮವು ಜೈನ -ಬೌದ್ಧ, ಸಿಖ್ ಧರ್ಮಗಳಂತೆ ಸ್ವತಂತ್ರ ಧರ್ಮ ಎಂಬ ಅರಿವು ನಮಗುಂಟಾಯಿತು. ಈ ಅಧ್ಯಯನ ಮತ್ತು ತಿಳುವಳಿಕೆಯ ಹಿನ್ನೆಲೆಯಲ್ಲಿ ಲಿಂಗಾಯತವು ಹಿಂದು ಧರ್ಮದ ಅಂಗವಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದೇವೆ. ಈ ತಿಳುವಳಿಕೆಯ ಫಲಶೃತಿಯೇ ಪ್ರಸ್ತುತ ಕೃತಿ.

ಇದರೆ ಪರಿಣಾಮ ಬಹುಬಗೆಯದಾಗಿದೆ.

1. ಹಿಂದುವಾದಿ ಸಂಘಟನೆಗಳಾದ ವಿಶ್ವಹಿಂದು ಪರಿಷತ್ತು, ಆರ್.ಎಸ್.ಎಸ್ ಮುಂತಾದವರಿಗೆ ಲಿಂಗಾಯತ ಸಮಾಜವು ಹಿಂದೂ ಸಮಾಜದ ವ್ಯಾಪ್ತಿಯಿಂದ ಹೊರಗೆ ಹೋಗುವುದು ಖೇದವನ್ನುಂಟು ಮಾಡುತ್ತದೆ. ಇದರಿಂದ ಹಿಂದು ಸಮಾಜದ ಶಕ್ತಿ ದುರ್ಬಲವಾಗುತ್ತದೆ ಎಂಬ ಆತಂಕ ಅವರನ್ನು ಕಾಡಬಹುದು.

2. ಹಿಂದು ರಾಷ್ಟ್ರದ ಏಳಿಗೆಯನ್ನೇ ಗುರಿಯಾಗಿಸಿಕೊಂಡ ಸಂಘ ಪರಿವಾರ ಮತ್ತು ಇನ್ನಿತರ ಹಿಂದುವಾದಿಗಳಿಗೆ ಭಾರತದ ಸಮಗ್ರತೆಗೆ ಧಕ್ಕೆ ಉಂಟಾಗುತ್ತದೆ ಎಂಬ ಆತಂಕವೂ ಕಾಡಬಹುದು.

ಇವೆರಡೂ ಅರ್ಥವಿಲ್ಲದ ಆತಂಕಗಳು. ಏಕೆಂದರೆ ಧಾರ್ಮಿಕವಾಗಿ ಸೈದ್ಧಾಂತಿಕವಾಗಿ ಲಿಂಗಾಯತರು ಹಿಂದುಗಳಾಗದಿದ್ದರೂ ಸಾಂಸ್ಕೃತಿಕವಾಗಿ ದೇಶೀಯ ಹೆಸರುಗಳು, ವೇಷ ಭೂಷಣಗಳಿಂದ ಹಿಂದು ವಿರೋಧಿ (Anti-Hindu) ಯಂತೂ ಖಂಡಿತಾ ಆಗರು. ದೇಶ ಹಿತ ದೃಷ್ಟಿಯಿಂದ ಜೈನರು, ಲಿಂಗಾಯತರು, ಸಿಖ್ಖರು ಎಂದೂ ಭಾರತದ ವಿರೋಧಿಗಳಾಗರು. ಏಕೆಂದರೆ ಲಿಂಗಾಯತರಿಗೆ ಭಾರತವು ಧರ್ಮಭೂಮಿ. ಯಾವ ಧರ್ಮಗಳ ಸ್ಥಾಪಕರು ಭಾರತದಲ್ಲಿ ಹುಟ್ಟಿರುವರೋ ಆ ಧರ್ಮಗಳ ಅನುಯಾಯಿಗಳು ಎಲ್ಲಿಯೇ ಇರಲಿ ಅವರಿಗೆ ಭಾರತವು ಧರ್ಮಭೂಮಿ. ಯಾರೇ ಆಗಲಿ ಅವರು ಹುಟ್ಟಿ ಬೆಳೆದ ದೇಶವು ಮಾತೃಭೂಮಿಯಾದರೆ ಅವರ ಧರ್ಮದ ಆದ್ಯರು ಹುಟ್ಟಿದ ದೇಶ ಧರ್ಮ ಭೂಮಿ. "ಲಿಂಗಾಯತವು ಸ್ವತಂತ್ರ ಧರ್ಮ, ಅಹಿಂದು ಧರ್ಮ" ಎಂಬ ಜಾಗೃತಿಯಿಂದ ಆಗುವ ಸತ್ಪರಿಣಾಮಗಳು ಕೆಳಗಿನಂತೆ ಇವೆ.

1. ವಿಶ್ವಗುರು ಬಸವಣ್ಣನವರು ಕೊಟ್ಟ ಪ್ರಗತಿಪರ ಚಿಂತನೆಯ, ವೈಚಾರಿಕ ಧರ್ಮವಾದ ಲಿಂಗಾಯತ ಎಂಬ ಧರ್ಮವು ಅಸ್ತಿತ್ವದಲ್ಲಿ ಇರುವುದು ಭಾರತ ದೇಶಕ್ಕೆ ಮಾತ್ರವಲ್ಲ ಇಡೀ ಜಗತ್ತಿಗೆ

ಗೊತ್ತಾಗುವ ಅವಕಾಶ ದೊರೆಯುವುದು.

2. ಜಾಗತಿಕ ಧರ್ಮಗಳ ಸಾಲಿನಲ್ಲಿ ಲಿಂಗಾಯತ ಧರ್ಮದ ಹೆಸರು ಸೇರ್ಪಡೆಯಾಗುವುದು.

3. ಅನೇಕ ಲಿಂಗಾಯತರು ತಮ್ಮ ಧರ್ಮಗುರುವಿನ ಆಶಯ, ಧರ್ಮದ ಸಂವಿಧಾನಕ್ಕೆ ವಿರುದ್ಧವಾಗಿ ಹೋಮ - ಹವನ, ನವಗ್ರಹ ಪೂಜೆ, ಪ್ರಾಣಿಬಲಿ, ಅನ್ಯ ದೇವತಾರ್ಚನೆ, ಗಿಡ ಮರಗಳ ಪೂಜೆ ಮುಂತದ್ದರಲ್ಲಿ ತೊಡಗಿದ್ದಾರೆ. ಅವರಿಗೆ ಧರ್ಮವನ್ನು ಬೋಧಿಸಬೇಕಾದ ಗುರುಗಳು, ಮಠಾಧೀಶರೇ ಇಂಥವನ್ನೆಲ್ಲ ಮಾಡುತ್ತಿರುವುದರಿಂದ ಅವರು ಲಿಂಗಾಯತ ಧರ್ಮದ ಜೀವಾಳವಾದ ಏಕದೇವೋಪಾಸನೆಯನ್ನು ಮುಚ್ಚಿಡುತ್ತಿದ್ದಾರೆ; ಬೋಧಿಸುವ ನೈತಿಕ ಹಕ್ಕನ್ನು ಕಳೆದುಕೊಂಡಿದ್ದಾರೆ. ಜನರು ಅಜ್ಞಾನದಿಂದ ವರ್ತಿಸುತ್ತಿದ್ದಾರೆ. ವಚನ ಸಾಹಿತ್ಯವನ್ನು ಓದುತ್ತ ಹೋದಂತೆ ಜನರೇ ಮಠಾಧೀಶರು ಮಾಡುವ ತಪ್ಪು ಆಚರಣೆಗಳನ್ನು ಶೀಘ್ರವಾಗಿ ಗುರುತಿಸುತ್ತಾರೆ. ಲಿಂಗಾಯತ ಧರ್ಮದ ನಿಜ ಸ್ವರೂಪವನ್ನು ತಿಳಿದಾಗ ಭಯ ನಿವಾರಣೆಯಾಗಿ ಆತ್ಮಬಲವು ಹೆಚ್ಚುತ್ತದೆ.

4. ಗುರು ಬಸವಣ್ಣನವರು ಮತ್ತು ಅವರ ಸಮಕಾಲೀನರ ವಚನಗಳನ್ನು ಓದಿದಾಗ ಮೂಡುವ ಒಂದು ಸುಂದರ ಶರಣ ಸಮಾಜದ ಕಲ್ಪನೆ ಇಂದು ರೂಪುಗೊಂಡಿರುವ ಲಿಂಗಾಯತ ಸಮಾಜವನ್ನು ನೋಡಿದಾಗ ನೀರಿನ ಗುಳ್ಳೆಯಂತೆ ಒಡೆಯುವುದು "ಬಸವ ತತ್ವ ತುಂಬಾ ಚನ್ನಾಗಿವೆ. ಈ ಜನರೇಕೆ ಹೀಗಿದ್ದಾರೆ ?" ಎಂದು ವಚನ ಸಾಹಿತ್ಯಾಭಿಮಾನಿಗಳು ಕೇಳುವುದುಂಟು. ಈ ವೈಪರೀತ್ಯಕ್ಕೆ ಕಾರಣ ಸಮಾಜವು ವಚನ ಸಾಹಿತ್ಯದೊಡನೆ ಸಂಪರ್ಕ ಕಲ್ಪಿಸಿಕೊಳ್ಳದೆ ಇರುವುದು. ಹೀಗಾಗಿ ಲಿಂಗಾಯತರು ತಾವು ಮಾಡುತ್ತಿರುವ ತಪ್ಪು ಆಚರಣೆಗಳಲ್ಲೇ ಸಮಾಧಾನ - ಸಂತೋಷ ಕಾಣುತ್ತಿರುವರು. ತಮ್ಮದು ಸ್ವತಂತ್ರ, ಅವೈದಿಕ ಧರ್ಮ ಎಂಬ ಅರಿವು ಉಂಟಾದಾಗ ತಾತ್ವಿಕ ಶುದ್ಧೀಕರಣ ಬೇಗನೇ ಸಾಧ್ಯವಾಗುವುದು. ತಮ್ಮ ಧರ್ಮಕ್ಕೆ ಹೊರತಾದ, ಧರ್ಮಗುರುವಿನ ಆಶಯಕ್ಕೆ ವಿರುದ್ಧವಾದ ಆಚರಣೆಗಳನ್ನು ಬಿಡುವ ಪ್ರಯತ್ನ ಮಾಡುವರು. ಅವರು ತಿದ್ದಿಕೊಳ್ಳಲಿ ಬಿಡಲಿ ಕನಿಷ್ಠ ಪಕ್ಷ ತಾವು ಮಾಡುತ್ತಿರುವುದು ತಪ್ಪು ಎಂದಾದರೂ ಮನವರಿಕೆಯಾಗದೆ ಇರದು.

ಈ ದೃಷ್ಟಿಯಿಂದ ಪ್ರಸ್ತುತ ಲೇಖನ ಬಹಳ ಉಪಯುಕ್ತ ಎಂದು ಭಾವಿಸಿದ್ದೇನೆ.

ಹಿಂದು ಧರ್ಮ ಎಂದರೇನು ?

ಲಿಂಗಾಯತ ಧರ್ಮದ ಸ್ವರೂಪ ತಿಳಿಯುವ ಮೊದಲು, ಲಿಂಗಾಯತರು ಹಿಂದುಗಳಲ್ಲವೆಂದು ಮನವರಿಕೆ ಮಾಡಿಕೊಳ್ಳಲು ಹಿಂದು ಧರ್ಮದ ಸ್ವರೂಪ ತಿಳಿಯುವುದು ಅಗತ್ಯವಿದೆ. ಹಿಂದು ಧರ್ಮವನ್ನು ಸಾವಿರಾರು ಪುಟಗಳಲ್ಲಿ ವಿವರಿಸಬಹುದೇ ವಿನಾ ಕೆಲವೇ ವಾಕ್ಯಗಳಲ್ಲಿ ವ್ಯಾಖ್ಯಾನಿಸಲು ಸಾಧ್ಯವಿಲ್ಲ.

"ಹಿಂದು ಎಂಬುದು ಪುರಾತನ ಪರ್ಶಿಯನ್ನರು ಸಿಂಧೂ ನದಿಯನ್ನು ಉದ್ದೇಶಿಸಿ ಹೇಳುತ್ತಿದ್ದ ಶಬ್ದವಾಗಿದ್ದಿತು. ಸಂಸ್ಕೃತದಲ್ಲಿರುವ '**ಸ**' ಕಾರಗಳೆಲ್ಲವೂ ಪುರಾತನ ಪರ್ಶಿಯಾ ಭಾಷೆಯಲ್ಲಿ '**ಹ**' ಕಾರವಾಗಿ ಬದಲಾಗುತ್ತಿದ್ದು, "**ಸಿಂಧು**" ಎನ್ನುವುದು "**ಹಿಂದು**"ವಾಯಿತು.

- ಸ್ವಾಮಿ ವಿವೇಕಾನಂದರು.

ಸಿಂಧು ನದಿಯ ಬಯಲಲ್ಲಿ ವಾಸಿಸುತ್ತಿದ್ದ ಜನರನ್ನು ಹಿಂದುಗಳೆಂದು ಕರೆಯುವ ಪರಿಪಾಠ ಪರ್ಶಿಯಾ, ಗ್ರೀಸ್, ಅರೇಬಿಯಾ ಮುಂತಾದ ಜನರಿಂದ ರೂಢಿಗೆ ಬಂದಿತು. ಆರಂಭದಲ್ಲಿ ಹಿಂದು ಪದ ಭೌಗೋಲಿಕವಾಗಿ ಆರಂಭವಾಯಿತೇ ವಿನಾ ಧರ್ಮ ಸೂಚಕವಾಗಿರಲಿಲ್ಲ. ಪರ್ಶಿಯನ್ನರು ಸ ಕಾರವನ್ನು ಹ ಕಾರವಾಗಿ ಉಚ್ಚರಿಸುವ ಅಭ್ಯಾಸ ಹೊಂದಿದ್ದರಿಂದ ಸಿಂಧುಗಳು ಎಂಬ ಪದ ಹಿಂದು ಎಂದು ಆಯಿತು. ಮೊದಲು ಸಿಂಧು ನದಿಯ ಬಯಲಲ್ಲಿ ಇದ್ದವರಿಗೆ ಅನ್ವಯವಾದುದು ಕಾಲಾನಂತರ ಭರತ ಖಂಡದ ನಿವಾಸಿಗಳಿಗೆ ಅನ್ವಯವಾಗ ತೊಡಗಿತು. ವಚನ ವಾಙ್ಮಯವನ್ನೇ ತೆಗೆದುಕೊಂಡರೆ ಅಲ್ಲಿ ಶೈವ, ವೈದಿಕ, ವೈಷ್ಣವ, ಶಾಕ್ತ, ಕಾಳಾಮುಖ, ಕಾಪಾಲಿಕ ಮುಂತಾದ ಪದಗಳು ಬರುತ್ತವೇ ವಿನಾ ಹಿಂದು ಪದ ಬಳಕೆಯಾಗಿಲ್ಲ. ಭರತ ಖಂಡದ ಹೊರಗಿನಿಂದ ಬರತೊಡಗಿದ ಜನರು ಮೂಲ ನಿವಾಸಿಗಳನ್ನು ಹಿಂದು ಪದದಿಂದ ಜನಾಂಗ ವಾಚಕವಾಗಿ ಕರೆದರು. ವಾಸ್ತವಿಕವಾಗಿ ಹಿಂದು ಧರ್ಮವೇ ಅಲ್ಲ, ಮುಸಲೀಮರು ಮೂಲ ನಿವಾಸಿಗಳನ್ನು ಹಿಂದುಗಳು ಎನ್ನುತ್ತ ಈ ದೇಶವನ್ನು ಹಿಂದೂ ಸ್ಥಾನ ಎನ್ನತೊಡಗಿದರು. ಆಗ ಹಿಂದುಸ್ಥಾನದಲ್ಲಿದ್ದ ಜೈನ, ಬೌದ್ಧ ಎಲ್ಲರೂ ಅವರಿಗೆ ಹಿಂದುಗಳೇ ಎನಿಸಿದರು. ಅವರ ಪ್ರಕಾರ ಹಿಂದುಗಳೆಂದರೆ ಮುಸ್ಲೀಮರಲ್ಲದವರು.

ಮುಂದೆ ಬ್ರಿಟಿಷರು ಆಡಳಿತ ನಡೆಸ ತೊಡಗಿದಾಗ ಅವರು ಅಧ್ಯಯನ ಮಾಡುತ ಸಾಂಪ್ರದಾಯಿಕ ಹಿಂದು ಧರ್ಮಕ್ಕೆ ಬೇರೆಯೇ ಆದ ಆಚರಣೆಗಳನ್ನು ಜೈನ, ಬೌದ್ಧ, ಸಿಖ್ಖರು

ಹೊಂದಿರುವುದನ್ನು ಗಮನಿಸಿ ಅವನ್ನು ಅಹಿಂದು ಧರ್ಮಗಳೆಂದು ಗುರುತಿಸಿದರು. ಸಾಂಪ್ರದಾಯಿಕ ಹಿಂದುಗಳು ತಮ್ಮದು ವೈದಿಕ ಧರ್ಮವೆಂದು, ಸನಾತನ ಧರ್ಮವೆಂದು ಹೇಳಿಕೊಳ್ಳುತ್ತಿದ್ದರು. ಭಾರತದಲ್ಲಿ ಇದ್ದ ಮೂಲ ನಿವಾಸಿಗಳಾದ ಬುಡಕಟ್ಟು ಜನರು ಮತ್ತು ದ್ರಾವಿಡ ಜನಾಂಗ, ನಂತರ ಬಂದ ಆರ್ಯರು - ಹೀಗೆ ಎಲ್ಲರ ನಂಬಿಕೆ - ಆಚಾರ - ವಿಚಾರ ಕೂಡಿ ಕಲಸು ಮೇಲೋಗರವಾಗಿ ಹಿಂದು ಧರ್ಮ ಎಂದು ಕರೆಯಲ್ಪಟ್ಟಿತು. ಹೀಗಾಗಿಯೇ ಅದರಲ್ಲಿ ಇದಮಿತ್ಥಮ್ ಎಂದು ಖಚಿತವಾಗಿ ಇದೇ ಸರಿ ಎಂದು ಹೇಳದೆ ಇರುವ ವಾತಾವರಣ ನಿರ್ಮಾಣವಾಗಿರುವುದು.

ಹಿಂದು ಧರ್ಮಕ್ಕೆ ಒಬ್ಬ ಸ್ಥಾಪಕರಿಲ್ಲ. ಹಾಗೆ ನೋಡಿದರೆ ಆರ್ಯರು ಭಾರತವನ್ನು ಪ್ರವೇಶಿಸುವ ಮೊದಲು ಇದ್ದ ಶಿವ ಸಂಸ್ಕೃತಿಯ ಮೂಲ ಪುರುಷ ಯೋಗಿರಾಡ ಶಿವ ಒಂದು ರೀತಿಯಲ್ಲಿ ಸ್ಥಾಪಕನೆನ್ನಬಹುದು. ಏಕೆಂದರೆ ಓಂಕಾರದ ದ್ರಷ್ಟಾರ ಶಿವ. ಹೇಗೆ ಹಿಮಾಲಯದಲ್ಲಿ ಹುಟ್ಟಿದ ಗಂಗಾ ತನ್ನೊಡನೆ ಹಲವಾರು ಹಳ್ಳ, ನದಿಗಳನ್ನು ಸೇರಿಸಿಕೊಂಡು ಬೆಳೆಯುತ್ತಾ ಸಾಗಿ ಬೃಹತ್ ನದಿಯಾಯಿತೋ ಹಾಗೆ ಶಿವನಿಂದ ಉಗಮಿಸಿದ ಶೈವ ಧರ್ಮ ಕಾಲಾನಂತರದಲ್ಲಿ ಆಗಮಿಸಿದ ಆರ್ಯ ಧರ್ಮ-ಸಂಸ್ಕೃತಿಗಳನ್ನು ಒಳಗೊಂಡು, ನಂತರದ ದಿನಗಳಲ್ಲಿ ಪರ್ಶಿಯನ್ನರು ಮುಂತಾದವರಿಂದ ಹಿಂದು ಧರ್ಮ ಎನ್ನಿಸಿಕೊಂಡಿತು. ಅನೇಕ ಋಷಿ ಮುನಿಗಳು, ಸಾಧು ಸಂತರು, ತತ್ವಜ್ಞಾನಿಗಳು - ದಾರ್ಶನಿಕರು, ಪೂಜಾರಿ - ಪುರೋಹಿತರು ಎಲ್ಲರೂ ಬರೆದಂತಹ ಮಾತುಗಳು - ಪರಸ್ಪರ ವೈರುಧ್ಯತೆಯಿಂದ ಕೂಡಿದವುಗಳೆಲ್ಲ ಹಿಂದು ಧರ್ಮದೊಳಕ್ಕೆ ಸೇರ್ಪಡೆಯಾಗಿವೆ.

ಸ್ವತಃ ವೇದಗಳಲ್ಲೇ ಪರಸ್ಪರ ವಿರುದ್ಧವಾದ ವಿಚಾರಗಳಿವೆ. ದೇವನೊಬ್ಬನೆ ಎಂಬ ವಿಚಾರವಿದೆ ಜೊತೆ ಜೊತೆಯಲ್ಲೇ ಮಿತ್ರ, ಅಗ್ನಿ, ವರುಣ, ಪೂಷನ್ ಇತ್ಯಾದಿ ದೇವತೆಗಳ ಸ್ತುತಿ ಇದೆ. ನಿರೀಶ್ವರವಾದವೂ ಇದೆ; ಸೇಶ್ವರವಾದವೂ ಇದೆ. ಜ್ಞಾನಕಂಡವೂ ಇದೆ ಕರ್ಮಕಾಂಡವೂ ಇದೆ. ಯಜ್ಞ ಯಾಗಾದಿಗಳ ಆಚರಣೆ ಇದೆ, ಅದರ ಖಂಡನೆ ಕೂಡ ಇದೆ. ಬ್ರಹ್ಮ ಸೂತ್ರ, ಉಪನಿಷತ್‌ಗಳಿಗೆ ಭಾಷ್ಯವನ್ನು ಬರೆಯಲಾಗಿದೆಯಷ್ಟೆ. ಅದೇ ಶ್ಲೋಕಗಳಿಗೆ ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಪರ ಭಾಷ್ಯ ಬರೆಯಲಾಗಿದೆ. ದಯೆ ಅಹಿಂಸೆ ಮುಂತಾದ ನೀತಿಯನ್ನು ಬೋಧೆ ಮಾಡಿರುವುದೂ ಇದೆ. ಕ್ಷುದ್ರ ದೇವತೆಗಳಿಗೆ ಪ್ರಾಣಿ ಬಲಿ ಕೊಡುವುದೂ ಇದೆ. ಅತ್ಯಂತ ಸುಸಂಸ್ಕೃತ ವಾದ ಯೋಗ -ಧ್ಯಾನ ಮುಂತಾದ ಕ್ರಿಯೆಗಳು ಇವೆ. ಸ್ವೇಚ್ಛಾಚಾರದ ತಾಂತ್ರಿಕ ಮಾರ್ಗಗಳೂ ಇವೆ. ಪರಸ್ಪರ ರಾಗದ್ವೇಷಗಳಿಂದ ಹೊಡೆದಾಡುವ ದೇವತೆಗಳ ಚರಿತ್ರೆಗಳನ್ನು ಪುಣ್ಯ ಕಥೆಗಳೆಂದು ಕೇಳುವ ಪರಿಪಾಠದ ಜೊತೆಗೆ ಬ್ರಹ್ಮಚರ್ಯ, ಪಾತಿವ್ರತ್ಯ, ಏಕಪತ್ನಿ ವ್ರತ ಮುಂತಾದ ಆದರ್ಶಗಳ ವೈಭವೀಕರಣವೂ ಇದೆ. ಹೀಗೆ ಹಿಂದು ಧರ್ಮವು ಅತ್ಯಂತ ಸಂಕೀರ್ಣ ವ್ಯವಸ್ಥೆಯಿಂದ ಕೂಡಿದ ಧರ್ಮವಾಗಿದೆ.

ಈ ಹಿನ್ನೆಲೆಯಲ್ಲಿ ಸಾಮಾನ್ಯವಾಗಿ ಏಕರೂಪದ ಸಿದ್ಧಾಂತ, ನಂಬಿಕೆ, ಆಚಾರ -ವಿಚಾರ, ವಿಧಿ -ವಿಧಾನಗಳಿಂದ ಕೂಡಿದ ಜೈನ್, ಬೌದ್ಧ, ಲಿಂಗಾಯತ -ಸಿಖ್ ಧರ್ಮಗಳು ಹಿಂದು ಧರ್ಮದಿಂದ ಬೇರೆಯೇ ಆಗಿ ನಿಲ್ಲುತ್ತವೆ.

ಶ್ರೀ ಬಾಲಗಂಗಾಧರ ತಿಲಕರು ಹೇಳುತ್ತಾರೆ, "Acceptance of the Vedas with reverence, recognition of the fact that the means or ways to salvation are diverse; and the realization of the truth that the number of gods to be worshipped is large; that indeed is the distinguishing feature of Hinduism" ("ವೇದಗಳನ್ನು ಭಕ್ತಿಯಿಂದ ಮಾನ್ಯಮಾಡುವುದು, ಮೋಕ್ಷಸಾಧನೆಗೆ ಹಲವಾರು ಮಾರ್ಗಗಳಿವೆ ಎಂದು ಗುರುತಿಸುವುದು, ಪೂಜಾಯೋಗ್ಯವಾದ ದೈವಗಳ ಸಂಖ್ಯೆ ಅಪಾರವಾದುದು ಎಂಬ ಸತ್ಯವನ್ನು ಮನಗಾಣುವುದು -ಇದು ನಿಜವಾಗಿಯೂ ಹಿಂದೂತ್ವದ ಲಕ್ಷಣ."..

ವೇದಗಳನ್ನು (ಪ್ರಮಾಣ ಗ್ರಂಥಗಳೆಂದು) ಮಾನ್ಯ ಮಾಡುವುದು, ಮೋಕ್ಷ ಮಾರ್ಗಕ್ಕೆ ಹಲವಾರು ಮಾರ್ಗಗಳಿವೆ ಎಂದು ಒಪ್ಪಿಕೊಳ್ಳುವುದು, ಪೂಜಿಸಲು ಅರ್ಹವಾದ ಅಸಂಖ್ಯಾತ ದೈವಗಳಿವೆ ಎಂದು ನಂಬುವುದು - ಇವೆಲ್ಲ ಹಿಂದೂ ಧರ್ಮದ ವಿಶೇಷ ಲಕ್ಷಣಗಳು.

ಗೋ ಸಂರಕ್ಷಣೆ ಹಿಂದು ಧರ್ಮದ ಮುಖ್ಯ ಕರ್ತವ್ಯ; ಅದನ್ನು ಮಹಾತ್ಮಾ ಗಾಂಧೀಜಿ ಹೀಗೆ ಹೇಳುತಾರೆ. " Cow protection is dearest possession of the Hindu sect. No one who does not believe in cow protection can

possibly be a Hindu. It is a noble belief. Cow worship means to me worship of innocence"

"ಗೋರಕ್ಷಣೆ ಹಿಂದೂ ಪಂಥದ ಅತ್ಯಂತ ಆತ್ಮೀಯ ಆಸ್ತಿ, ಗೋರಕ್ಷಣೆಯಲ್ಲಿ ನಂಬಿಕೆಯಿಲ್ಲದವನು ಹಿಂದೂ ಆಗಲಾರೆ. ಅದೊಂದು ಉದಾತ್ತ ನಂಬಿಕೆ. ನನಗೇನೋ ಗೋಪೂಜೆಯೆಂದರೆ ಮುಗ್ಧತ್ವದ ಪೂಜೆ ಎನಿಸುತ್ತದೆ".

ಶುದ್ಧ ಸಸ್ಯಾಹಾರಿ ಧರ್ಮವಾದ ಲಿಂಗಾಯತವು ಕೇವಲ ಗೋ ಮಾತ್ರವಲ್ಲ ಕುದುರೆ, ಕುರಿ, ಆಡು, ಆನೆ, ಕೋಳಿ ಇತ್ಯಾದಿ ಎಲ್ಲ ಜೀವಾತ್ಮರುಗಳ ಬದುಕುವ ಹಕ್ಕನ್ನು ಎತ್ತಿ ಹಿಡಿಯುತ್ತದೆ. ಪ್ರಾಣ ಪೂಜೆ ನಿಷಿದ್ಧವಾದ್ದರಿಂದ ಗೋವಿನ ಪೂಜೆ ಮಾಡುವುದಿಲ್ಲ. ಹಿಂದುವಿಗೆ ಗೋ, ಗಂಗಾ, ಗಾಯತ್ರಿ, ಗೀತೆ ಇವು ಪೂಜನೀಯ. ಆದರೆ ಲಿಂಗಾಯತದಲ್ಲಿ ಇವು ಇವೆಯೆ ಹೇಗೆ? ಇದು ಹಿಂದು ಧರ್ಮದಿಂದ ಭಿನ್ನವೋ ಅಥವಾ ಅವಿಭಾಜ್ಯ ಅಂಗವೋ ಎಂಬುದನ್ನು ನೋಡೋಣ.

ಹಿಂದು ಧರ್ಮ	ಲಿಂಗಾಯತ ಧರ್ಮ
01. ಒಬ್ಬ ಸ್ಥಾಪಕ ಗುರು ಇಲ್ಲ	01. 12ನೆಯ ಶತಮಾನದ ಬಸವಣ್ಣನವರು ಸ್ಥಾಪಕರು
02. ನಾಸ್ತಿಕರು, ನಿರೀಶ್ವರ ವಾದಿಗಳು, ಸೇಶ್ವರವಾದಿಗಳು	02. ಸೇಶ್ವರವಾದಿ ಧರ್ಮ - ಸೃಷ್ಟಿಕರ್ತನನ್ನು ಕಡ್ಡಾಯವಾಗಿ ನಂಬುತ್ತದೆ.
03. ವೇದ, ಆಗಮ ಪ್ರಮಾಣ ಮಾನ್ಯ	03. ವೇದಾಗಮ ಪುರಾಣ ಮಾನ್ಯವಲ್ಲ, ವಚನ ಸಾಹಿತ್ಯ ಆಧಾರ
04. ಚತುರ್ವರ್ಣಗಳನ್ನು ನಂಬುತ್ತದೆ	04. ಜಾತಿ ವರ್ಣ ವಿಭಜನೆ ಒಪ್ಪುವುದಿಲ್ಲ
05. ದ್ವಿಜವರ್ಣದವರಿಗೆ ಉಪನಯನ	05. ಎಲ್ಲ ಮಾನವರಿಗೆ ಇಷ್ಟಲಿಂಗ ದೀಕ್ಷೆ
06. ಸ್ತ್ರೀಯರಿಗೆ ಉಪನಯನವಿಲ್ಲ	06. ಪುರುಷರಂತೆ ಸ್ತ್ರೀಯರಿಗೆ ದೀಕ್ಷೆ ಇದೆ
07. ಹಲವು ದೇವತೆಗಳಲ್ಲಿ ನಂಬಿಕೆ ಬಹುದೇವತೋಪಾಸನೆ	07. ಸೃಷ್ಟಿಕರ್ತ ಲಿಂಗದೇವನಲ್ಲಿ ಮಾತ್ರ ನಂಬಿಕೆ -ಏಕದೇವೋಪಾಸನೆ
08. ತೀರ್ಥಕ್ಷೇತ್ರ ಯಾತ್ರೆಯಲ್ಲಿ ನಂಬಿಕೆ	08. ತೀರ್ಥಕ್ಷೇತ್ರ ಯಾತ್ರೆಯಲ್ಲಿ ನಂಬಿಕೆಯಿಲ್ಲ
09. ಜ್ಯೋತಿಷ್ಯ, ವಾಸ್ತು ಮೂಹೂರ್ತಗಳಲ್ಲಿ ನಂಬಿಕೆ	09. ಈ ಯಾವುಗಳಲ್ಲಿಯೂ ನಂಬಿಕೆಯಿಲ್ಲ
10. ಶ್ರದ್ಧಾ ಕೇಂದ್ರ - ಮಂದಿರ	10. ಶ್ರದ್ಧಾ ಕೇಂದ್ರ ಅನುಭವ (ಬಸವ) ಮಂಟಪ
11. ಸಸ್ಯಾಹಾರ ಮಾಂಸಾಹಾರ ಎರಡೂ ಉಂಟು	11. ಕಡ್ಡಾಯ ಸಸ್ಯಾಹಾರ
12. ಹೋಮ -ಹವನ, ಯಜ್ಞ-ಯಾಗ, ಪ್ರಾಣಿ ಬಲಿ ಎಲ್ಲ ಉಂಟು	12. ಇವೆಲ್ಲವೂ ನಿಷಿದ್ಧ
13. ವಿವಾಹದಲ್ಲಿ ಅಗ್ನಿಸಾಕ್ಷಿ, ಸಪ್ತಪದಿ, ಪೌರೋಹಿತ್ಯ ಉಂಟು	13. ಅಗ್ನಿಸಾಕ್ಷಿ, ಸಪ್ತಪದಿ ಇಲ್ಲ. ಕೇವಲ ಗುರು-ಲಿಂಗ-ಜಂಗಮ ಸಾಕ್ಷಿ ಮಾತ್ರ
14. ದ್ವಿಜರ ಶವಗಳನ್ನು ಸುಡುವರು	14. ಲಿಂಗಾಯತರೆಲ್ಲರ ಶವಗಳು ಹುಗಿಯುವರು
15. ಪುರೋಹಿತನ ಮೂಲಕ ಪೂಜೆ	15. ಭಕ್ತನಿಂದ ದೇವನ ನೇರವಾದ ಪೂಜೆ
16. ಹಿಂದು ಧರ್ಮೀಯರಲ್ಲಿ ಒಳಗಿನ ಜಾತಿಗಳ--ರಲ್ಲಿ ಪರಸ್ಪರ ವೈವಾಹಿಕ ಸಂಬಂಧವಿಲ್ಲ	16. ಲಿಂಗಾಯತರ ಒಳಪಂಗಡಗಳಲ್ಲಿ ಪರಸ್ಪರ ವೈವಾಹಿಕ ಸಂಬಂಧ ಸಹಜವಾಗಿ ಆಗುತ್ತದೆ
17. ಹಿಂದುಯೇತರರನ್ನು ದೀಕ್ಷೆಯ ಮೂಲಕ ಒಳಗೆ ಕರೆದುಕೊಳ್ಳಲಾಗುವುದಿಲ್ಲ	17. ದೀಕ್ಷೆಯ ಮೂಲಕ ಯಾರನ್ನು ಬೇಕದರೂ ಒಳಗೆ ತೆಗೆದುಕೊಳ್ಳಬಹುದು
18. ಜನನ, ಮರಣ, ಉಚ್ಚಿಷ್ಟ, ಜಾತಿ, ರಜೋ ಸೂತಕಗಳು ಆಚರಿಸಲ್ಪಡುತ್ತವೆ.	18. ಪಂಚ ಸೂತಕಗಳು ನಿಷೇಧಿಸಲ್ಪಟ್ಟವೆ.
19. ಪಾಪಕ್ಕೆ ಪ್ರಾಯಶ್ಚಿತ್ತವಿದೆ.	19. ಪ್ರಾಯಶ್ಚಿತ್ತವಿಲ್ಲ ಕೇವಲ ಪಶ್ಚಾತಾಪಕ್ಕೆ
20. ವ್ರತ ನೇಮ ಉಪವಾಸಗಳಿವೆ.	20. ಧಾರ್ಮಿಕ ಆಚರಣೆಯಾಗಿ ಇಲ್ಲ
21. ಉದ್ಯೋಗಗಳಲ್ಲಿ ಮೇಲು ಕೀಳು ಇದೆ.	21. ಎಲ್ಲಾ ಉದ್ಯೋಗಗಳು ಉದ್ಯೋಗಿಗಳು ಸಮ

(ಮುಂದುವರಿಯುವುದು.........)

ಅಕ್ಟೋಬರ್ ೨೭, ೨೮, ೨೯ರಂದು ರಾಷ್ಟ್ರದ ರಾಜಧಾನಿಯಲ್ಲಿ ಸಂಪನ್ನಗೊಂಡ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನ ನಮ್ಮ ಧರ್ಮದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡುವ ಘಟನೆ - ಸಮ್ಮೇಳನದ ಸಮಗ್ರ ವರದಿ ಇಲ್ಲಿದೆ.

ಲಿಂಗಾಯತ ಧರ್ಮ ಸಮ್ಮೇಳನದ ಶುಭಾರಂಭ

ಬಸವಣ್ಣನವರ ವಿಚಾರಧಾರೆ ಇಂದಿನ ಅಗತ್ಯ: ಮಾತಾಜಿ

ಮಾನವನ ಸರ್ವಾಂಗೀಣ ಉನ್ನತಿಗೆ ಮತ್ತು ಪರಿಪೂರ್ಣತೆಗೆ ಧರ್ಮವು ಅತ್ಯಗತ್ಯ. ಹೊರ ಮುಖದಲ್ಲಿರುವ ಸಮಾಜದ ಸುಸ್ಥಿತಿ ಎಷ್ಟು ಮುಖ್ಯವೋ ವ್ಯಕ್ತಿಯ ಆಂತರಂಗಿಕ ವಿಕಾಸವೂ ಅಷ್ಟೇ ಮುಖ್ಯ. ಬಹಿರಂಗದ ಸುಖ ಸಂತೋಷಗಳಿಗೆ ಭೌತಿಕ ಮೌಲ್ಯಗಳು ಸಹಕಾರಿಯಾದರೆ ಆಂತರಂಗಿಕ ಸಂತೃಪ್ತಿಗೆ ನೈತಿಕ ಮತ್ತು ಧಾರ್ಮಿಕ ಮೌಲ್ಯಗಳು ಅಷ್ಟೆ ಅಗತ್ಯವೆನಿಸುತ್ತವೆ. ಅದಕ್ಕಾಗಿಯೇ ಬಸವಣ್ಣನವರು ಜಾತಿ ವರ್ಣ ವರ್ಗರಹಿತ ಸಮಾಜ ನಿರ್ಮಾಣಕ್ಕೆ ಧರ್ಮವನ್ನೇ ಅಡಿಪಾಯವನ್ನಾಗಿ ಮಾಡಿದರು. ಧರ್ಮದ ವಿಕೃತ ಸ್ವರೂಪವಾದ ಜಾತೀಯತೆ, ಮೂಢನಂಬಿಕೆ, ಶೋಷಣೆ, ಅಸಮಾನತೆಗಳನ್ನು ಹೊರತು ಪಡಿಸಿದರೆ ಧರ್ಮವು ಮಾನವ ಕುಲಕ್ಕೆ ಸಂಜೀವಿನಿ ಎಂಬುದನ್ನು ಮನಗಾಣಿಸಿದರು. ಲಿಂಗಾಯತವೆಂಬ ಪ್ರಗತಿಪರ ಹಾಗೂ ಸ್ವತಂತ್ರ ಧರ್ಮವನ್ನು ಸಂಸ್ಥಾಪಿಸಿ ಜಾತಿಮತ ಪಂಥ ಭೇದವಿಲ್ಲದೆ ಎಲ್ಲ ಮಾನವರನ್ನೂ ಇಂಬಿಟ್ಟುಕೊಂಡರು. ದೇವರ ಕೃಪೆ, ಧರ್ಮ ಯಾರದೂ ಸೊತ್ತಲ್ಲ ಎಲ್ಲ ಮಾನವ ಜೀವಿಗಳ ಹಕ್ಕು ಎಂಬುದನ್ನು ಸಾರಿ ಮಾನವೀಯತೆಯೇ ಧರ್ಮದ ತಳಹದಿಯಾಗಬೇಕೆಂದು ಬೋಧಿಸಿದರು.

ಇಂತಹ ಬಸವಣ್ಣನವರ ದಿವ್ಯ ಸಂದೇಶವನ್ನು ಪರಿಚಯ ಮಾಡಿಕೊಡುವುದೇ ಎರಡನೆಯ ಲಿಂಗಾಯತ ಧರ್ಮ ಸಮ್ಮೇಳನದ ಉದ್ದೇಶ." ಎಂದು ಸಮ್ಮೇಳನ ಸಮಿತಿಯ ಕಾರ್ಯಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು. ಅವರು ನವದೆಹಲಿಯ ಎಂ.ಸಿ.ಡಿ. ಸಮುದಾಯ ಭವನದ ಆವರಣದ ಭವ್ಯ ವೇದಿಕೆಯಲ್ಲಿ ಬೆಳ್ಳಿಗ್ಗೆ ಉದ್ಘಾಟನೆಗೊಂಡ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪ್ರಸ್ತಾವನೆ ಗೈಯುತ್ತಿದ್ದರು.

"ಭಾರತ ದೇಶದಲ್ಲಿ ಅಸ್ಪೃಶ್ಯತೆ, ಅಸಮಾನತೆ, ಸ್ತ್ರೀ ಶೋಷಣೆ, ಮೂಢ ನಂಬಿಕೆ ವಿಪರೀತವಾಗಿದ್ದು ದೇಶದ ಪ್ರಗತಿಗೆ ಮಾರಕವಾಗಿದೆ. ಜನರಲ್ಲಿ ಆತ್ಮವಿಶ್ವಾಸ ತುಂಬುವ ದೇವಶ್ರದ್ಧೆಯು ಭಯದ ತಳಹದಿಯ ಮೇಲಿರದೆ ಭಕ್ತಿಯ ಆಧಾರದ ಮೇಲಿರಬೇಕು ಎಂದು ನುಡಿದರಲ್ಲದೆ, ಭಕ್ತಿಯು ಮೂಢ ಭಕ್ತಿಯಾಗದೆ ಸದ್ಭಕ್ತಿಯಾಗಬೇಕಾದರೆ ವೈಚಾರಿಕತೆಯಿಂದ ಸಂಸ್ಕರಣಗೊಳ್ಳಬೇಕು." ಎಂದು ಪೂಜ್ಯ ಮಾತಾಜಿಯವರು ಹೇಳಿದರು.

ಈ ದೃಷ್ಟಿಯಿಂದ ಬಸವ ತತ್ವದ ಪ್ರಚಾರ ಅತ್ಯವಶ್ಯವಾಗಿದೆ. ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲದೇ ರಾಷ್ಟ್ರದ ರಾಜಧಾನಿ ನವದೆಹಲಿ ಮೂಲಕ ಸಮಗ್ರ ಉತ್ತರ ಭಾರತದ ತುಂಬೆಲ್ಲ ಬಸವ ತತ್ವದ ಪ್ರಭೆ ಬೆಳಗಿಸಲು ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು ಅವಿಶ್ರಾಂತವಾಗಿ ಪ್ರಯತ್ನಿಸುತ್ತಿದ್ದಾರೆ." ಎಂದೂ ಮಾತಾಜಿ ನುಡಿದರು.

ಲಿಂಗಾಯತವು ಜಾತಿಯಲ್ಲ ಇದು ಮಾನವ - ಮಾನವರ ಮಧ್ಯದ ಜಾತೀಯ ಅಡ್ಡಗೋಡೆಯನ್ನು ತೆಗೆದು ಹಾಕಲು ಬಸವಣ್ಣನವರು ರೂಪಿಸಿಕೊಟ್ಟ ಸ್ವತಂತ್ರ ಪ್ರಗತಿಪರ ಚಿಂತನೆಯ ಧರ್ಮವಾಗಿದೆ." ಎಂದು ಅವರು ನುಡಿದರು.

ಸಮ್ಮೇಳನ ಸಮಿತಿಯ ಸಂಚಾಲಕ ಪೂಜ್ಯ ಚನ್ನಬಸವಾನಂದ ಸ್ವಾಮೀಜಿ ಮಾತನಾಡಿ "ದೆಹಲಿಯಲ್ಲಿ ಬಸವ ಧರ್ಮ ಪೀಠದ ಶಾಖೆ ಸ್ಥಾಪಿಸುವ ಮೂಲಕ ಪೂಜ್ಯ ಶ್ರೀ ಮಾತಾಜಿಯವರು ಲಿಂಗಾಯತ ಧರ್ಮದ ರಾಷ್ಟ್ರೀಕರಣಕ್ಕೆ ನಾಂದಿ ಹಾಡಿದ್ದಾರೆ. ಜಾಗತಿಕ ಧರ್ಮಗಳ ಸಾಲಿನಲ್ಲಿ ಲಿಂಗಾಯತ ಧರ್ಮವನ್ನು ತಂದು ನಿಲ್ಲಿಸಲು ಮಾತಾಜಿಯವರ ನೇತೃತ್ವದಲ್ಲಿ ನಾವು ನೀವೆಲ್ಲ ಕಂಕಣ ಬದ್ಧರಾಗೋಣ." ಎಂದರು.

ಜಗದ್ಗುರು ಮಾತೆ ಗಂಗಾದೇವಿಯವರು ಬಸವ ಧ್ವಜಾರೋಹಣ ನೆರವೇರಿಸಿದರು. ದೆಹಲಿ ಆಡಳಿತ ಸೇವಾಧಿಕಾರಿ ಅಮರನಾಥ ತಳವಾಡೆ ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಕರ್ನಾಟಕ ವೀರಶೈವ ಯುವ ವೇದಿಕೆ ಅಧ್ಯಕ್ಷ ಬಿ.ಭುಜೇಂದ್ರ, ಲಿಂಗಾಯತ, ಮುಖಂಡ ಮಧುರೆ ಎಸ್. ಮಲ್ಲಯ್ಯ, ರಾಜ್ಯಸಭಾ ಉಪ ಸಭಾಪತಿಯವರ ಆಪ್ತ ಕಾರ್ಯದರ್ಶಿ ವೈಜನಾಥ ಬಿರಾದಾರ, ದೆಹಲಿ ಪಾಲಿಕೆ ಸದಸ್ಯರಾದ ತಿಲೋತ್ತಮ ಚೌಧರಿ ಶ್ರೀಮತಿ ಸುದೇಶವತಿ ಮದನ್‌ದಾಸ್, ಬಿ.ಎಸ್.ಪಿ.ಮುಖಂಡ ಮದನ್ ಮೋಹನ್ ದಾಸ್, ದೆಹಲಿ ಶಾಸಕ ಮಹಾಬಲ್ ಮಿಶ್ರಾ, ಜಗದ್ಗುರು ಬಸವ ಕುಮಾರ ಸ್ವಾಮೀಜಿ, ಬಸವ ಲಿಂಗ ಸ್ವಾಮೀಜಿ ಉಪಸ್ಥಿತರಿದ್ದರು.

ಆಂಧ್ರಪ್ರದೇಶ ರಾಷ್ಟ್ರೀಯ ಬಸವ ದಳ ಕಾರ್ಯಾಧ್ಯಕ್ಷ ಧನರಾಜ್ ಜೀರಗೆ ಸ್ವಾಗತಿಸಿದರು. ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷ ಕೆ. ವೀರಣ್ಣ ಲಿಂಗಾಯತ್ ಮಾಲಾರ್ಪಣೆ ಮಾಡಿದರು.

ಶರಣೆ.ವಿಜಯಲಕ್ಷ್ಮಿ ಲಿಂಗಾಯತ ಹಾಗೂ ಕು. ಚೈತ್ರಾ ಲಿಂಗಾಯತ್ ವಚನ ಗಾಯನ ಮಾಡಿದರು. ಭಾರತೀಯ ವಕೀಲರ ಪರಿಷತ್ತಿನ ಗುಲಬರ್ಗಾ ವಿಭಾಗದ ಉಪಾಧ್ಯಕ್ಷ ಗಂಗಶೆಟ್ಟಿ ಪಾಟೀಲ್ ಅಧ್ಯಕ್ಷೀಯ ಭಾಷಣ ಮಾಡಿದರು.

ಕುಮಾರಸ್ವಾಮಿ ಮನ ಪರಿವರ್ತನೆ : ಮಾತಾಜಿ ಹರ್ಷ

ಪೂರ್ವ ನಿರ್ಧಾರಿತವಾದಂತೆ ಕುಮಾರಸ್ವಾಮಿ ಅವರು ಬಿ.ಎಸ್. ಯಡೆಯೂರಪ್ಪನವರಿಗೆ ಅಧಿಕಾರ ಹಸ್ತಾಂತರ ಮಾಡಬೇಕಾಗಿತ್ತು. ಆದರೆ ಅವರು ನುಡಿದಂತೆ ನಡೆಯದೇ ಇದ್ದಾಗ ನಮಗೆ ಅಪಾರವಾದ ನೋವಾಗಿತ್ತು. ಅಂದರೆ ನಾವು ಯಾವುದೇ ಪಕ್ಷ ರಾಜಕಾರಣವನ್ನು ಮಾಡಲು ಈ ಮಾತು ಹೇಳುತ್ತಿಲ. ಧಾರ್ಮಿಕ ಕ್ಷೇತ್ರದ ನಮಗೆ ಇದರ ಅಗತ್ಯವೂ ಇಲ್ಲ. ಆದರೆ ಸುಸಂಸ್ಕೃತ – ಕ್ರಿಯಾಶೀಲ ವ್ಯಕ್ತಿಯಾಗಿದ್ದ ಕುಮಾರಸ್ವಾಮಿಯವರು ಯಾವುದೋ ಒತ್ತಡಕ್ಕೆ ಮಣಿದು ಮಾತು ತಪ್ಪಿದ್ದು ಖಂಡನೀಯವಾಗಿದ್ದರೂ, ಈಗ ಮನ ಪರಿವರ್ತನೆಯಾಗಿ ಸಜ್ಜನ ಪ್ರಗತಿಪರ ಚಿಂತನೆಗಳ ರಾಜಕೀಯ ನೇತಾರ ಯಡೆಯೂರಪ್ಪನವರಿಗೆ ಅಧಿಕಾರ ಹಸ್ತಾಂತರ ಮಾಡಲು ಮುಂದಾಗಿದ್ದು ನಮಗೆ ಹರ್ಷ ತಂದಿದೆ. ಮುಂದಿನ ಅಧಿಕಾರಾವಧಿಯಲ್ಲಿ ಇದೇ ರೀತಿ ಸಹಕಾರ ನೀಡಲಿ. ಶ್ರೀ ಯಡೆಯೂರಪ್ಪನವರ ನೇತೃತ್ವದಲ್ಲಿ ರಾಜ್ಯ ಸಮಗ್ರ –ಸರ್ವಾಂಗೀಣವಾಗಿ ಪ್ರಗತಿ ಹೊಂದಲಿ" ಎಂದು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಅವರು ನವದೆಹಲಿಯ ಎಂಸಿ.ಡಿ. ಸಮುದಾಯ ಭವನದ ಆವರಣದಲ್ಲಿ ರಾಷ್ಟ್ರೀಯ ಬಸವ ದಳ ಹಾಗೂ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಹಮ್ಮಿಕೊಂಡಿರುವ ದ್ವಿತೀಯ ಲಿಂಗಾಯತ ಧರ್ಮ ಬೃಹತ್ ಸಮ್ಮೇಳನದ 1ನೇ ದಿನದ ಸಂಜೆಯ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

ರಾಷ್ಟ್ರೀಯ ಬಸವ ದಳದ ಮುಖಂಡರು ಸಭೆಯ ಮಧ್ಯದಲ್ಲಿ ಯಡೆಯೂರಪ್ಪನವರಿಗೆ ಕುಮಾರ ಸ್ವಾಮಿ ಬೆಂಬಲ ನೀಡಿರುವ ಸುದ್ದಿ ಮಾತಾಜಿಯವರ ಗಮನಕ್ಕೆ ತಂದಾಗ ಹರ್ಷ ಚಿತ್ತರಾದ ಮಾತಾಜಿ ಸಭೆಯಲ್ಲಿ ಈ ವಿಷಯ ಪ್ರಕಟಿಸಿದಾಗ ನೆರೆದಿದ್ದ ಸಹಸ್ರಾರು ಭಕ್ತರು ಕರತಾಡನದ ಮೂಲಕ ಹರ್ಷ ವ್ಯಕ್ತಪಡಿಸಿದರು.

ಬಸವ ತತ್ವದಿಂದ ಸಮಾಜ ಪರಿವರ್ತನೆ ಸಾಧ್ಯ: ಸ್ವಾಮಿ ಅಗ್ನಿವೇಶ್

12ನೆಯ ಶತಮಾನದಲ್ಲಿ ಆಗಿ ಹೋದ ಬಸವಣ್ಣನವರು ಸಮಾಜ ಸುಧಾರಕರಿಗೆ ಉತ್ತಮ ಮಾದರಿ. ಅವರು ಪ್ರತಿಪಾದಿಸಿದ ತತ್ವಗಳು ಸಮಾಜದ ಎಲ್ಲ ರಂಗಗಳಲ್ಲಿ ಪರಿವರ್ತನೆ ತರಲು ಸಾಧ್ಯ. ಜಾತಿವಾದದ ವಿರುದ್ಧ ಹೋರಾಟ, ಮೂಢ ನಂಬಿಕೆಯ ಖಂಡನೆ, ಸ್ತ್ರೀಯರ ಸಮಾನತೆ ಮುಂತಾದ ಎಲ್ಲ ಸಂಗತಿಗಳಲ್ಲೂ ಬಸವಣ್ಣನವರು ಮಾರ್ಗದರ್ಶಕರಾಗಿರುತ್ತಾರೆ. ಬಸವ ಭಕ್ತರಾದ ನೀವು ಬಸವಣ್ಣನವರ ಸಂದೇಶವನ್ನು ಮನೆ ಮನೆಗೆ ಮುಟ್ಟಿಸುವ ಉದಾತ್ತ ಕಾರ್ಯ ಮಾಡುವುದೇ ಅಲ್ಲದೆ ಸಮಾಜ ಪರಿವರ್ತನೆಯ ಹರಿಕಾರರಾಗಬೇಕು." ಎಂದು ಬಸವ ಶ್ರೀ ಪ್ರಶಸ್ತಿ ವಿಜೇತರಾದ ಸ್ವಾಮಿ ಅಗ್ನಿವೇಶ್ ಅವರು ಕರೆ ನೀಡಿದರು.

ಅವರು ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನದ ಮೊದಲನೆಯ ದಿನದ ಎರಡನೆಯ ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡುತ್ತ, "ಇಂದಿನ ರಾಜಕೀಯ ವ್ಯವಸ್ಥೆ ಕೆಟ್ಟು ಹೋಗಿರುವ ಸ್ಥಿತಿಯನ್ನು ನೋಡಿದರೆ ರಾಜಕಾರಣಿಗಳಿಂದಾಗಲೀ, ಸರ್ಕಾರಗಳಿಂದಾಗಲೀ ಜನತೆಯ ಉದ್ಧಾರ, ಪರಿವರ್ತನೆ ಸಾಧ್ಯವಿಲ್ಲ. ಏನಿದ್ದರೂ ಸಮಾಜ ಸೇವಾ ಸಂಸ್ಥೆಗಳೇ ಸಮಾಜ ಪರಿವರ್ತನೆಯ ಜವಾಬ್ದಾರಿಯನ್ನು ಹೊರಬೇಕು. ಬಸವಣ್ಣನವರು ಏಕಾಂಗಿಯಾಗಿ ಹೋರಾಟ ಆರಂಭಿಸಿದರು. ನಂತರ ಸಮಾನ ಮನಸ್ಕರು ಸೇರಿಕೊಂಡು ಆ ಹೋರಾಟವು ದೊಡ್ಡ ಧಾರ್ಮಿಕ ಚಳುವಳಿಯಾಗಿ ರೂಪುಗೊಂಡಿತು. ಇಂಥ ಘಟನೆಯಿಂದ ನಾವು ಸ್ಫೂರ್ತಿ ಪಡೆಯಬೇಕು." ಎಂದು ನುಡಿದರು.

ಬಸವಣ್ಣನವರ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು ಎಂಬ ವಿಚಾರಗೋಷ್ಠಿಯ ಪ್ರಾಸ್ತಾವಿಕ ಭಾಷಣ ಮಾಡಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು "ಭಾರತ ದೇಶದ ಸಾಮಾಜಿಕ ಪಿಡುಗುಗಳೆಂದರೆ ಜಾತೀಯತೆ ಮತ್ತು ಅಸ್ಪೃಶ್ಯತೆ. ಹುಟ್ಟಿನಿಂದಲೇ ಮಾನವನನ್ನು ಶ್ರೇಷ್ಠ ಮತ್ತು ಕನಿಷ್ಠ ಎಂದು ವರ್ಗೀಕರಿಸುವ ಈ ಅಮಾನುಷ ಪದ್ಧತಿಯನ್ನು ಬಸವಣ್ಣನವರು ತೀವ್ರವಾಗಿ ವಿರೋಧಿಸಿ ಹುಟ್ಟಿನಿಂದ ಎಲ್ಲರೂ ಸಮಾನರು; ಹಾಗೆಯೇ ವೃತ್ತಿಗಳ ಆಧಾರದ ಮೇಲೆ ಸಹ ಜನರನ್ನು ಮೇಲು ಕೀಳೆಂದು ವಿಂಗಡಿಸಬಾರದು ಎಂದು ಸಾರಿದರು. ಅದೇ ರೀತಿ ಧಾರ್ಮಿಕ ಪಿಡುಗುಗಳಾದ ಮೂಢ ನಂಬಿಕೆ, ಸ್ತ್ರೀ ಶೋಷಣೆ, ಪ್ರಾಣಿ ಬಲಿ ಮುಂತಾದುವನ್ನು ಸಹ ಕಟುವಾಗಿ ಟೀಕಿಸಿದರು. ಭಕ್ತಿಯು ಭಯ ಆಧಾರಿತವಾಗಿರದೆ ದೇವ ಪ್ರೇಮದ ಮೇಲೆ ನಿಂತಿರಬೇಕು ಎಂದು ಅವರು ಬೋಧಿಸಿದರು. ವೈಚಾರಿಕತೆಯ ತಳಹದಿಯ ಮೇಲೆ ಧರ್ಮದ ನಂಬಿಕೆ ಆಚಾರ – ವಿಚಾರಗಳನ್ನು ಬಲಪಡಿಸುವ ಪ್ರಗತಿಪರ ಧರ್ಮವನ್ನು ಜಗತ್ತಿಗೆ ನೀಡಿ ಬಸವಣ್ಣನವರು ಇಂದು ಪ್ರಸ್ತುತವಾಗಿದ್ದಾರೆ, ಅನುಕರಣೀಯರಾಗಿದ್ದಾರೆ. ಅನೇಕ ವಿಷಯಗಳಲ್ಲಿ ಮೊದಲಿಗರಾಗಿರುವ ಅವರು ಸಮುದಾಯ ಶಿಕ್ಷಣ, ಸ್ತ್ರೀ ಮತ್ತು ದಲಿತರ ಉತ್ಥಾನಕ್ಕೆ ಶ್ರಮಿಸಿದ ಧೀಮಂತರು." ಎಂದರು.

ಧರ್ಮದ ಗುರಿ ಒಡೆಯುವದಲ್ಲ ಬದಲಾಗಿ ಒಂದುಗೂಡಿಸುವದು. ಭಾಷೆ, ಸಂಸ್ಕೃತಿ, ಪ್ರದೇಶ, ವೇಷ, ಎಲ್ಲವೂ ಬೇರೆಯಾಗಿದ್ದರೂ ಸಹ ಎಲ್ಲರಲ್ಲೂ ಪರಮಾತ್ಮನ ಅಂಶವನ್ನು ಕಂಡು ನಮ್ಮ ಸಹೋದರರಂತೆ ಭಾವಿಸಿ ಆದರಿಸುವದನ್ನೇ ಧರ್ಮ ಕಲಿಸುತ್ತದೆ. ಅದರಲ್ಲೂ ಬಸವಣ್ಣನವರು ಪ್ರತಿಪಾದಿಸಿದ ವಿಚಾರ ಧಾರೆಗಳನ್ನು ಅಳವಡಿಸಿಕೊಂಡ ವ್ಯಕ್ತಿ ಎಂದಿಗೂ ಜಾತಿಯ ಹೆಸರೆತ್ತುವುದಿಲ್ಲ; ಬದಲಾಗಿ ಎಲ್ಲರನ್ನು ಸಮಭಾವದಿಂದ ಕಂಡು ಆದರ್ಶ ಸಮಾಜ ರೂಪಿಸುವಲ್ಲಿ ಸಹಕಾರಿಯಾಗುತ್ತಾನೆ. ಆದ್ದರಿಂದ ಬಸವ ತತ್ವವನ್ನು ಭಾರತದ ಉತ್ತರ ಭಾಗದಲ್ಲೂ ಪ್ರಚಾರಗೊಳಿಸುವುದೇ ಲಿಂಗಾಯತ ಧರ್ಮ ಸಮ್ಮೇಳನದ ಪ್ರಮುಖ ಧ್ಯೇಯವಾಗಿದೆ. ಭಾರತೀಯ ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಪ್ರತಿಪಾದಿಸಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ಸಿದ್ಧಾಂತವನ್ನು 850 ವರ್ಷಗಳ ಹಿಂದೆಯೇ ಅನುಷ್ಠಾನಕ್ಕೆ ತಂದ ಶ್ರೀಗುರು ಬಸವಣ್ಣನವರು ಜಾತಿ, ವರ್ಣ, ವರ್ಗ ರಹಿತವಾದ ಧರ್ಮ ಸಹಿತವಾದ ಶರಣ ಸಮಾಜವನ್ನು ರೂಪಿಸಿದರು." ಎಂದು ಮಾತಾಜಿ ವಿವರಿಸಿದರು.

ಸುಪ್ರೀಂ ಕೋರ್ಟಿನ ಹಿರಿಯ ನ್ಯಾಯವಾದಿಗಳು, ಸಿಖ್ ಸಮಾಜದ ಮುಖಂಡರೂ ಆಗಿರುವ ಹರವೀಂದರ್‌ಸಿಂಗ್ ಫುಲ್ಕಾ ಅವರು. "ನನಗೆ ಇತ್ತೀಚೆಗೆ ಬಸವಣ್ಣನವರ ಸಾಹಿತ್ಯದ ಪರಿಚಯವಾಯಿತು. ಸಾಮಾನ್ಯವಾಗಿ ಎಲ್ಲರೂ ತಮ್ಮ ತಮ್ಮ ಹಕ್ಕುಗಳ ಅಥವಾ ಕುಲಬಾಂಧವರ ಹಕ್ಕಿಗಾಗಿ ಹೋರಾಡಿದರೆ ಬಸವಣ್ಣನವರು ನೊಂದವರು, ತುಳಿತಕ್ಕೊಳಗಾದ ಸಮುದಾಯಗಳ ಹಕ್ಕಿಗಾಗಿ ಹೋರಾಡಿದ್ದು ನನ್ನನ್ನು ವಿಶೇಷವಾಗಿ ಅವರತ್ತ ಆಕರ್ಷಿಸಿತು. ಹೀಗಾಗಿ ಬಸವಣ್ಣನವರು ಕೊಟ್ಟ ಪ್ರಗತಿಪರ ಲಿಂಗಾಯತ ಧರ್ಮಕ್ಕೂ ಸಿಖ್ ಧರ್ಮಕ್ಕೂ ಎಲ್ಲ ರೀತಿಯ ಸಾಮ್ಯವಿದೆ" ಎಂದು ನುಡಿದರು.

ಮುಖ್ಯ ಅತಿಥಿಯಾಗಿದ್ದ ಜಮಾತ್-ಎ-ಇಸ್ಲಾಮಿ ಹಿಂದ್ ಸಂಸ್ಥೆಯ ಕಾರ್ಯದರ್ಶಿ ರಫೀಕ್ ಅಹ್ಮದ್ ಅವರು "ಧಾರ್ಮಿಕ - ಸಹಿಷ್ಣುತೆ ಹಾಗೂ ಸಹೋದರತ್ವ" ವಿಷಯದ ಬಗ್ಗೆ ಮಾತನಾಡಿ ಶ್ರೀಗುರು ಬಸವಣ್ಣನವರು ನೀಡಿದ ಲಿಂಗಾಯತ ಧರ್ಮ ಹೇಳುವಂತಹ ಏಕದೇವೋಪಾಸನೆ, ನಿರಾಕಾರ ದೇವನ ಆರಾಧನೆ, ಹಾಗೂ ಸರ್ವ ಜನಾಂಗದವರನ್ನು ನಮ್ಮ ಸಹೋದರರಂತೆ ಕಾಣುವ ಹೃದಯ ವೈಶಾಲ್ಯ-ಇವೆಲ್ಲ ಗುಣಾತ್ಮಕ ಮೌಲ್ಯಗಳು ಮಹಮ್ಮದೀಯ ಧರ್ಮದಲ್ಲಿವೆ. ಇಸ್ಲಾಂ ಹಾಗೂ ಲಿಂಗಾಯತ ಧರ್ಮೀಯರು ನಾವೆಲ್ಲ ಸಹೋದರ - ಸಹೋದರಿಯರಂತೆ ಬಾಳಬೇಕು, ಮತೀಯ ಸಾಮರಸ್ಯವನ್ನು ಕೆಡಿಸಿ ಕೋಮು ಭಾವನೆ ಕೆರಳಿಸಿ ರಾಜಕೀಯ ಮಾಡುವಂತಹ ಜನರ ಬಗ್ಗೆ ಎಚ್ಚರಿಕೆಯಿಂದಿರಬೇಕು. ಶ್ರೀಗುರು ಬಸವಣ್ಣನವರು ಹಾಗೂ ಮಹಮ್ಮದ್ ಪೈಗಂಬರ್ ಅವರ ಸಂದೇಶ ಅರಿತು ನಡೆದರೆ ನಮ್ಮ ನಿಮ್ಮಲ್ಲಿ ಯಾವುದೇ ವೈಷಮ್ಯವೂ ಸಹ ಮೂಡುವುದಿಲ್ಲ ಎಂದರಲ್ಲದೇ ಲಿಂಗಾಯತ ಹಾಗೂ ಮಹಮ್ಮದೀಯ ಧರ್ಮೀಯರ ಮಧುರ ಬಾಂಧವ್ಯಕ್ಕೆ ಪ್ರಸ್ತುತ ಲಿಂಗಾಯತ ಧರ್ಮಸಮ್ಮೇಳನ ನಾಂದಿಯಾಗಿದೆ ಎಂದು ಅವರು ನುಡಿದರು.

ಮಹಾರಾಷ್ಟ್ರದ ಕೊಲ್ಲಾಪುರ ಬಳಿಯ ಅಲ್ಲಮಗಿರಿಯ ಶ್ರೀ ಬಸವಲಿಂಗ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಜರುಗಿದ ಸಮಾರಂಭದಲ್ಲಿ ನವದೆಹಲಿ ಮಂಗಲಾಪುರಿಯ ಪಾಲಿಕೆ ಸದಸ್ಯ ಪ್ರಮೋದ್ ಕುಮಾರ್ ವಿಶೇಷ ಆಮಂತ್ರಿತರಾಗಿದ್ದರು. ಸಮ್ಮೇಳನ ಸಮಿತಿ ಪ್ರಧಾನ ಸಂಚಾಲಕ ಹಾಗೂ ನವದೆಹಲಿ ಬಸವ ಮಂಟಪದ ಕಾರ್ಯದರ್ಶಿ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ಪ್ರಾಸ್ತಾವಿಕ ಭಾಷಣ ಮಾಡಿದರು. ಯೋಗ ಶಿಕ್ಷಕ ಶಶಿಧರ ಸುಮನ್ ಸ್ವಾಗತಿಸಿದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ ಸವದತ್ತಿಯ ಹಿರಿಯ ನ್ಯಾಯವಾದಿ ಎಂ. ಎಂ.ಹಿರಿಲಿಂಗಣ್ಣನವರು, ಬಿ.ಜೆ.ಪಿ.ಮುಖಂಡ ನಂಜುಂಡೇಶ್, ಬಿ.ಭುಜೇಂದ್ರ ಉಪಸ್ಥಿತರಿದ್ದರು.

ದಿ. 28-10-2007ರ ಸಮುದಾಯ ಪ್ರಾರ್ಥನೆ

ನಾವೆಲ್ಲ ಲಿಂಗಾಯತರು ಒಳಪಂಗಡಗಳ ಭೇದವನ್ನೆಲ್ಲಾ ದೂರವಿಟ್ಟು ಸಂಘಟಿತರಾಗಿ ಸಂವಿಧಾನಾತ್ಮಕ ಮಾನ್ಯತೆ ಹಾಗೂ ಧಾರ್ಮಿಕ ಅಲ್ಪ ಸಂಖ್ಯಾತರೆಂಬ ಸ್ಥಾನಮಾನಕ್ಕಾಗಿ ಹೋರಾಡೋಣ, ಸ್ವತಂತ್ರ ಧರ್ಮವಾಗುವ ಎಲ್ಲಾ ಅರ್ಹತೆಗಳು ಈ ಧರ್ಮಕ್ಕೆ ಇದ್ದರೂ ಸಹ ಕೇವಲ ನಮ್ಮ ನಿರ್ಲಕ್ಷ್ಯದಿಂದ ಈವರೆಗೆ ಸಾಧ್ಯವಾಗಿಲ್ಲ ಆದ್ದರಿಂದ ಇನ್ನು ಮುಂದೆ ಈ ದಿಶೆಯಲ್ಲಿ ಹೋರಾಟವನ್ನು ಗಂಭೀರಗೊಳಿಸಬೇಕಾಗಿದೆ." ಎಂದು ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು. ಅವರು ನವದೆಹಲಿಯ ದಾಬ್ರಿ ಬಳಿಯ ಎಂ.ಸಿ.ಡಿ. ಸಮುದಾಯ ಭವನದ ಆವರಣದ ಭವ್ಯ ವೇದಿಕೆಯಲ್ಲಿ ರಾಷ್ಟ್ರೀಯ ಬಸವ ದಳ ಹಾಗೂ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಹಮ್ಮಿಕೊಂಡಿದ್ದ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನದ 2ನೆಯ ದಿನದ ಕಾರ್ಯಕ್ರಮವಾದ - ಸಮುದಾಯ ಪ್ರಾರ್ಥನೆಯ ನೇತೃತ್ವ ವಹಿಸಿ ಮಾತನಾಡುತ್ತಿದ್ದರು.

ಒಂದು ಸಮಾಜವನ್ನು ಸುಸಂಘಟಿತವಾಗಿ ಕಟ್ಟಲು ನಮಗೆ ಸಾಮೂಹಿಕ ಪ್ರಾರ್ಥನೆ ಒಂದು ಸಾಧನ. ಸಮಾಜದ ಸಂಘಟನೆಯೊಂದಿಗೆ ದಿವ್ಯ ದೈವೀ ಆನಂದ ಇದರಿಂದ ಪ್ರಾಪ್ತವಾಗುತ್ತದೆ ಎಂದ ಅವರು ಈ ದಿಶೆಯಲ್ಲಿ ಇಸ್ಲಾಂ ಹಾಗೂ ಕ್ರೈಸ್ತ ಧರ್ಮದ ಬಾಂಧವರು ವಾರಕ್ಕೊಮ್ಮೆ ಸೇರಿ ಮಸೀದಿ ಹಾಗೂ ಚರ್ಚಗಳಲ್ಲಿ ಮಾಡುವ ಸಾಮೂಹಿಕ ಪ್ರಾರ್ಥನೆ ಸಾಕ್ಷಿಯಾಗಿದೆ. ಇದರಿಂದಲೇ ಆ ಸಮಾಜಗಳು ಇಷ್ಟೊಂದು ಬಲಾಢ್ಯವಾಗಿದೆ ಎಂದ ಮಾತಾಜಿ ಪರಧರ್ಮೀಯರಲ್ಲಿರುವ ಗುಣಾತ್ಮಕ ಮೌಲ್ಯಗಳೂ ಕೂಡಾ ನಮಗೆ ಆದರ್ಶವಾಗಬೇಕು." ಎಂದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ ದಿವ್ಯ ನೇತೃತ್ವದಲ್ಲಿ ಜರುಗಿದ ಸಮಾರಂಭದಲ್ಲಿ ಮುಂಬೈನ ಹಿರಿಯ ಉದ್ಯಮಿ ಆರ್.ಬಿ. ಹೆಬ್ಬಳ್ಳಿ ಬಸವ ಧ್ವಜಾರೋಹಣ ನೆರವೇರಿಸಿದರು. ರಾಜ್ಯಸಭಾ ಉಪಸಭಾಪತಿಯವರ ಆಪ್ತ ಕಾರ್ಯದರ್ಶಿ ವೈಜನಾಥ ಬಿರಾದಾರ ಮಾಲಾರ್ಪಣೆಯ ಮೂಲಕ ಗೌರವಾರ್ಪಣೆ ಗೈದರು.

ನವದೆಹಲಿಯ ಚಾಂದನಿ ಚೌಕದಲ್ಲಿರುವ ಸೀಸ್‌ಗಂಜ್ ಗುರುದ್ವಾರದ ಮಹಾಪ್ರಬಂಧಕರಾದ ಸರದಾರ್ ಸತ್ನಾಮಸಿಂಗ್ ಉಪ್ಪಲ್ ಅವರು ಸಾಮೂಹಿಕ ಪ್ರಾರ್ಥನೆಯ ಸಮಾರಂಭವನ್ನು ಉದ್ಘಾಟಿಸಿದರು. ವಿಶೇಷ ಆಮಂತ್ರಿತರಾಗಿ ನವದೆಹಲಿ ಭೂಸೇನೆ ವಿಭಾಗದ ಲೆಫ್ಟಿನಂಟ್ ಕರ್ನಲ್ ಆರ್.ಸೋಮಶೇಖರ್ ಆಗಮಿಸಿ ಮಾತನಾಡಿದರು.

ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಎಸ್.ಎ.ಪಾಟೀಲ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಭಾ.ಜ.ಪ ಮುಖಂಡ ನಂಜುಂಡೇಶ್ , ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಕೆ.ವೀರಣ್ಣ ಲಿಂಗಾಯತ್, ಆಂಧ್ರಪ್ರದೇಶ್ ರಾಷ್ಟ್ರೀಯ ಬಸವ ದಳ ಅಧ್ಯಕ್ಷ ಧನರಾಜ ಜೀರಗೆ, ತಿರುಪತಿಯ ಬಸವ ಮಿಷನ್‌ದ ಮುಖ್ಯಸ್ಥ ನಂಜುಂಡಪ್ಪ , ಕರ್ನಾಟಕ ವೀರಶೈವ ಯುವ ವೇದಿಕೆ ಅಧ್ಯಕ್ಷ ಬಿ.ಬುಜೇಂದ್ರ ಸೇರಿದಂತೆ ಗಣ್ಯರು ವೇದಿಕೆ ಮೇಲಿದ್ದರು. ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ಸಭಾ ಸಮ್ಮೇಳನ ಸಮಿತಿ ಸಂಚಾಲಕ ನಿರ್ವಹಣೆ ಮಾಡಿದರು.

ರೈತರೇ ಕೃಷಿ ಭೂಮಿ ಮಾರಾಟ ಮಾಡಬೇಡಿ : ಡಾ. ಎಸ್.ಎ.ಪಾಟೀಲ್

ಭಾರತೀಯ ರೈತ ಬಾಂಧವರೇ, ಎಷ್ಟೇ ಆರ್ಥಿಕ ಸಂಕಷ್ಟವಿದ್ದರೂ. ಎಂಥಾ ಪರಿಸ್ಥಿತಿಯಲ್ಲೂ ಪಿತ್ರಾರ್ಜಿತವಾದ ಕೃಷಿ ಭೂಮಿಯನ್ನು ಮಾತ್ರ ಮಾರಾಟ ಮಾಡಬೇಡಿರಿ ಎಂದು ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ.ಎಸ್.ಎ.ಪಾಟೀಲ್ ಕರೆ ನೀಡಿದ್ದಾರೆ.

ಅವರು ನವದೆಹಲಿಯ ಎಂ.ಸಿ.ಡಿ. ಸಮುದಾಯ ಭವನದ ಆವರಣದ ಭವ್ಯ ವೇದಿಕೆಯಲ್ಲಿ ದಿ.28ರಂದು ಬೆಳಿಗ್ಗೆ ನಡೆದ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನದ ಸಾಮೂಹಿಕ ಪ್ರಾರ್ಥನಾ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಭಾರತದ 108 ಕೋಟಿ ಜನರಲ್ಲಿ ಬಹುಪಾಲು ಕೃಷಿಕರಿದ್ದಾರೆ. ಅವರು ಆರ್ಥಿಕ ಸಂಕಷ್ಟ ಹೊಂದಲು ಕಾರಣವೇನೆಂದರೆ ಯೋಜನಾ ಬದ್ಧ ಕೃಷಿ ನಮ್ಮಲ್ಲಿಲ್ಲ. ಹಾಗೂ ರೈತರ ಕೃಷಿ ಉತ್ಪನ್ನಕ್ಕೆ ಯೋಗ್ಯ ಬೆಲೆ ಸಿಗುತ್ತಿಲ್ಲ. ಆದರೂ ಸಹ ರೈತರು ಸಂಯಮ,ಆತ್ಮವಿಶ್ವಾಸ ಕಳೆದುಕೊಳ್ಳಬಾರದು ಎಂದರು. ಕೃಷಿ ಕಾಯಕವು ಅತ್ಯಂತ ಶ್ರೇಷ್ಠವಾದುದು. ಶ್ರೀಗುರು ಬಸವಣ್ಣನವರು ಕೃಷಿ ಅವಲಂಬಿತ ಶ್ರಮಜೀವಿಗಳ ಮೇಲೆಯೇ ಅಪಾರ ಮಮತೆ ಹೊಂದಿದ್ದರು. ಇದನ್ನು ಇವರ ವಚನಗಳಲ್ಲಿ ವಿಪುಲವಾಗಿ ಕಾಣುತ್ತೇವೆ.

ವಿದೇಶಿ ಜನರಲ್ಲಿ ಕೃಷಿಯ ಬಗ್ಗೆ ಒಲವು ಕಡಿಮೆಯಾಗುತ್ತಲಿದೆ. ಕೇವಲ ಕೈಗಾರಿಕೆ, ತಂತ್ರಜ್ಞಾನದತ್ತ ಸಾಗುತ್ತಿರುವ ಅವರು ಆಹಾರ ಉತ್ಪಾದನೆಯ ಬಗ್ಗೆ ಗಮನ ನೀಡುತ್ತಲೇ ಇಲ್ಲ. ಆದ್ದರಿಂದ ಇನ್ನು 10 ವರ್ಷಗಳಲ್ಲಿ ಇಡೀ ಜಗತ್ತಿನ ಜನ ಆಹಾರ ಉತ್ಪನ್ನಗಳಿಗಾಗಿ ಭಾರತವನ್ನೇ ಅವಲಂಬಿಸಬೇಕಾಗುತ್ತದೆ. ಆಗ ಖಂಡಿತ ರೈತರ ಬೆಳೆಗೆ

ಯೋಗ್ಯ ಬೆಲೆ ದೊರೆಯುತ್ತದೆ. ರೈತರು ಈಗಿನ ತಾತ್ಕಾಲಿಕ ಸಂಕಷ್ಟಕ್ಕೆ ಅಂಜಿ ಕೃಷಿ ಯೋಗ್ಯ ಭೂಮಿಯನ್ನು ಮಾರಾಟ ಮಾಡಬಾರದು ಅದನ್ನು ಉಳಿಸಿರಿ." ಎಂದು ಪಾಟೀಲ್ ನುಡಿದರಲ್ಲದೆ ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಇಷ್ಟೊಂದು ಬಸವ ತತ್ವಾನುಯಾಯಿಗಳು ರಾಜಧಾನಿಯಲ್ಲಿ ಸಮಾವೇಶಗೊಂಡಿದ್ದು ಹರ್ಷದಾಯಕ ಎಂದರಲ್ಲದೆ ಜಗದ್ಗುರು ಮಾತೆ ಮಹಾದೇವಿಯವರನ್ನು **"ಯುಗ ಪುರುಷರು"** ಎಂದು ಬಣ್ಣಿಸಿದ ಅವರು ಲಿಂಗಾಯತರ ಪಾಲಿಗೆ ಮಾತಾಜಿ ಆಶಾಕಿರಣ ಎಂದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಸಾನಿಧ್ಯ ವಹಿಸಿದ್ದರು.

ಆಧ್ಯಾತ್ಮಿಕ ಅನುಭೂತಿ ನೀಡಿದ ಲಿಂಗಾಯತ ಧರ್ಮ ಸಮ್ಮೇಳನ
ಸಹಸ್ರಾರು ಶರಣ ~ ಶರಣೆಯರಿಂದ ಸಾಮೂಹಿಕ ಇಷ್ಟಲಿಂಗ ಪೂಜೆ

ಇಷ್ಟಲಿಂಗವು ಸೃಷ್ಟಿಕರ್ತ ಲಿಂಗದೇವನ ಚುಳುಕಾದ ಸ್ವರೂಪ. ಶ್ರೀಗುರು ಬಸವಣ್ಣನವರು ಸ್ಥಾಪಿಸಿದ ಹೊಸ ಲಿಂಗಾಯತ ಧರ್ಮದ ಲಾಂಛನವಾದ ಇಷ್ಟಲಿಂಗವನ್ನು ಪ್ರತಿಯೊಬ್ಬರೂ ಧರಿಸಿ-ಆಚರಿಸಿ - ಅನುಸಂಧಾನಗೈಯಬೇಕು. ಅದುವೇ ಪ್ರತಿ ಲಿಂಗಾಯತ ಧರ್ಮಾನುಯಾಯಿಯ ಕಡ್ಡಾಯ ಕರ್ತವ್ಯ." ಎಂದು ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು. ಅವರು ನವದೆಹಲಿಯ ಎಂ.ಸಿ.ಡಿ ಸಮುದಾಯ ಭವನದಲ್ಲಿ ರಾಷ್ಟ್ರೀಯ ಬಸವ ದಳ ಹಾಗೂ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಹಮ್ಮಿಕೊಂಡಿದ್ದ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನದ ಅಂಗವಾದ **"ಸಾಮೂಹಿಕ ಇಷ್ಟಲಿಂಗಾರ್ಚನಾ"** ಸಮಾರಂಭದ ದಿವ್ಯ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡುತ್ತಿದ್ದರು.

ಸಾವಿರಾರು ಶರಣ-ಶರಣೆಯರಿಗೆ ಇಷ್ಟಲಿಂಗ ಪೂಜಾ ಪ್ರಾತ್ಯಕ್ಷಿಕ ತೋರಿಸುತ್ತ ವಿವರಣೆ ನೀಡುತ್ತಿದ್ದ ಪೂಜ್ಯ ಶ್ರೀ ಮಾತಾಜಿಯವರು, ಇಷ್ಟಲಿಂಗ ಜಾತಿಯ ದ್ಯೋತಕವಲ್ಲ. ಮಾನವ ಮಾನವರ ಮಧ್ಯದ ಜಾತೀಯ ಅಡ್ಡಗೋಡೆಯನ್ನು ತೆಗೆದು ಹಾಕಿ ಪ್ರತಿಯೊಬ್ಬರಲ್ಲೂ ಸಮಾನತೆ- ಸಹೋದರತೆಯನ್ನು ಮೂಡಿಸಿ ಸೃಷ್ಟಿಕರ್ತನ ಸಾಮ್ರಾಜ್ಯದಲ್ಲಿ ನಾವೆಲ್ಲ ಅವನ ಮಕ್ಕಳು ಎಂಬ ಭಾವನೆ ಮೂಡಿಸುವುದೇ ಆಗಿದೆ ಎಂದು ಮಾತಾಜಿಯವರು ನುಡಿದರು.

ಇಷ್ಟಲಿಂಗ ಪೂಜೆಯನ್ನೂ ಅದರ ಪ್ರತಿ ಹಂತಗಳನ್ನು ಅರ್ಥ ಪೂರ್ಣವಾಗಿ ವಿವರಿಸುತ್ತ ಹಾಗೂ ತೋರಿಸುತ್ತ ಸಾಗಿದಾಗ ಸಹಸ್ರಾರು ಶರಣ - ಶರಣೆಯರು ಪೂಜಾ ಸಾಮಗ್ರಿಗಳೊಂದಿಗೆ ಉಪಸ್ಥಿತರಿದ್ದು ಲಿಂಗಪೂಜೆ ಮಾಡಿಕೊಳ್ಳುತ್ತಿದ್ದ ದೃಶ್ಯ ಜೊತೆಗೆ ಪೂಜ್ಯ ಮಾತಾಜಿಯವರ ಮಧುರ ಕಂಠದಿಂದ ಹೊರ ಹೊಮ್ಮುತ್ತಿದ್ದ ವಚನ ಗಾಯನ ಸಮ್ಮೇಳನದಲ್ಲಿ ಅಧ್ಯಾತ್ಮಿಕ ದಿವ್ಯಾನಂದವನ್ನೇ ಧರೆಗಿಳಿಸಿದಂತಿತ್ತು.

ಧಾರವಾಡ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು "ಮಾನವ ಜೀವನದ ಧ್ಯೇಯ" ವಿಷಯದ ಬಗ್ಗೆ ಆಶೀರ್ವಚನ ನೀಡಿ "ಕೇವಲ ಐಹಿಕ ಸುಖಭೋಗಗಳ ಕಡೆಗೆ ಗಮನ ನೀಡುವ ವ್ಯಕ್ತಿಗಳಿಂದ ಜೀವನದಲ್ಲಿ ಯಾವುದೇ ಮಹೋನ್ನತ ಕಾರ್ಯ ಸಾಧಿಸಲು ಸಾಧ್ಯವಾಗುವುದಿಲ್ಲ. ಬದಲಾಗಿ ಬದುಕಿನಲ್ಲಿ ಅಧ್ಯಾತ್ಮ ಪಥದಲ್ಲೂ ಸಾಗಬೇಕು. ಶ್ರೀಗುರು ಬಸವಣ್ಣನವರ ಅನುಯಾಯಿಗಳಾದ ನಾವೆಲ್ಲ ಅವರ ಪಥದಲ್ಲಿ ಸಾಗಿ ಬದುಕನ್ನು ಪಾವನ ಮಾಡಿಕೊಳ್ಳೋಣ." ಎಂದರು.

ಸಮಾರಂಭವನ್ನು ಉದ್ಘಾಟಿಸಿದ ನವ ದೆಹಲಿಯ ಲೋಕಸಭಾ ಸದಸ್ಯ ಸಜ್ಜನ್ ಕುಮಾರ್ ಮಾತನಾಡಿ ಪೂಜ್ಯ ಶ್ರೀ ಮಹಾಜಗದ್ಗುರು ಮಾತಾಜಿಯವರು ದೆಹಲಿಯಲ್ಲಿ ಧರ್ಮ ಸಮ್ಮೇಳನ ನಡೆಸಿದ್ದು ನಮಗೆಲ್ಲ ಅತ್ಯಂತ ಹರ್ಷ ತಂದಿದೆ.

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಅತ್ಯಂತ ಮಹೋನ್ನತ ಸ್ಥಾನವಿದೆ. ಮಾತೆ- ಶಕ್ತಿ ಸ್ವರೂಪಿಯಾಗಿರುವ ಸ್ತ್ರೀಯರಿಂದ ಸಮಗ್ರ ಜಗತ್ತಿನ ಸೃಷ್ಟಿ ನಡೆದಿದೆ.

ಪೂಜ್ಯ ಮಾತಾಜಿಯವರು ದೈವೀ ಸ್ವರೂಪಿಯಾಗಿದ್ದಾರೆ. ತಮ್ಮಂತಹ ಸಹಸ್ರಾರು ಜನರನ್ನು ರಾಜಧಾನಿಯವರೆಗೆ ಕರೆತಂದು ಸತ್ಸಂಗ ನಡೆಸುವುದು ಸಣ್ಣ ಮಾತಲ್ಲ.

ಪೂಜ್ಯ ಮಾತಾಜಿಯವರ ದರ್ಶನ ಪಡೆದು- ಪ್ರವಚನ ಆಲಿಸುವ ಸೌಭಾಗ್ಯ ಪ್ರಾಪ್ತಿಯಾಗಿದ್ದು ನನಗೆ ಹರ್ಷ ತಂದಿದೆ." ಎಂದು ಅವರು ನುಡಿದರು.

ಸಮ್ಮೇಳನ ಸಮಿತಿ ಸಂಚಾಲಕ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ಪ್ರಸ್ತಾವನೆ ಗೈದು ವಿಶ್ವ ಸಹೋದರತ್ವ ಮೂಡಿಸುವ ಇಷ್ಟಲಿಂಗ ಪೂಜೆ ಮೂಲಕ ದೇವ ಕೃಪೆಯನ್ನು ಅವತೀರ್ಣಗೊಳಿಸಿಕೊಳ್ಳುವ ಸುವರ್ಣಾವಕಾಶ ಪ್ರತಿ ಲಿಂಗಾಯತನಿಗೆ ದೊರೆತಿರುವುದು ಮಹಾಭಾಗ್ಯ. ಇಷ್ಟಲಿಂಗ ಪೂಜೆಯ ಮೂಲಕ ಅಧ್ಯಾತ್ಮಿಕ ಅನುಭೂತಿಯನ್ನು ನಾವೆಲ್ಲ ಹೊಂದಬೇಕು." ಎಂದು ನುಡಿದರು.

ಸಂವಿಧಾನಾತ್ಮಕ ಮಾನ್ಯತೆ ಪಡೆಯುವವರೆಗೆ
ಅವಿಶ್ರಾಂತ ಹೋರಾಟ: ಪೂಜ್ಯ ಮಾತಾಜಿ ಘೋಷಣೆ

ವಿಶ್ವಗುರು ಬಸವಣ್ಣನವರಿಂದ 12ನೆಯ ಶತಮಾನದಲ್ಲಿ ಸಂಸ್ಥಾಪನೆಗೊಂಡಿರುವ ಲಿಂಗಾಯತ ಧರ್ಮವು ಸ್ವತಂತ್ರ, ಪರಿಪೂರ್ಣ, ಪ್ರಗತಿಪರ ಧರ್ಮವಾಗಿದ್ದು ಈ ಧರ್ಮಕ್ಕೆ ಭಾರತೀಯ ಸಂವಿಧಾನದ ಅನ್ವಯ ಸ್ವತಂತ್ರ ಧರ್ಮದ ಮಾನ್ಯತೆ ದೊರೆತು ಲಿಂಗಾಯತರನ್ನು ಧಾರ್ಮಿಕ ಅಲ್ಪ ಸಂಖ್ಯಾತರೆಂದು ಪರಿಗಣಿಸುವವರೆಗೂ ತಾವು ಅವಿಶ್ರಾಂತ ಹೋರಾಟ ಮಾಡುವದಾಗಿ ಪೂಜ್ಯ ಶ್ರೀ ಮನ್ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಘೋಷಿಸಿದರು.

ಅವರು ನವದೆಹಲಿಯ ಎಂ.ಸಿ.ಡಿ.ಸಮುದಾಯ ಭವನದ ಆವರಣದ ಭವ್ಯ ವೇದಿಕೆಯಲ್ಲಿ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನದ ಸಮಾರೋಪ ಸಮಾರಂಭದ ದಿವ್ಯ ಸನ್ನಿಧಿವಹಿಸಿ ಆಶೀರ್ವಚನ ನೀಡುತ್ತಿದ್ದರು.

ಲಿಂಗಾಯತ ಎಂದರೆ ಒಂದು ಜಾತಿಯಲ್ಲ ಭಾರತ ದೇಶದಲ್ಲಿ ಬೇರೂರ‍್ದ ಜಾತಿ ವ್ಯವಸ್ಥೆ ಯಜ್ಞ ಯಾಗಗಳಂತಹ ಮೂಢಾಚರಣೆಗಳ ವಿರುದ್ಧವೇ ರೂಪುಗೊಂಡ ವೈಜ್ಞಾನಿಕ ಚಿಂತನೆಗಳನ್ನು ಹೊಂದಿದ ಜಾತ್ಯತೀತ ಜೀವನ ವಿಧಾನವಾಗಿದೆ ಎಂದು ಸ್ಪಷ್ಟಪಡಿಸಿದರು. ಲಿಂಗಾಯತ ಎಂಬ ಸ್ವತಂತ್ರ ಧರ್ಮವನ್ನು ನಾವೆಲ್ಲ ಮಠಾಧೀಶರು ಜಾಗತೀಕರಣ ಮಾಡಬೇಕೇ ವಿನಾ ಜಾತೀಕರಣ ಮಾಡಬಾರದು ಎಂದರು.

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ಅವರು ಮಾತನಾಡಿ ಜಾಗತಿಕ ಮಟ್ಟದಲ್ಲಿ ಜೈನ, ಬೌದ್ಧ, ಕ್ರೈಸ್ತ, ಇಸ್ಲಾಂ ಧರ್ಮಗಳ ಸಾಲಿನಲ್ಲಿ ಲಿಂಗಾಯತ ಧರ್ಮವು ತಲೆಎತ್ತಿ ನಿಲ್ಲಬೇಕು. ಇಂತಹ ಒಂದು ಮಹತ್ವಾಕಾಂಕ್ಷೆಯನ್ನು ನನಸಾಗಿಸುವ ಉದ್ದೇಶದಿಂದ ರಾಷ್ಟ್ರದ ರಾಜಧಾನಿಯಲ್ಲಿ ಪೂಜ್ಯ ಮಾತಾಜಿಯವರು ಪ್ರಸ್ತುತ ಸಮ್ಮೇಳನವನ್ನು ಹಮ್ಮಿಕೊಂಡಿದ್ದಾರೆ. ಅವರ ಸತ್ಸಂಕಲ್ಪ ಈಡೇರಿಸುವ ದಿಶೆಯಲ್ಲಿ ನಾವೆಲ್ಲ ಶಕ್ತಿ ಮೀರಿ ಪ್ರಯತ್ನಿಸೋಣ ಎಂದು ನುಡಿದರು.

ಮುಖ್ಯ ಅತಿಥಿ ನವದೆಹಲಿಯ ಪಾಲಮ್ ಕ್ಷೇತ್ರದ ಶಾಸಕ ಧರ್ಮದೇವ್ ಸೋಲಂಕಿ ಅವರು ಮಾತನಾಡಿ ಇಂದು ನಿಜಕ್ಕೂ ನನ್ನ ಮತ ಕ್ಷೇತ್ರವಾದ ಪಾಲಮ್ ಧನ್ಯವಾಗಿದೆ. ದಕ್ಷಿಣದ ರಾಜ್ಯಗಳಿಂದ ಇಷ್ಟೊಂದು ಸಂಖ್ಯೆಯಲ್ಲಿ ಶರಣ ಸಮೂಹ ಆಗಮಿಸಿ ಸಾಮೂಹಿಕ ಪ್ರಾರ್ಥನೆ ನಡೆಸಿದ್ದು ನಿಜಕ್ಕೂ ನನಗೆ ಸಂತೋಷ ತಂದಿದೆ. ಪೂಜ್ಯ ಮಾತಾಜಿಯವರ ಅದ್ಭುತ ಸಂಘಟನಾ ಶಕ್ತಿಗೆ ಈ ಸಮ್ಮೇಳನವೇ ಸಾಕ್ಷಿ ಎಂದು ಭಾವ ತುಂಬಿ ನುಡಿದರು. ವೇದಿಕೆಯಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿ, ಪೂಜ್ಯ ಶ್ರೀ ಬಸವ ಲಿಂಗ ಸ್ವಾಮೀಜಿ, ರಾಜ್ಯ ರಾ. ಬ. ದಳದ ಅಧ್ಯಕ್ಷ ಕೆ.ವೀರಣ್ಣ ಲಿಂಗಾಯತ, ಆಂಧ್ರ ಪ್ರದೇಶ್ ರಾ.ಬ.ದಳದ ಅಧ್ಯಕ್ಷ ಧನರಾಜ ಜೇರಗೆ, ಸೇರಿದಂತೆ ವಿವಿಧ ಗಣ್ಯರು ಉಪಸ್ಥಿತರಿದ್ದರು.

– ವರದಿ: ಕೆ.ಎಸ್.ಕೋರಿಶೆಟ್ಟರು, ನ್ಯಾಯವಾದಿ, ಧಾರವಾಡ

ಕಲ್ಯಾಣ ಕಿರಣದ ಓದುಗರಿಗೆ ಸೂಚನೆ

ಕಲ್ಯಾಣ ಕಿರಣದ ಪ್ರತಿಗಳು ಒಂದಕ್ಕಿಂತ ಹೆಚ್ಚು ಬರುತ್ತಿದ್ದರೆ ಒಂದು ಮಾತ್ರ ಉಳಿಸಿಕೊಂಡು ಹೆಚ್ಚಿನ ಪ್ರತಿಯನ್ನು ತಿರಸ್ಕರಿಸಿ, ವಾಪಸ್ಸು ಕಳಿಸಿರಿ.

ಸಮ್ಮೇಳನದ ಸವಿ ಸವಿ ನೆನಪು

ಬಸವನ ಬೆಳಕೆ ಎಲ್ಲಾಡಿ ಬಂದೆ; ಭಾರತವೆಲ್ಲಾ ಸುತ್ತಾಡಿ ಬಂದೆ
ಬಸವನ ಬೆಳಕೆ ಎಲ್ಲಾಡಿ ಬಂದೆ
ಕನ್ನಡ ವನದಲ್ಲಿ ನಲಿದಾಡಿ ಬಂದೆ................

ಎಂಬ ಕವಿವಾಣಿಯಂತೆ ರಾಷ್ಟ್ರದ ರಾಜಧಾನಿಯಲ್ಲಿ ಸಂಪನ್ನಗೊಂಡ ಲಿಂಗಾಯತ ಧರ್ಮ ಸಮ್ಮೇಳನ ಅಕ್ಷರಶಃ ಬಸವನ ಬೆಳಕನ್ನು ಭಾರತವೆಲ್ಲ ಸುತ್ತಾಡಿಸಿದೆ.

ಮೂರು ದಿನಗಳ ಈ ಧಾರ್ಮಿಕ ಹಬ್ಬ ನಮ್ಮ ಬದುಕಿನಲ್ಲಿ ಹೊಸ ಭರವಸೆ - ಆಶಾ ಭಾವನೆಗಳನ್ನು, ಸವಿ ಸವಿಯಾದ ಸಾವಿರ ನೆನಪುಗಳನ್ನು ಮನದಂಗಳದಲ್ಲಿ ಬಿತ್ತಿ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಡುವಂಥದಾಗಿದೆ.

ಪೂಜ್ಯ ಮಾತಾಜಿಯವರ ನೇತೃತ್ವ- ಕರ್ಣಧಾರತ್ವದಲ್ಲಿ ನಡೆಯುವ ಯಾವುದೇ ಕಾರ್ಯಕ್ರಮವಿರಲಿ, ಅದು ವಿವಿಧ ವೈಶಿಷ್ಟ್ಯಗಳ ಸಂಗಮವಾಗಿರುತ್ತದೆ. ತಾಯಿಯ ಹೃದಯಾಂತರಾಳ -ದಿಂದ ಬರುವ ವಾತ್ಸಲ್ಯದ ಕರೆಗೆ ಮಕ್ಕಳು ಓಡೋಡಿ ಬರುವಂತೆ ಮಾತಾಜಿಯವರ ದರ್ಶನ-ಪ್ರವಚನಕ್ಕಾಗಿ ಸುಸಂಸ್ಕೃತ ಶರಣ-ಶರಣೆಯರು ಎಷ್ಟೇ ದೂರದಿಂದಲಾದರೂ ಸರಿ ಸಮಾವೇಶ ಗೊಳ್ಳುತ್ತಾರೆ. ಶರಣ ಮೇಳ, ಕಲ್ಯಾಣ ಪರ್ವ, ಅಲ್ಲಮಗಿರಿಯ ಲಿಂಗಾಯತ ಗಣಮೇಳ, ನವದೆಹಲಿಯ ಲಿಂಗಾಯತ ಧರ್ಮ ಸಮ್ಮೇಳನ ಹಾಗೂ ಅನೇಕ ಕಡೆ ಹಮ್ಮಿಕೊಳ್ಳುವ ತರಬೇತಿ ಶಿಬಿರಗಳಿಗೆ ಆಗಮಿಸುವ ಶರಣ ವೃಂದವನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ.

ಕೆಲವರು ನಡೆಸುವ ಜಾತ್ರೆ- ದರ್ಬಾರ್‌ಗಳನ್ನು ತಾವು ಗಮನಿಸಿರಬಹುದು, ಉದ್ದೇಶಿತ ಸಮಾರಂಭಕ್ಕೆ ಮೂರ್ನಾಲ್ಕು ತಿಂಗಳುಗಳ ಮೊದಲೇ ಪೂರ್ವಭಾವಿ ಸಭೆ ನಡೆಸಿ ಆ ಭಾಗದ ಸಚಿವರು, ಸಂಸದರು, ಶಾಸಕರು, ಸ್ಥಳೀಯ ಮುಖಂಡರು, ಶ್ರೀಮಂತರನ್ನೊಳಗೊಂಡ ಕಾರ್ಯಕಾರಿ ಸಮಿತಿ ರಚಿಸಿ ಕೋಟ್ಯಂತರ ರೂಪಾಯಿ ಚಂದಾ ಎತ್ತಿ ಪತ್ರಿಕೆ ಹಾಗೂ ಇಲೆಕ್ಟ್ರಾನಿಕ್ ಮಾಧ್ಯಮಗಳ ಮುಖಾಂತರ ಜಾಹಿರಾತುಗಳನ್ನು ಪ್ರಕಟಿಸಿ ಜನರನ್ನು ಸೇರಿಸುವಷ್ಟರಲ್ಲಿ ಸಂಘಟಕರು ಹೈರಾಣಾಗಿರುತ್ತಾರೆ. 8-9 ದಿನಗಳ ವರೆಗೆ ನಡೆಯುವ ಇಂತಹ ದರ್ಬಾರಗಳು ಸಮಾಜಕ್ಕೆ ಏನೊಂದೂ ಸಂದೇಶ ಮಾರ್ಗದರ್ಶನ ನೀಡದೆ ಯಾರನ್ನೋ ಮೆರೆಸಿ ಜನರ ಮನಸ್ಸಿನಿಂದ ಮರೆಯಾಗಿ ಹೋಗುತವೆ. ಇಂತಹ ದರ್ಬಾರ್‌ಗಳ ವೇದಿಕೆಯ ಮೇಲೆ ಭಾಷಣ ಮಾಡುವ ರಾಜಕಾರಣಿಗಳಿಗೆ, ಉಪನ್ಯಾಸಕರಿಗೆ ತಾತ್ವಿಕ ಚಿಂತನೆಗಳ ಬದಲಾಗಿ ಕರೆಸಿದವರನ್ನು ಇಂದ್ರ, ಚಂದ್ರ ಎಂದು ಹೊಗಳುವುದೇ ಮುಖ್ಯವಾಗಿರುತ್ತದೆ. ಇನ್ನು ಕೇಳುಗರಿಗಂತೂ ಸಮಾರಂಭದ ಉದ್ದೇಶವೇ ಗೊತ್ತಿರುವುದಿಲ್ಲ. ಒಂದು ರೀತಿಯಲ್ಲಿ ''ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ....''

ಇಂತಹ ದರ್ಬಾರ ಸಂಘಟಕರು ಜನರನ್ನು ಸೇರಿಸುವ ಉದ್ದೇಶದಿಂದ ರಾಜಕಾರಣಿಗಳನ್ನು ಕರೆಸುತ್ತಾರೆ. ಆದರೆ ನಮ್ಮ ಸಮ್ಮೇಳನಗಳಿಗೆ ಸ್ವಯಂ ಪ್ರೇರಿತರಾಗಿ ಬರುವ ಲಕ್ಷಾಂತರ ಶರಣ -ಶರಣೆಯರು ಧರ್ಮಗುರುವಿನ ಸ್ಮರಣೆ, ಪೂಜ್ಯ ಮಾತಾಜಿಯವರ ದರ್ಶನ - ಪ್ರವಚನಕ್ಕಾಗಿ ಸೇರುತ್ತಾರೆಯೇ ವಿನಾ ಯಾವುದೇ ರಾಜಕೀಯ ವ್ಯಕ್ತಿಗಳು ನಮಗೆ ಮುಖ್ಯವಲ್ಲ.

ನವದೆಹಲಿಯಲ್ಲಿ ಅಕ್ಟೋಬರ್ 27ರಿಂದ 29ರವರೆಗೆ ಅದ್ಭುತ ಯಶಸ್ಸು ಕಂಡ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನ ನಮ್ಮ ಧಾರ್ಮಿಕ ಚರಿತ್ರೆಯಲ್ಲೊಂದು ಮೈಲಿಗಲ್ಲು. ಸಮುದಾಯ ಪ್ರಾರ್ಥನೆ, ಸಾಮೂಹಿಕ ಇಷ್ಟಲಿಂಗಾರ್ಚನೆ, ಸಂಸತ್ ಮಾರ್ಗದಲ್ಲಿ ಜರುಗಿದ ಪಥ ಸಂಚಲನ..... ಅಬ್ಬಬ್ಬಾ ಇದೆಲ್ಲಾ ನೋಡಿದರೆ ಒಂದೊಂದೂ ಐತಿಹಾಸಿಕವೆ. ದಕ್ಷಿಣ ಭಾರತದಲ್ಲಿ ಬಲಿಷ್ಠ ಸಮಾಜವನ್ನು ಹೊಂದಿದ್ದರೂ ರಾಷ್ಟ್ರದ ರಾಜಧಾನಿಯಲ್ಲಿ ನಮ್ಮದೆ ಆದ ಒಂದು ಧಾರ್ಮಿಕ ಕೇಂದ್ರವನ್ನು ತೆರೆಯಲು ಆಗಿರಲಿಲ್ಲ. ಪೂಜ್ಯ ಮಾತಾಜಿಯವರ ಸಂಕಲ್ಪ, ಅವಿಶ್ರಾಂತ ಪರಿಶ್ರಮದಿಂದ ರಾಜಧಾನಿಯಲ್ಲಿ ರೂಪುಗೊಂಡ ಬಸವ ಮಂಟಪ ಅಕ್ಷರಶಃ ಲಿಂಗಾಯತ ಧರ್ಮೀಯರ ತವರು ಮನೆಯಂತೆ ಕಂಗೊಳಿಸುತ್ತಿದೆ.

1997ರ ಬಸವ ಧರ್ಮ ಸಮ್ಮೇಳನ, 2005ರ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ ಅದ್ಭುತವಾಗಿ ಜರುಗಿದರೂ ಆಗ ನಮ್ಮದೇ ಆದ ಬಸವ ಮಂಟಪವಿರಲಿಲ್ಲ. ಪ್ರತಿನಿಧಿಗಳಿಗೆ ಬೇರೆ ಬೇರೆ ವಸತಿ ಗೃಹ, ಸಮುದಾಯ ಭವನಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗಿತ್ತು. ಆದರೆ ಈ ಬಾರಿಯಂತೂ 3 ಅಂತಸ್ತಿನ ಭವ್ಯ ಬಸವ ಮಂಟಪದ ವಿಶಾಲವಾದ ಸಭಾಂಗಣಗಳು ಬಹುತೇಕ ಪ್ರತಿನಿಧಿಗಳ ವಸತಿಗೆ ಅನುಕೂಲವಾಯಿತು. ಬಸವ ಮಂಟಪದ ಸನಿಹದಲ್ಲಿರುವ ದಾಬಡಿಯ ಎಂ.ಸಿ.ಡಿ. ಸಮುದಾಯ ಭವನದ ಆವರಣದಲ್ಲಿ ಬೃಹತ್ ಸಭಾ ಮಂಟಪ ನಿರ್ಮಿಸಲಾಗಿತ್ತು. ಸಭಾ ಮಂಟಪದಿಂದ ಬಸವ

ಮಂಟಪಕ್ಕೆ ಕಾವಿಯ ಸ್ಕಾರ್ಫ್ ಧರಿಸಿದ ಶರಣ - ಶರಣೆಯರು ಹೋಗಿ ಬಂದು ಮಾಡುತ್ತಿದ್ದ ದೃಶ್ಯ ನಿತ್ಯ ಪಥ ಸಂಚಲನದಂತೆ ಕಂಗೊಳಿಸಿ ದೆಹಲಿಯ ನಿವಾಸಿಗಳು ಆಶ್ಚರ್ಯ, ಆನಂದ , ಪೂಜ್ಯ ಭಾವನೆಯಿಂದ ವೀಕ್ಷಿಸುತ್ತಿದ್ದರು.

ಆಟೋ, ಸೈಕಲ್ ರಿಕ್ಷಾ, ಟ್ಯಾಕ್ಸಿ ಯವರು ಕಾವಿಯ ಸ್ಕಾರ್ಫ್ ಧರಿಸಿದ ಶರಣ - ಶರಣೆಯರನ್ನು ನೋಡುತ್ತಲೇ ಎಲ್ಲಿಗೆ ಎಂದು ಪ್ರಶ್ನಿಸದೆ ಮಾತಾ ಆಶ್ರಮಕ್ಕಾ..? ಎಂದು ಕೇಳುತ್ತಿದ್ದರು. ಮೆಟ್ರೋ ರೈಲುಗಳಲ್ಲಿ ಮುಕ್ಕಾಲು ಭಾಗ ಭರ್ತಿಯಾಗುತ್ತಿದ್ದ ನಮ್ಮ ಸ್ಕಾರ್ಫ್ ಧಾರಿ ಪ್ರತಿನಿಧಿಗಳನ್ನು ಕಂಡೊಡನೆ ಉಳಿದವರು ಭಕ್ತಿಯಿಂದ ನಮಸ್ಕರಿಸುತ್ತಿದ್ದರಲ್ಲದೆ ನಮ್ಮನ್ನು ಯಾವ ರಾಜ್ಯದವರು, ಲಿಂಗಾಯತ ಎಂದರೇನು? ಹೀಗೆಲ್ಲ ಹಿಂದಿಯಲ್ಲಿ ಕುತೂಹಲದಿಂದ ಪ್ರಶ್ನಿಸಿ ಮಾಹಿತಿ ಪಡೆದು ಕೊಳ್ಳುವುದು ಸಾಮಾನ್ಯವಾಗಿತ್ತು. ಕಳೆದ ಸಮ್ಮೇಳನಕ್ಕಿಂತ ಈ ಬಾರಿ ದೆಹಲಿಯ ಸ್ಥಳೀಯರ ಪ್ರಾತಿನಿಧ್ಯ ಅಧಿಕವಾಗಿತ್ತು. ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿಯವರು ದೆಹಲಿ ಬಸವ ಮಂಟಪದ ಉಸ್ತುವಾರಿ ವಹಿಸಿಕೊಂಡಂದಿನಿಂದ ದೆಹಲಿಯ ಕಾರ್ಪೋರೇಟರ್‌ಗಳು, ಶಾಸಕರು, ಸಂಸದರು ಮತ್ತು ಅಲ್ಲಿ ನೆಲೆಸಿರುವ ಲಿಂಗಾಯತರು ಸ್ವಾಮೀಜಿಯವರ ವ್ಯಕ್ತಿತ್ವಕ್ಕೆ ಪ್ರಭಾವಿತರಾಗಿ ಸಮ್ಮೇಳನದಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಂಡಿದ್ದು ನಿಜಕ್ಕೂ ಅಭಿಮಾನದ ಸಂಗತಿಯಾಗಿತ್ತು. ಶ್ರೀಮದನ್‌ದಾಸ್ ಎನ್ನುವವರು 70 ಸಾವಿರ ರೂಗಳನ್ನು, ದೇವರಾಜ ಗುಪ್ತ ಎನ್ನುವವರು 25 ಸಾವಿರ ರೂಗಳನ್ನು ದೇಣಿಗೆಯಾಗಿ ನೀಡಿದರು. ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ದಾನಿಗಳೇ ಉಚಿತವಾಗಿ ಪೂರೈಸಿದರು.

ದಿ. 29ರಂದು ಜರುಗಿದ ಬೃಹತ್ ಪಥ ಸಂಚಲನವಂತೂ ಬಹುಶಃ ಲಿಂಗಾಯತರ ಧಾರ್ಮಿಕ ಇತಿಹಾಸದಲ್ಲಿ ಅತ್ಯದ್ಭುತವಾದ ಘಟನೆ. ಲಿಂಗಾಯತ ಧರ್ಮಕ್ಕೆ ಭಾರತೀಯ ಸಂವಿಧಾನದ ಅನ್ವಯ ಸ್ವತಂತ್ರ ಧರ್ಮದ ಮಾನ್ಯತೆ ನೀಡಿ ಧಾರ್ಮಿಕ ಅಲ್ಪ ಸಂಖ್ಯಾತರೆಂದು ಪರಿಗಣಿಸಬೇಕೆಂದು ಭಾರತ ಸರ್ಕಾರವನ್ನು ಆಗ್ರಹಿಸಿ ಪೂಜ್ಯ ಮಾತಾಜಿಯವರ ದಿವ್ಯ ನೇತೃತ್ವದಲ್ಲಿ 4 ತಾಸುಗಳಿಗೂ ಅಧಿಕ ಕಾಲ ನಡೆದ 2 ಕಿ.ಮಿ.ಉದ್ದದ ರ್‍ಯಾಲಿ ಸಂಸತ್ ಮಾರ್ಗದಲ್ಲಿ ಸಾಗಿ ಜಂತರ್-ಮಂತರ್ ಬಳಿ ಧರಣಿ ಸತ್ಯಾಗ್ರಹವಾಗಿ ಮಾರ್ಪಾಟಾಯಿತು. ಸತ್ಯಾಗ್ರಹ ಉದ್ದೇಶಿಸಿ ಆಶೀರ್ವಚನ ನೀಡಿದ ಪೂಜ್ಯ ಮಾತಾಜಿಯವರು ಲಿಂಗಾಯತ ಧರ್ಮ ಸ್ವತಂತ್ರ, ಪರಿಪೂರ್ಣ, ಪ್ರಗತಿಪರ ಧರ್ಮವಾಗಿದ್ದು ಈ ಧರ್ಮಕ್ಕೆ ಜನಗಣತಿಯಲ್ಲಿ ಪ್ರತ್ಯೇಕ ಕೋಡ್ ಲೆಟರ್ ನೀಡಬೇಕು. ಈ ದಿಶೆಯಲ್ಲಿ ನಮ್ಮ ಹೋರಾಟ ಅವಿಶ್ರಾಂತವಾಗಿ ಸಾಗುತ್ತದೆ ಎಂದು ಘೋಷಿಸಿದರು. ಪೂಜ್ಯ ಶ್ರೀ ಗಂಗಾಮಾತಾಜಿಯವರು, ಪೂಜ್ಯ ಚನ್ನಬಸವಾನಂದ ಸ್ವಾಮೀಜಿ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು. ಬಸವ ಶ್ರೀ ಪ್ರಶಸ್ತಿ ವಿಜೇತ ಸ್ವಾಮಿ ಅಗ್ನಿವೇಶ್ ಸತ್ಯಾಗ್ರಹ ಸ್ಥಳಕ್ಕೆ ಭೇಟಿ ನೀಡಿದರು. ಪ್ರಸಾದ ಸ್ವೀಕಾರದ ನಂತರ ಸತ್ಯಾಗ್ರಹವನ್ನು ಮುಕ್ತಾಯ ಗೊಳಿಸಿ ಎಲ್ಲಾ ಶರಣ - ಶರಣೆಯರು ಸಂಸತ್ ಭವನದ ವೀಕ್ಷಣೆಗೆ ಸಾಗಿದರು. ಸಹಸ್ರಾರು ಸಂಖ್ಯೆಯಲ್ಲಿ ತಂಡೋಪ ತಂಡವಾಗಿ ಆಗಮಿಸಿದ ಪ್ರತಿನಿಧಿಗಳನ್ನು ಕಂಡು ಸಂಸತ್ತಿನ ಭದ್ರತಾ ಸಿಬ್ಬಂದಿಯವರಿಗೆ ಅಚ್ಚರಿಯೋ ಅಚ್ಚರಿ. ಇಷ್ಟೊಂದು ಸಂಖ್ಯೆಯಲ್ಲಿ ಜನ ಸಮೂಹ ಆಗಮಿಸಿದ್ದು ನಮ್ಮ ಸೇವಾವಧಿಯಲ್ಲೇ ಮೊದಲು ನೋಡುತ್ತಿರುವುದು ಎಂದು ಸಿಬ್ಬಂದಿಯವರು ಹೇಳುತ್ತಿರುವುದು ಗಮನಾರ್ಹವಾಗಿತ್ತು. ರಾಜ್ಯ ಸಭೆಯ ಉಪಸಭಾಪತಿಯವರ ಆಪ್ತ ಕಾರ್ಯದರ್ಶಿ ವೈಜನಾಥ ಬಿರಾದಾರ್ ಎಲ್ಲ ಪ್ರತಿನಿಧಿಗಳಿಗೆ ಪಾಸ್ ವ್ಯವಸ್ಥೆ ಮಾಡಿದ್ದು ಮಾತ್ರವಲ್ಲದೆ ಸ್ವತಃ ತಾವೇ ಖುದ್ದಾಗಿ ನಿಂತು ಎಲ್ಲರಿಗೂ ಸಂಸತ್ ಭವನದ ಅತಿರಕ್ತಿತ ಪ್ರದೇಶದಲ್ಲಿರುವ ಧರ್ಮಗುರು ಬಸವಣ್ಣನವರ ಅಶ್ವಾರೂಢ ಪುತ್ಥಳಿ ಹಾಗೂ ರಾಷ್ಟ್ರಪತಿ ಭವನಕ್ಕೆ ಅನತಿ ದೂರದಲ್ಲಿರುವ ಕಿತ್ತೂರು ರಾಣಿ ಚನ್ನಮ್ಮನವರ ಅಶ್ವಾರೂಢ ಪುತ್ಥಳಿ, ಲೋಕಸಭಾ ಹಾಗು ರಾಜ್ಯ ಸಭಾ ಅಧಿವೇಶನ ನಡೆಯುವ ಸದನಗಳು, ಸೆಂಟ್ರಲ್ ಹಾಲ್ ಸೇರಿದಂತೆ ಎಲ್ಲಾ ಪ್ರಮುಖ ಸ್ಥಳಗಳ ಮಾಹಿತಿಯನ್ನು ಪ್ರತಿನಿಧಿಗಳಿಗೆ ವಿವರಿಸುತ್ತಿದ್ದರು. ಬರೀ ರಾಜಕಾರಣಿಗಳ, ಅಧಿಕಾರಿಗಳ ಆಡಂಬೋಲವಾಗಿದ್ದ ರಾಷ್ಟ್ರದ ಪ್ರಜಾಪ್ರಭುತ್ವದ ಆತ್ಮ ಸ್ವರೂಪ-ವಾಗಿರುವ ಸಂಸತ್ ಭವನದಲ್ಲಿ ಪ್ರಪ್ರಥಮ ಬಾರಿಗೆ ಬಸವ ಭಕ್ತರು ಸಮಾವೇಶ ಗೊಂಡಿದ್ದು ನಿಜಕ್ಕೂ ಅದ್ಭುತವಾಗಿತ್ತು. ಧರ್ಮಗುರು ಬಸವಣ್ಣನವರ ಅಶ್ವಾರೂಢ ಪುತ್ಥಳಿ ಎದುರು ಎಲ್ಲರೂ ಭಕ್ತಿಯಿಂದ ಕೈ ಮುಗಿದು ಪ್ರಾರ್ಥನೆ ಗೈದಿದ್ದು ಸಂಸತ್ ಆವರಣದಲ್ಲಿ ಅಧ್ಯಾತ್ಮಿಕ ವಾತಾವರಣವನ್ನೇ ಸೃಷ್ಟಿಸಿತು.

ಈ ರೀತಿ ವೈಶಿಷ್ಟ್ಯಗಳಿಂದ ಕೂಡಿದ ಲಿಂಗಾಯತ ಧರ್ಮ ಸಮ್ಮೇಳನ 3 ದಿನಗಳ ವರೆಗೆ ಯಶಸ್ವಿಯಾಗಿ ಸಂಪನ್ನಗೊಂಡಿತು. ಸಮ್ಮೇಳನದ ಸವಿ ಸವಿ ನೆನಪುಗಳನ್ನು ಮೆಲಕು ಹಾಕುತ್ತಲೆ ದಕ್ಷಿಣದ ರಾಜ್ಯಗಳತ್ತ ರೈಲಿನಲ್ಲಿ ಸಾಗುತ್ತಿದ್ದ ಶರಣ ಸಮೂಹದ ಪ್ರಾರ್ಥನೆ, ಪೂಜೆ, ವಚನ ಪಠಣ, ಅನುಭಾವ ಕಂಡು ಸಹ ಪ್ರಯಾಣಿಕರು ಕೂಡ ಭಕ್ತಿಯಿಂದ ಸ್ಪಂದಿಸುತ್ತಿದ್ದರು. ಒಂದರ್ಥದಲ್ಲಿ ರೈಲುಗಳು ಸಹ ಚಲಿಸುವ ಅನುಭವ ಮಂಟಪಗಳಾಗಿದ್ದು ಸಮ್ಮೇಳನದ ವೈಶಿಷ್ಟ್ಯ.

- ಕೆ.ಎಸ್.ಕೋರಿಶೆಟ್ಟರು

ವಚನ ದುಂದುಭಿ -9

- ಶರಣ ಸಚ್ಚಿದಾನಂದ

1. ಚತುರ್ವಿಧ ಭಕ್ತಿಗಳು ಯಾವುವು?
2. ಅಷ್ಟಾಂಗ ಯೋಗದ ಹಂತಗಳು ಯಾವುವು?
3. ತ್ರಿವಿಧ ಮಾಯೆ ಎಂದರೇನು?
4. ಷಡ್ ಭ್ರಮೆಗಳು ಯಾವುವು?
5. ಅವಸರದ ರೇಕಣ್ಣನವರ ವಚನಾಂಕಿತವೇನು?
6. ಏಕಾಂತ ರಾಮಿತಂದೆಯ ವಚನಾಂಕಿತವೇನು?
7. ಸೃಷ್ಟಿ ರಚನೆಯಾದ ಮೇಲೆ ಜಗತ್ಕರ್ತ ಪರಮಾತ್ಮನನ್ನು ವಚನ ಸಾಹಿತ್ಯದಲಿ ಏನೆಂದು ಕರೆದಿದ್ದಾರೆ?
8. ಗುರು ಬಸವಣ್ಣನವರು ಹರಳಯ್ಯನವರಿಗೆ ಹಿಂದಿರುಗಿಸಿದ ಚಮ್ಮಾವುಗೆಗಳನ್ನು ಯಾರು ಮೆಟ್ಟಿದರು?
9. ಸೃಷ್ಟಿ ರಚನೆಗಿಂತ ಮುಂಚೆ ಸ್ವಯಂಭುವಾಗಿದ್ದ ಪರಮಾತ್ಮನನ್ನು ವಚನ ಸಾಹಿತ್ಯದಲ್ಲಿ ಏನೆಂದು ಕರೆದಿದ್ದಾರೆ?
10. "ತನ್ನ ತಾನರಿದೊಡೆ ನುಡಿಯೆಲ್ಲಾ ತತ್ವ ನೋಡಾ, ತನ್ನ ತಾ ಮರೆದೊಡೆ ನುಡಿಯೆಲ್ಲಾ ಮಾಯೆ ನೋಡಾ" ಎಂದು ಯಾರು ಯಾರಿಗೆ ಹೇಳಿದರು?
11. ಅಲ್ಲಮ ಪ್ರಭುದೇವರು,ಸಿದ್ಧರಾಮಯ್ಯ ದೇವರು ಬಂದು ಬಾಗಿಲಲ್ಲಿ ನಿಂದಿರಲು ಕಣ್ಣರಿಯದಿದ್ದಡೂ ಕರುಳರಿಯಬೇಡವೆ? ಎಂದು ಯಾರು ಯಾರಿಗೆ ಹೇಳಿದರು?
12. ಮಾಚಿದೇವರು ಗುರು ಬಸವಣ್ಣನವರನ್ನು ಮೂರ್ತಿಗೊಳಿಸುವೆ ಎಂದು ಯಾವ ವಚನದಲ್ಲಿ ಹೇಳಿದ್ದಾರೆ?
13. ಸಿದ್ಧರಾಮೇಶ್ವರರ ಜನನವಾದಾಗ ಅವರ ಮನೆಗೆ ಬಂದ ಯೋಗಿ ಯಾರು?
14. ಗುರು ಬಸವಣ್ಣನವರು ಕಲ್ಯಾಣದಲ್ಲಿ ಏನನ್ನು ತಂದು ಚೆಲ್ಲಿದರು?
15. ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನ ಎಲ್ಲಿ ನಡೆಯಿತು?

ವಚನ ದುಂದುಭಿ -8ರ ಸರಿ ಉತ್ತರಗಳು

1. ಪರಮಾತ್ಮನ ನುಡಿಗಳು
2. ಮಂಗಳವೇಡೆಗೆ
3. ಪುರಾತನ ಸುವರ್ಣ ಪತ್ರ ಓದುವುದರ ಮೂಲಕ
4. ಅನಿಮಿಷಯ್ಯ(ವಸುಧೀಶ ಭೂಪಾಲ)
5. ಗುರು ಬಸವಣ್ಣನವರು
6. ಅಲ್ಲಮನೆ ಗುರುವಾದ ಕಲ್ಯಾಣ ಮಂಟಪಕೆ
   ಕಲ್ಲೆದೆಯ ಬಂಟ ಮಡಿವಾಳ ಕರುವಾಳು
   ಸಲ್ಲಿಸಲು ಸೇವೆ ಮಂಟಪಕೆ
7. ರಾಜಪುತ್ರಿ ಶರಣೆ ಬೊಂತಾದೇವಿ
8. ಬಹುರೂಪಿ ಚೌಡಯ್ಯ
9. ಆಯ್ದಕ್ಕಿ ಲಕ್ಕಮ್ಮ ತನ್ನ ಪತಿ ಮಾರಯ್ಯನವರಿಗೆ.
10. ಅಷ್ಟಾವರಣಗಳು, ಷಡಾಚಾರಗಳು, ಷಟಸ್ಥಲಗಳು, ಷಟ್‌ಸೂತ್ರಗಳು, ಷಟ್‌ಶೀಲಗಳು, ಷಟ್‌ಕ್ರಿಯೆಗಳು.
11. ಬಸವಾಚಾರ, ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ.
12. ಗುರು ಬಸವಣ್ಣನವರೇ ಲಿಂಗಾಯತ ಧರ್ಮದ ಆದಿ ಗುರು ಎಂದು ನಂಬಿ ಏಕ ಗುರು ಉಪಾಸನೆ ಮಾಡುವುದು
13. ಗುರು ತುಂಬಿದ ಚಿತ್ಕಳೆಯನ್ನು ಕಳೆದುಕೊಳ್ಳುತ್ತದೆ.
14. ಕಣ್ಣು ಕೀಳಿಸುವ ಶಿಕ್ಷೆ ಮತ್ತು ಎಳೆ ಹೂಟೆ ಶಿಕ್ಷೆ
15. ನಿಜಗುರು ಶಂಕರದೇವಾ

ವಚನ ದುಂದುಭಿ -8ರ ಸರಿ ಉತ್ತರ ಕೊಟ್ಟವರು

1. ನಿರ್ಮಲಾ ಜಯದೇವ, ಬೆಂಗಳೂರು
2. ನಾಗರಾಜು, ಫರಹತಾಬಾದ್
3. ಸುಮಾ ರಾಜು, ಭದ್ರಾವತಿ,
4. ರೂಪಾ ಜಗದೀಶ್, ಭದ್ರಾವತಿ
5. ಸರ್ವಮಂಗಳಾ ಗಂಗಾಧರ, ಬೆಂಗಳೂರು
6. ಎಚ್.ಚಂದ್ರಿಕಾ, ಭದ್ರಾವತಿ
7. ಮಲ್ಲನಗೌಡ ಪೋಲೀಸ್ ಪಾಟೀಲ್, ರಾಯಚೂರು
8. ಎಚ್.ಶಾಂತಮ್ಮ, ಭದ್ರಾವತಿ
9. ಮಮತಾ ಪ್ರವೀಣ್, ಭದ್ರಾವತಿ

☹ ಸಮಸ್ಯೆ ? - ಸಮಾಧಾನ ! ☺

☐ ಪರಮೇಶ್ವರಪ್ಪ, ಬಸವೇಶ್ವರ ನಗರ, ಬೆಂಗಳೂರು

? ಚಿತ್ರದುರ್ಗ ಮುರುಘಾಮಠದ ಶರಣ ಸಂಸ್ಕೃತಿ ಉತ್ಸವದಲ್ಲಿ ಉಥೇಚ್ಛವಾಗಿ ಪಟಾಕಿ ಹಾರಿಸಲಾಯಿತು. ಬಾನಂಗಳದಲ್ಲಿ ಮೂಡಿದ ಈ ಚಿತ್ತಾರ ಜನರನ್ನು ವಿಶೇಷವಾಗಿ ಆಕರ್ಷಿಸಿತು ಎಂದು ಪತ್ರಿಕೆಗಳಲ್ಲಿ ಬರೆದರು. ಶರಣ ಮೇಳದಲ್ಲಿ ಇಂಥ ಪಟಾಕಿ ಪ್ರದರ್ಶನ ಇಟ್ಟರೆ ಜನರು ಇನ್ನೂ ಹೆಚ್ಚು ಸೇರುವರಲ್ಲವೆ ? ಬಸವ ತತ್ವ ಪಾಲಕರೆಂದು ಹೇಳುವ ಶ್ರೀಗಳು ಇಂಥದಕ್ಕೆ ಅವಕಾಶ ಕೊಡಬಹುದೆ?

★ ಪಟಾಕಿ ಹಾರಿಸುವುದನ್ನು ಬಸವ ತತ್ವದವರು ಮಾಡುವುದು ದೇವ ದ್ರೋಹ, ಧರ್ಮ ದ್ರೋಹ, ಬಸವ ದ್ರೋಹ. ಸೃಷ್ಟಿಕರ್ತನು ಕೊಟ್ಟ ಶುದ್ಧ ಆಮ್ಲಜನಕಕ್ಕೆ ಅರ್ಥಾತ್ ಪ್ರಾಣವಾಯುವಿಗೆ ಪಟಾಕಿ ಹೊಗೆಯನ್ನು ಸೇರಿಸುವುದು ದೇವದ್ರೋಹ; ಲಿಂಗಾಯತ ಧರ್ಮ ಅದರ ಸಂಸ್ಥಾಪಕ ಬಸವಣ್ಣನವರು ಅಮೂಲ್ಯವಾದ ಸಂಪತ್ತನ್ನು ಸುಟ್ಟು, ಚೆಲ್ಲಿ, ಬಿಸಾಡಿ ಕೆಡಿಸಬಾರದೆಂದು ಅಪ್ಪಣೆಕೊಡಿಸಿದ್ದಾರೆ. ಪಟಾಕಿ ಸುಡುವುದು ಎಂದರೆ ದುಡ್ಡನ್ನು ಸುಟ್ಟಂತೆ. ದುಡ್ಡು ಸುಟ್ಟರೆ ಅದು ತಾನು ನಾಶವಾಗುತ್ತದೆ. ಪಟಾಕಿ ಸುಟ್ಟರೆ ದುಡ್ಡಿನ ಜೊತೆಗೆ ಹವೆಯು ಮಲಿನವಾಗುತ್ತದೆ. ಆಸ್ತಮಾ, ಉಸಿರಾಟದ ತೊಂದರೆ ಇರುವವರು ಮತ್ತು ಹೃದ್ರೋಗಿಗಳಿಗೆ ಬಹಳ ತ್ರಾಸಾಗುತ್ತದೆ. ಪಟಾಕಿ ಸುಡುವುದು ಪಾಪಕ್ರಿಯೆ. ಜನರನ್ನು ಸೇರಿಸಲು ಅಂಥ ದೃಶ್ಯ ವೈಭವ ನಮಗೆ ಬೇಕಿಲ್ಲ. ಮತ್ತು ಅಂಥದನ್ನು ನೋಡಲು ಬರುವವರು ಸಹ ನಮಗೆ ಅಗತ್ಯವಿಲ್ಲ.

☐ ಎ.ಎ.ಬಿರಾದಾರ, ನವದೆಹಲಿ

? ನವ ದೆಹಲಿಯಲ್ಲಿ ದಿ.30-10-2007ರಂದು ಒಂದು ಬೃಹತ್ ಪ್ರದರ್ಶನವನ್ನು ನಿಮ್ಮ ನೇತೃತ್ವದಲ್ಲಿ ಮಾಡಿದರಷ್ಟೆ. ಕರ್ನಾಟಕದಿಂದ ಬಂದ ಕೆಲವು ಬಸವ ತತ್ವ ಸಂಘಟನೆಯವರು ಮಾತನಾಡುತ್ತ, ನಾವು ಲಿಂಗಾಯತ ಧರ್ಮ ಎಂದು ಹೋರಾಡಲು ಬರದು; ಏಕೆಂದರೆ ನಮ್ಮೊಡನೆ ದೇ.ಜವರೇಗೌಡರು, ರಂಜಾನ್ ದರ್ಗಾ ಮುಂತಾದವರು ಸಂಬಂಧ ಇಟ್ಟುಕೊಂಡಿರುತ್ತಾರೆ. ನಾವು ಹಾಗೆ ಹೋರಾಡಿದರೆ ಅಂಥವರಿಗೆ ಬಹಳ ಬೇಜಾರಾಗುತ್ತದೆ ಎಂದರು.

★ ಈ ಜನರಲ್ಲಿ ಸೈದ್ಧಾಂತಿಕ, ತಾತ್ವಿಕ ತಿಳುವಳಿಕೆ ಇಲ್ಲ. ಹೀಗಾಗಿ ಅವರಿಗೆ ಆತ್ಮಬಲವಿಲ್ಲ. ಲಿಂಗಾಯತ ಧರ್ಮ ಅಹಿಂದು ಕಕ್ಷೆಯ ಸ್ವತಂತ್ರ ಧರ್ಮ ಎಂದು ಮಾನ್ಯತೆ ಹೊಂದಿದರೆ ಬಹುಶಃ ಸಂತೋಷ ಪಡುವ ವ್ಯಕ್ತಿಗಳು ದೇ.ಜವರೇಗೌಡರು ಮತ್ತು ರಂಜಾನ್ ದರ್ಗಾ. ಬಸವಣ್ಣನವರು ಕೊಟ್ಟ ಒಂದು ಕ್ರಾಂತಿಕಾರಿ ಸಮತಾವಾದಿ ಧರ್ಮ ಹಿಂದು ಧರ್ಮದೊಳಗಣ ಒಂದು ಜಾತಿಯಾಗಿ ವಿಕೃತಗೊಂಡು ಆಚರಿಸಲ್ಪಡುತ್ತಿರುವುದು ಈ ಪ್ರಾಜ್ಞರಿಗೆ ಬಹಳ ನೋವನ್ನು ಉಂಟು ಮಾಡಿದೆ. ಪಾಂಡುರಂಗ ಸೂರ್ಯವಂಶಿ "ಮೊದಲು ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮನ್ನಣೆ ಸಿಗಲಿ, ಬಹಳ ಜನ ದಲಿತರು ಸೇರುತ್ತಾರೆ," ಎಂದು ಸವಾಲು ಹಾಕುತ್ತಾರೆ. ವಿಚಾರ ಶೀಲರು ಎಂದೋ ಅರಿತಿದ್ದಾರೆ. ತನ್ನ ಧರ್ಮದ ಸ್ವರೂಪವನ್ನು ಅರಿಯದ ಅಜ್ಞಾನಿಗಳು, ನಿರಭಿಮಾನಿಗಳಿಂದಲೇ ಈಗ ಈ ಧರ್ಮಕ್ಕೆ ಕುತ್ತು.

☐ ಚಂದ್ರಶೇಖರ್ ಬೆನಕೊಪ್ಪ, ದಾವಣಗೆರೆ

? ದೇವರು ನಿರಾಕಾರ, ನಿರ್ಗುಣ, ಸರ್ವವ್ಯಾಪಿ ಎಂದು ಏಕದೇವೋಪಾಸಕರು ಹೇಳುವಿರಲ್ಲವೆ? ಅಂಥ ಸರ್ವವ್ಯಾಪಿ ದೇವರು ಗಿಡ -ಮರ, ನೀರು -ಬೆಂಕಿ, ಸೂರ್ಯ -ನಕ್ಷತ್ರ, ಹಸು -ಹಂದಿ ಎಲ್ಲದರಲ್ಲೂ ಇರುವುದರಿಂದ ಅವುಗಳನ್ನು ಪೂಜಿಸಿದರೆ ತಪ್ಪೇನು? ಎರಡೂ ವಾದ ಒಂದೇ ಅಲ್ಲವೆ? ಎಂದು ಕೆಲವರ ಅಂಬೋಣ.

★ ಎರಡೂ ವಾದಗಳು ಪೂರ್ವ -ಪಶ್ಚಿಮ, ಉತ್ತರ -ದಕ್ಷಿಣ ಧ್ರುವಗಳಂತೆ. ಏಕದೇವೋಪಾಸಕನ ಜ್ಞಾನ, ದೃಷ್ಟಿ ಬಹು ವಿಶಾಲ; ಪ್ರೌಢ, ಭೂಮ ದೃಷ್ಟಿ ಎಲ್ಲಿ - ಅಜ್ಞಾನಿಯಾಗಿ ದೇವರನ್ನು ಕಲ್ಪಿಸಿಕೊಳ್ಳಲಾರದೆ ಗಿಡ, ನೀರು, ಬೆಂಕಿಗಳಲ್ಲಿ ಹುಡುಕುವವನ ತಿಳುವಳಿಕೆ ಎತ್ತ! ಮೊದಲನೆಯದು ಜ್ಞಾನ ಮತ್ತು ಆತ್ಮವಿಶ್ವಾಸದ ಮೇಲೆ ನಿಂತಿದ್ದರೆ ಎರಡನೆಯದು ಅಜ್ಞಾನ ಮತ್ತು ಭೀತಿಯ ಮೇಲೆ ನಿಂತಿರುತ್ತದೆ.

☐ ಸುರೇಶ್ ಲಿಂಗಾಯತ, ಬೆಂಗಳೂರು

? ಲಿಂಗಾಯತ ಧರ್ಮ ಸ್ವತಂತ್ರ ಧರ್ಮ, ಹಿಂದು ಧರ್ಮದ ಅಂಗವಲ್ಲ ಎಂದು ನಿಮ್ಮ ಸ್ಪಷ್ಟ ಅಭಿಪ್ರಾಯ.ಆದರೆ ಇಂದು ಬಹುಪಾಲು ಲಿಂಗಾಯತರು ಹೋಮ ಹವನ, ಯಾಗ ಯಜ್ಞಗಳನ್ನು ಮಾಡುತ್ತಿದ್ದಾರೆ. ಇದು ಹೇಗೆ?

★ ಯಾರೋ ಕೆಲವರು ಭ್ರಷ್ಟರಾದ ಮಾತ್ರಕ್ಕೆ ಭಾರತದ ಸಂವಿಧಾನ ಭ್ರಷ್ಟವಾಗುವುದಿಲ್ಲ. ಹಾಗೆ ಯಾರೋ ಕೆಲವರು ಲಿಂಗಾಯತರು ಬೇರೆಯವರ ಪ್ರಭಾವದಿಂದ ತತ್ವ ಬಿಟ್ಟ ಮಾತ್ರಕ್ಕೆ ಲಿಂಗಾಯತ ಧರ್ಮದ ಸ್ವರೂಪ ಬದಲಾಗುವುದಿಲ್ಲವಷ್ಟೆ.

2008ನೇ ಇಸವಿಯಲ್ಲಿ ಬರುವ ಲಿಂಗಾಯತ ಧರ್ಮೀಯರ ಹಬ್ಬ - ಹುಣ್ಣಿಮೆ -ಉತ್ಸವಗಳು

ಜನವರಿ :	ಕೂಡಲ ಸಂಗಮದಲ್ಲಿ ಶರಣ ಮೇಳ	- 11-15ರವರೆಗೆ
	ಬಸವ ಧರ್ಮ ಸಂಸ್ಥಾಪನಾ ದಿನ- ಶರಣ ಸಮಾಗಮ	- 14
	ಸಿದ್ಧರಾಮೇಶ್ವರ ಜಯಂತಿ ★	- 15
ಫೆಬ್ರವರಿ :	ಶರಣ. ಹರ್ಡೇಕರ್ ಮಂಜಪ್ಪನವರ ಜಯಂತಿ	- 18
	ಚನ್ನ ಹುಣ್ಣಿಮೆ (ಉಳಿವೆಯಲ್ಲಿ ರಥೋತ್ಸವ)	- 21
	ಗಣಭೋಜನ	- 21
ಮಾರ್ಚ್ :	ಸರ್ವ ಶರಣರ ದಿನಾಚರಣೆ (ಗಣಮೇಳ) ★	- 05
	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ 3ನೆಯ 63ನೆಯ ವರ್ಧಂತಿ	- 13
ಎಪ್ರಿಲ್ :	ಮಹಾರಾಷ್ಟ್ರದ ಅಲ್ಲಮ ಗಿರಿಯಲ್ಲಿ ಲಿಂಗಾಯತ ಗಣಮೇಳ	- 6,7, 8
	ಅಲ್ಲಮ ಪ್ರಭು ಜಯಂತಿ	- 07
	ಅಕ್ಕಮಹಾದೇವಿ ಜಯಂತಿ	- 20
ಮೇ :	ಕಾಯಕ ದಿನಾಚರಣೆ	- 01
	ಮಡಿವಾಳ ಮಾಚಿದೇವ ಜಯಂತಿ	- 01
	ಬಸವ ಜಯಂತಿ ★	- 07
	ಲಿಂಗಾಯತರ ಹೊಸ ವರ್ಷ ಆರಂಭ ★	- 07
	ಹಡಪದ ಅಪ್ಪಣ್ಣ ಪೌರ್ಣಿಮೆ	- 19
ಜೂನ್ :	ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳ 13ನೇ ವರ್ಷದ ಲಿಂಗೈಕ್ಯ ಸಂಸ್ಮರಣೆ	- 30
ಜುಲೈ :	ಫ. ಗು. ಹಳಕಟ್ಟಿ ಜಯಂತಿ	- 02
	ಅಲ್ಲಮಪ್ರಭು ಪೌರ್ಣಿಮೆ	- 18
ಆಗಸ್ಟ್ :	ಬಸವ ಪಂಚಮಿ (ಲಿಂಗೈಕ್ಯ ಸಂಸ್ಮರಣೆ)	- 06
	ನೀಲಮ್ಮ ಷಷ್ಠಿ	- 07
	ನೀಲಾಂಬಿಕಾ ಪೌರ್ಣಿಮೆ	- 26
ಸೆಪ್ಟಂಬರ್ :	ಪೂಜ್ಯ ಲಿಂಗಾನಂದ ಸ್ವಾಮೀಜಿಯವರ 77ನೇ ಜಯಂತಿ	- 03
	ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬ	- 03
	ಪೂಜ್ಯ ಗಂಗಾದೇವಿಯವರ 51ನೇ ವರ್ಧಂತಿ	- 03
	ಮಾಚಿದೇವ ಪೌರ್ಣಿಮೆ	- 15
	ಕಲ್ಯಾಣ ಕ್ರಾಂತಿ ಸಂಸ್ಮರಣೋತ್ಸವ ಆರಂಭ	- 30
ಅಕ್ಟೋಬರ್:	ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ	- 7, 8, 9
	ಬಸವ ಧರ್ಮ ವಿಜಯೋತ್ಸವ	- 08
	ನಾಗಲಾಂಬಿಕಾ ಪೌರ್ಣಿಮೆ	- 14
	ಚನ್ನಬಸವಣ್ಣನವರ ಜಯಂತಿ	- 29
ನವೆಂಬರ್ :	ಚನ್ನಬಸವಣ್ಣನವರ ಲಿಂಗೈಕ್ಯ ದಿನ	- 13
	ವಚನ ಪೌರ್ಣಿಮೆ	- 13
ಡಿಸೆಂಬರ್ :	ಶರಣ ಪೌರ್ಣಿಮೆ	- 12



ಓಂ ಶ್ರೀ ಗುರುಬಸವಲಿಂಗಾಯ ನಮಃ

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ 2008 ರ ಜನವರಿ 11, 12, 13, 14, 15ರಂದು ನಡೆಯಲಿರುವ ಇಪ್ಪತ್ತೊಂದನೆಯ ಶರಣಮೇಳದ ಅಂಗವಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ

ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2008ನೆಯ ಇಸವಿಯ ಜನವರಿ ದಿ. 11ರಿಂದ 15ರವರೆಗೆ ನಡೆಯುವ 21 ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮವನ್ನು ಏರ್ಪಡಿಸಲೂ ಬಹುದು. ಪ್ರತ್ಯೇಕವಾಗಿ ಪತ್ರ ಬರೆಯಲು ಸಾಧ್ಯವಾಗುತ್ತಿಲ್ಲ. ಸಂಬಂಧಪಟ್ಟವರು ನೀವೇ ಕಾರ್ಯಕ್ರಮ ವ್ಯವಸ್ಥೆ ಮಾಡಿಕೊಳ್ಳಿರಿ. 2008 ನೆಯ ಇಸವಿಯ 21ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ಪೂಜ್ಯ ಶ್ರೀಮನ್ ನಿರಂಜನ

ವಾಸ್ತವ್ಯ : ಬೆಂಗಳೂರು

ಮಹಾ ಜಗದ್ಗುರು ಮಾತೆ ಮಹಾದೇವಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ, ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
1.	04-11-2007	ದೇವ (ಭಾನು) ವಾರ	ಬಂಗಾರಪೇಟೆ
2.	05-11-2007	ಶಿವ (ಸೋಮ) ವಾರ	ವಿಜಯಪುರ
3.	06-11-2007	ಬಸವ (ಮಂಗಳ) ವಾರ	ಕುಂಬುಗಾನ ಹಳ್ಳಿ
4.	07-11-2007	ಚನ್ನ (ಬುಧ) ವಾರ	ಚಿಂತಮಣಿ
5.	08-11-2007	ಪ್ರಭು (ಗುರು) ವಾರ	ತುರುವೇಕೆರೆ

6.	09-11-2007	ಮಾತೃ(ಶುಕ್ರ)ವಾರ	ತುರುವೇಕೆರೆ
7.	10-11-2007	ಶರಣ(ಶನಿ)ವಾರ	ಕೊಡುಗೇಹಳ್ಳಿ
8.	11-11-2007	ದೇವ(ಭಾನು)ವಾರ	ನಾಗರಘಟ್ಟ
9.	12-11-2007	ಶಿವ(ಸೋಮ)ವಾರ	ನಾಗರಾಳು
10.	13-11-2007	ಬಸವ(ಮಂಗಳ)ವಾರ	ಚಿಕ್ಕಮಗಳೂರು
11.	14-11-2007	ಚನ್ನ(ಬುಧ)ವಾರ	ಶಿವಪು
12.	15-11-2007	ಪ್ರಭು(ಗುರು)ವಾರ	,,
13.	16-11-2007	ಮಾತೃ(ಶುಕ್ರ)ವಾರ	ಭದ್ರಾವತಿ
14.	17-11-2007	ಶರಣ(ಶನಿ)ವಾರ	,,
15.	18-11-2007	ದೇವ(ಭಾನು)ವಾರ	ಶಿವಮೊಗ್ಗ
16.	19-11-2007	ಶಿವ(ಸೋಮ)ವಾರ	,,
17.	20-11-2007	ಮಂಗಳ(ಬಸವ)ವಾರ	,,
18.	21-11-2007	ಚನ್ನ(ಬುಧ)ವಾರ	ದಾವಣಗೆರೆ
19.	22-11-2007	ಪ್ರಭು(ಗುರು)ವಾರ	ಚಿತ್ರದುರ್ಗ
20.	23-11-2007	ಮಾತೃ(ಶುಕ್ರ)ವಾರ	ಹಿರಿಯೂರು
21.	24-11-2007	ಶರಣ(ಶನಿ)ವಾರ	ದೊಡ್ಡಉಳಾರ್ತಿ
22.	25-11-2007	ದೇವ(ಭಾನು)ವಾರ	ಚಳ್ಳಕೆರೆ
23.	26-11-2007	ಶಿವ(ಸೋಮ)ವಾರ	ಚಿತ್ರನಾಯಕನ ಹಳ್ಳಿ
24.	27-11-2007	ಬಸವ(ಮಂಗಳ)ವಾರ	ಬಳ್ಳಾರಿ
25.	28-11-2007	ಚನ್ನ(ಬುಧ)ವಾರ	,,
26.	29-11-2007	ಪ್ರಭು(ಗುರು)ವಾರ	ರಾಯಚೂರು
27.	30-11-2007	ಮಾತೃ(ಶುಕ್ರ)ವಾರ	ಶಕ್ತಿ ನಗರ
28.	1-11-2007	ಶರಣ(ಶನಿ)ವಾರ	ಗಂಗಾವತಿ
29.	2-12-2007	ದೇವ(ಭಾನು)ವಾರ	ಕೊಪ್ಪಳ
30.	3-12-2007	ಶಿವ(ಸೋಮ)ವಾರ	,,
31.	4-12-2007	ಬಸವ(ಮಂಗಳ)ವಾರ	,,
32.	5-12-2007	ಚನ್ನ(ಬುಧ)ವಾರ	ಹಾವೇರಿ

33.	6-12-2007	ಪ್ರಭು(ಗುರು)ವಾರ	ಹುಬ್ಬಳ್ಳಿ
34.	7-12-2007	ಮಾತೃ(ಶುಕ್ರ)ವಾರ	ಧಾರವಾಡ
35.	8-12-2007	ಶರಣ(ಶನಿ)ವಾರ	ಸವದತ್ತಿ
36.	9-12-2007	ದೇವ(ಭಾನು)ವಾರ	ಬೈಲಹೊಂಗಲ
37.	10-12-2007	ಶಿವ(ಸೋಮ)ವಾರ	ನೇಸರಗಿ
38.	11-12-2007	ಬಸವ(ಮಂಗಳ)ವಾರ	ಬೆಳಗಾವಿ
39.	12-12-2007	ಚನ್ನ(ಬುಧ)ವಾರ	ಬೆಳಗಾವಿ
40.	13-12-2007	ಪ್ರಭು(ಗುರು)ವಾರ	,,
41.	14-12-2007	ಮಾತೃ(ಶುಕ್ರ)ವಾರ	,,
42.	15-12-2007	ಶರಣ(ಶನಿ)ವಾರ	ಸಂಕೇಶ್ವರ
43.	16-12-2007	ದೇವ(ರವಿ)ವಾರ	ಗಡಿಹಿಂಗ್ಲಾಜ್
44.	17-12-2007	ಶಿವ(ಸೋಮ)ವಾರ	ಗೋಕಾಕ್
45.	18-12-2007	ಬಸವ(ಮಂಗಳ)ವಾರ	,,
46.	19-12-2007	ಚನ್ನ(ಬುಧ)ವಾರ	,,
47.	20-12-2007	ಪ್ರಭು(ಗುರು)ವಾರ	,,
48.	21-12-2007	ಮಾತೃ(ಶುಕ್ರ)ವಾರ	ಶೇಗುಣಸಿ
49.	22-12-2007	ಶರಣ(ಶನಿ)ವಾರ	ಕನಮಡಿ
50.	23-12-2007	ದೇವ(ರವಿ)ವಾರ	ಬಿಜಾಪುರ
51.	24-12-2007	ಶಿವ(ಸೋಮ)ವಾರ	ಭೀಮರಾಯನ ಗುಡಿ
52.	25-12-2007	ಬಸವ(ಮಂಗಳ)ವಾರ	ಗುಲಬರ್ಗಾ
53.	26-12-2007	ಚನ್ನ(ಬುಧ)ವಾರ	,,
54.	27-12-2007	ಪ್ರಭು(ಗುರು)ವಾರ	ಉದಗೀರ್
55.	28-12-2007	ಮಾತೃ(ಶುಕ್ರ)ವಾರ	ಯಲಮಾಮಿಡಿ
56.	29-12-2007	ಶರಣ(ಶನಿ)ವಾರ	ಬೀದರ್
57.	30-12-2007	ದೇವ(ರವಿ)ವಾರ	,,
58.	31-12-2007	ಶಿವ(ಸೋಮ)ವಾರ	ಜಹಿರಾಬಾದ್
59.	0 1-01-2008	ಬಸವ(ಮಂಗಳ)ವಾರ	ಹೈದ್ರಾಬಾದ್

60.	02-01-2008	ಚನ್ನ(ಬುಧ)ವಾರ	ಹೈದ್ರಾಬಾದ್
61.	03-01-2008	ಪ್ರಭು (ಗುರು)ವಾರ	”
62.	04-01-2008	ಮಾತೃ (ಶುಕ್ರ)ವಾರ	”
63.	05-01-2008	ಶರಣ (ಶನಿ)ವಾರ	”
64.	06-01-2008	ದೇವ (ರವಿ)ವಾರ	”
65.	07-01-2008	ಶಿವ (ಸೋಮ)ವಾರ	”
67.	08-01-2008	ಬಸವ (ಮಂಗಳ)ವಾರ	”
67.	09-01-2008	ಚನ್ನ(ಬುಧ)ವಾರ	”
68.	10-01-2008	ಪ್ರಭು(ಗುರು)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

ವಚನ ಮರುಚಿಂತನೆ

-ಶರಣ ಸಚ್ಚಿದಾನಂದ

ಸಸಿಯ ಮೇಲೆ ಸಾಗರವರಿದಂತಾಯಿತ್ತಯ್ಯ
ಆನಂದದಿಂದ ನಲಿನಲಿದಾಡುವೆ, ಆನಂದದಿಂದ ಕುಣಿಕುಣಿದಾಡುವೆ
ಲಿಂಗದೇವನ ಶರಣರು ಬಂದಡೆ
ಉಬ್ಬಿ ಕೊಬ್ಬಿ ಹರುಷದಲೋಲಾಡುವೆ!

ಈ ವಚನದ ಮೊದಲನೆಯ ಸಾಲಿನಲ್ಲಿ, ಡಾ. ಆರ್.ಸಿ. ಹಿರೇಮಠರವರು ಸಂಪಾದಿಸಿದ ಬಸವಣ್ಣನವರ ವಚನಗಳು ಪುಸ್ತಕದಲ್ಲಿ "**ಸಸಿಯ ಮೇಲೆ ಸಾಗರವರಿದಂತಾಯಿತಯ್ಯಾ**" ಎಂದು ಪ್ರಕಟಿಸಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿರುವ ವಚನಗಳಲ್ಲಿಯೂ ಹಾಗೆಯೆ ಇದ್ದು ಪಾಠಾಂತರದಲ್ಲಿ ಸಸಿಯ ಬದಲಿಗೆ 'ಸಾಸುವೆಯ' ಎನ್ನುವ ಶಬ್ದವೂ ಇದೆ. ಮಾತಾಜಿಯವರು ಸಂಪಾದಿಸಿದ ಬಸವ ವಚನ ದೀಪ್ತಿಯಲ್ಲಿ **ಸಾಸುವೆಯ ಮೇಲೆ ಸಾಗರವರಿದಂತಾಯಿತಯ್ಯ** ಎನ್ನುವದನ್ನೇ ಪರಿಗಣಿಸಿದ್ದಾರೆ. ಒಂದು ದಿನ ಈ ವಚನದ ಮೊದಲನೆಯ ಸಾಲಿನ ಬಗ್ಗೆ ಒಂದು ಹೊಸ ಆಲೋಚನೆ ನನಗೆ ಹೊಳೆಯಿತು. ಮೊದಲ ಸಾಲನ್ನು ಬಿಟ್ಟು ಮೂರೂ ಸಾಲುಗಳಲ್ಲಿ ಆನಂದ, ಹರ್ಷ ವ್ಯಕ್ತವಾಗಿದೆ. ಮೊದಲನೆಯ ಸಾಲಿನ ಅರ್ಥ ನೋಡಿದಾಗ, ಸಸಿಯ ಮೇಲಾಗಲಿ ಸಾಸುವೆಯ ಮೇಲಾಗಲಿ ಸಾಗರ ಹರಿದಾಗ ಅಲ್ಲಿ ಅವೆರಡಕ್ಕೂ ನಾಶವಿದೆ, ಕೊಚ್ಚಿಕೊಂಡು ಹೋಗುತ್ತವೆ. ಆದ್ದರಿಂದ **ಸಸಿಯ/ಸಾಸುವೆಯ ಮೇಲೆ** ಬದಲಿಗೆ '**ಶಶಿಯ ಕಂಡು ಸಾಗರ ಹರಿದಂತಾಯಿತ್ತಯ್ಯ**' ಎಂದಾದರೆ ತುಂಬಾ ಅರ್ಥಪೂರ್ಣವಾಗಿರುತ್ತದೆ ಎಂದು ನನಗನಿಸಿತು. ಏಕೆಂದರೆ "**ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯ**" ಎನ್ನುವ ಗುರು ಬಸವಣ್ಣನವರ ವಚನದಂತೆ ಶಶಿ(ಚಂದ್ರ)ಯನ್ನು ನೋಡಿ ಸಮುದ್ರಕ್ಕೆ ಆನಂದವಾಗಿ ಅದು ಉಕ್ಕುವಂತೆ, ಶರಣರನ್ನು ನೋಡಿ ನನ್ನಲ್ಲಿ ಹರ್ಷವು ಉಕ್ಕುತ್ತದೆ ಎಂದು ಗುರುಬಸವಣ್ಣನವರು ಹೇಳುತ್ತಿದ್ದಾರೆ ಎನ್ನುವುದು ನನ್ನ ಭಾವನೆ. ಈ ವಚನಗಳನ್ನು ಪಾಠಾಂತರ ಮಾಡುವಾಗ ಒಬ್ಬರು ಹೇಳುತ್ತ ಮತ್ತೊಬ್ಬರು ಬರೆಯುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ, ಕೆಲವರ ಉಚ್ಚಾರಣೆ ಸರಿಯಾಗಿರುವುದಿಲ್ಲ. ಸಸಿಯ, ಸಾಸುವೆಯ, ಶಶಿಯ ಎನ್ನುವ ಶಬ್ದಗಳ ಉಚ್ಚರಣೆಯಲ್ಲಿ ಸ್ವಲ್ಪಮಾತ್ರ ವ್ಯತ್ಯಾಸ ಇರುವುದರಿಂದ ಪಾಠಾಂತರ ಮಾಡುವಾಗ ದೋಷಗಳಾಗಿರಬಹುದು. ಅದಕ್ಕಾಗೆ **ಶಶಿಯ ಕಂಡು ಸಾಗರವರಿದಂತಾಯಿತ್ತಯ್ಯ** ಎನ್ನುವುದೇ ಅತ್ಯಂತ ಸೂಕ್ತ ಎಂದು ನನಗನಿಸಿತು. ಇದನ್ನು ಪೂಜ್ಯ ಮಾತಾಜಿಯವರ ಗಮನಕ್ಕೂ ತಂದೆ, ಪಾಠಾಂತರ ಹುಡುಕಿದರೆ ಸಿಗಲಿಲ್ಲ. ಕರ್ನಾಟಕ ವಿ.ವಿ.ಯಿಂದ ಹಿಂದಿಗೆ ಭಾಷಾಂತರಗೊಳಿಸಿದ ಗುರು ಬಸವಣ್ಣನವರ ವಚನಗಳ ಪುಸ್ತಕ ನೋಡಿದೆ ಅದರಲ್ಲಿ ಸಸಿಯ ಬದಲಿಗೆ ಚಂದ್ರಮ ಎಂದೇ ಇದೆ. ಆದ್ದರಿಂದ ಬ.ವ.ದೀಪ್ತಿಯ 378ನೇ ವಚದಲ್ಲಿ ಮೊದಲ ಸಾಲಿನಲ್ಲಿ '**ಸಾಸುವೆಯ ಮೇಲೆ ಸಾಗರವರಿದಂತಾಯಿತಯ್ಯ**' ಬದಲಿಗೆ '**ಶಶಿಯ ಕಂಡು ಸಾಗರವರಿದಂತಾಯಿತಯ್ಯ**' ಎಂದು ಬಳಸಿದರೆ ಸೂಕ್ತ ಎಂದು ನನಗನಿಸುತ್ತಿದೆ, ನೀವೇನಂತೀರಿ?



ಪ್ರಾರ್ಥನಾ ಸಭೆಯ ಉದ್ಘಾಟನೆ- ಸತ್ನಾಮ್ ಸಿಂಗ್ ಅವರಿಂದ









ಲಿಂಗಾಯಿತ ಧರ್ಮಕ್ಕೆ ಸಂವಿಧಾನ್ಮಕ ಮಾನ್ಯತೆ ನೀಡಬೇಕೆಂದು
ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಪ್ರತಿಭಟನಾ ಧರಣಿ.

CPMG/KA/BGW-50/2006-2008 WPP(W)-17 R.No.19980/70









ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನದ ವೇದಿಕೆಯಲ್ಲಿ ಪೂಜ್ಯ ಮಾತಾಜಿ, ಪೂಜ್ಯ ಸ್ವಾಮಿ ಅಗ್ನಿವೇಶ್, ಮತ್ತು ಗಣ್ಯರು.



ನವ ದೆಹಲಿಯ ಮಂಡಿ ಹೌಸ್‌ನಿಂದ ಜಂತರ್ ಮಂತರ್ ರಸ್ತೆಯವರೆಗೆ ಪಾದಯಾತ್ರೆ ಮತ್ತು ಪಥ ಸಂಚಲನ.